ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 15 । ಸಂಚಿಕೆ 9 । ಫೆಬ್ರವರಿ 22–28, 2021 । ಪುಟ 16 । ರೂ. 10

https://janashakthi.wordpress.com e-mail : js_weekly@yahoo.com



ಅವಿರತ ಬೆಲೆಯೇರಿಕೆಯ ಲೂಟಿ





ಟೂಲ್ ಕಿಟ್ ಎಫ್ಐಆರ್: ಬೆದರಿಕೆ ತಂತ್ರ



ಮ್ಯಾನ್ಮಾರ್: ಮಿಲಿಟರಿ ದಮನದ ವಿರುದ್ಧ ಜನತೆಯ ಆಕ್ರೋಶ



ಅನ್ನದಾತರ ದೇಶವ್ಯಾಪಿ ರೈಲ್ ರೋಕೋ: ಮೋದಿ ಸರ್ಕಾರಕ್ಕೆ ಎಚ್ಚರಿಕೆ



ಉಳ್ಳವರಿಗೆ ಕೊಡಲಾಗುವುದು!

ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಅಬಕಾರಿ ಸುಂಕ ಏರಿಕೆಗಳನ್ನು ಹಿಂತೆಗೆದುಕೊಳ್ಳಬೇಕು

ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಿಲದ ಬೆಲೆಯಲ್ಲಿ ಮತ್ತೊಂದು ಹೆಚ್ಚಳವನ್ನು ಮಾಡಿರುವುದನ್ನು ಸಿಪಿಐ (ಎಂ) ಪೊಲಿಟ್ ಬ್ಯೂರೋ ತೀವ್ರವಾಗಿ ಖಂಡಿಸಿದೆ. ಈ ಹೆಚ್ಚಳಗಳು ಅಂತರರಾಷ್ಟ್ರೀಯ ತೈಲ ಬೆಲೆಗಳು ಇಳಿದಿರುವ ಸಮಯದಲ್ಲಿ ಬಂದಿದೆ. 2014 ರಲ್ಲಿ ಪೆಟ್ರೋಲ್‌ನ ಮೂಲ ಬೆಲೆ ರೂ. 47.12 ಇತ್ತು. ಅದೀಗ 2021 ರಲ್ಲಿ ರೂ. 29.34, ಅಂದರೆ, ಸುಮಾರು 50 ಶೇಕಡಾ ದಷ್ಟು.

ಈ ಹೆಚ್ಚುತ್ತಿರುವ ಬೆಲೆಗಳಿಗೆ ಮುಖ್ಯ ಕಾರಣ ಕೇಂದ್ರ ಸರ್ಕಾರವು ಅಬಕಾರಿ ಸುಂಕವನ್ನು ಲಂಗುಲಗಾಮಿಲ್ಲದೆ ಏರಿಸಿದ್ದು, ಇದು ಇಂದು ಪೆಟ್ರೋಲ್ ವೆಚ್ಚದ ಶೇಕಡಾ 38 ರಷ್ಟಿದೆ. ಈ ಮೋದಿ ಸರ್ಕಾರ 2014 ರಲ್ಲಿ ಅಧಿಕಾರ ವಹಿಸಿಕೊಂಡ ನಂತರ ಕೇಂದ್ರವು ವಿಧಿಸುವ ತೆರಿಗೆ ಶೇಕಡಾ 217 ರಷ್ಟು ಭಾರೀ ಪ್ರಮಾಣದಲ್ಲಿ ಹೆಚ್ಚಾಗಿದೆ.

ಅಬಕಾರಿ ಸುಂಕಗಳಲ್ಲಿನ ಈ ಹೆಚ್ಚಳವು ಕಾರ್ಪೊರೇಟ್‌ಗಳು ಮತ್ತು ಆದಾಯ ತೆರಿಗೆ ಪಾವತಿದಾರರಿಗೆ ಒದಗಿಸಿರುವ ತೆರಿಗೆ ರಿಯಾಯಿತಿಗಳಿಂದಾಗಿ ಸರ್ಕಾರದ ಆದಾಯಕ್ಕೆ ಆಗುತ್ತಿರುವ ನಷ್ಟವನ್ನು ಭರ್ತಿ ಮಾಡಿಕೊಳ್ಳಲಿಕ್ಕಾಗಿ ಎಂಬುದು ಸ್ಪಷ್ಟ. ಕಾರ್ಪೊರೇಟ್ ಮತ್ತು ಆದಾಯ ತೆರಿಗೆ ಆದಾಯದಲ್ಲಿ ಕಳೆದ ವರ್ಷದ ಅನುಕ್ರಮವಾಗಿ 6.81 ಮತ್ತು 6.38 ಲಕ್ಷ ಕೋಟಿಗಳಿಂದ ಗಮನಾರ್ಹ ಇಳಿಕೆ ಕಂಡುಬಂದಿದೆ. ಅವು 2020–21ರ ಬಜೆಟ್‌ನಲ್ಲಿ ತೋರಿಸಿರುವಂತೆ ಅನುಕ್ರಮವಾಗಿ 5.47 ಮತ್ತು 5.61 ಲಕ್ಷ ಕೋಟಿ ರೂ.ಗಳಿಗೆ ಇಳಿದಿವೆ.

ಮೋದಿ ಸರ್ಕಾರ ಶ್ರೀಮಂತರು ಮತ್ತು ತಮ್ಮ ಬಂಟರಿಗೆ ಬಕ್ಷೀಸು ಕೊಡಲು ಈ ಅಬಕಾರಿ ಸುಂಕಗಳನ್ನು ಹೆಚ್ಚಿಸುವ ಮೂಲಕ ಪ್ರಯತ್ನಿಸುತ್ತಿದೆ. ಇದು ಕೊರೊನ ಮಹಾಸೋಂಕು ಮತ್ತು ಆರ್ಥಿಕ ಹಿಂಜರಿತದಿಂದ ತಮ್ಮ ಜೀವನೋಪಾಯದ ಮೇಲೆ ಈಗಾಗಲೇ ಇಬ್ಬಗೆಗಳ ದಾಳಿಯಿಂದ ನರಳುತ್ತಿರುವ ಜನರ ಮೇಲೆ ಮತ್ತಷ್ಟು ಹೊರೆಗಳನ್ನು ಹೇರುತ್ತಿದೆ.

ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳ ಹೆಚ್ಚಳವು ಸಾರಿಗೆ ವೆಚ್ಚಗಳು ಹೆಚ್ಚಲು ಕಾರಣವಾಗುತ್ತದೆ ಮತ್ತು ಇದು ಎಲ್ಲಾ ಅಗತ್ಯ ವಸ್ತುಗಳ ಬೆಲೆಗಳನ್ನು ಹೆಚ್ಚಿಸುತ್ತದೆ. ಇದರಿಂದ ಸರಣಿ–ಸರಣಿಯಾಗಿ ಏರುವ ಹಣದುಬ್ಬರದ ಪರಿಣಾಮವಾಗಿ ಆರ್ಥಿಕ ಹಿಂಜರಿತ ಇನ್ನಷ್ಟು ಹದಗೆಡುತ್ತದೆ.

ಆದ್ದರಿಂದ ಈ ಅಬಕಾರಿ ಸುಂಕಗಳನ್ನು ಕೇಂದ್ರ ಸರಕಾರ ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸಿ ದೇಶಾದ್ಯಂತ ಪ್ರತಿಭಟನಾ ಕಾರ್ಯಾಚರಣೆಗಳನ್ನು ಆಯೋಜಿಸಬೇಕು ಎಂದು ಸಿಪಿಐ (ಎಂ) ಪೊಲಿಟ್ ಬ್ಯುರೊ ತನ್ನ ಎಲ್ಲಾ ಘಟಕಗಳಿಗೆ ಕರೆ ನೀಡಿದೆ.

ಯುವ ಕ್ರಿಯಾಶೀಲರುಗಳಿಗೆ ಕಿರುಕುಳ ಕೊಡುವುದನ್ನು ನಿಲ್ಲಿಸಬೇಕು

ಮೋದಿ ಸರಕಾರಕ್ಕೆ ಸಿಪಿಐ(ಎಂ) ಪೊಲಿಟ್ ಬ್ಯುರೊ ಆಗ್ರಹ

ಬೆಂಗಳೂರಿನ ಒಬ್ಬ ಹವಾಮಾನ ಕಾರ್ಯಕರ್ತೆ ದಿಶಾ ರವಿಯನ್ನು ದಿಲ್ಲಿ ಪೋಲೀಸ್ ಬಂಧಿಸಿರುವುದು ಒಂದು ಹೇಯ ಕೃತ್ಯ, ಇದು ಅತ್ಯಂತ ಬಲವಾದ ಪದಗಳಲ್ಲಿ ಖಂಡನೆಗೆ ಅರ್ಹವಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಈ 22 ವರ್ಷ ವಯಸ್ಸಿನ ಕ್ರಿಯಾಶೀಲ ಕಾರ್ಯಕರ್ತೆ ರೈತ ಹೋರಾಟಕ್ಕೆ ಬೆಂಬಲವಾಗಿ ಒಂದು 'ಟೂಲ್ ಕಿಟ್'ನ್ನು ಫಾರ್ವರ್ಡ್ ಮಾಡಿದ್ದಾಳೆ ಎಂಬ ಅಸಂಬದ್ಧ ಆಧಾರದಲ್ಲಿ ಆಕೆಯ ಮೇಲೆ ದೇಶದ್ರೋಹದ ಮತ್ತು ಕ್ರಿಮಿನಲ್ ಪಿತೂರಿಯ ಆರೋಪವನ್ನು ಹಾಕಲಾಗಿದೆ.

ಸಂಶಯ ಪಿಶಾಚಿಯಾಗಿರುವ ಮೋದಿ ಸರಕಾರ ಯುವ ಕ್ರಿಯಾಶೀಲರುಗಳಿಗೆ ಕಿರುಕುಳ ಕೊಡುವುದನ್ನು ಕೊನೆಗೊಳಿಸಬೇಕು. ದಿಶಾ ರವಿಯ ವಿರುದ್ಧ ಹಾಕಿರುವ ಆರೋಪಗಳನ್ನು ಹಿಂದಕ್ಕೆ ಪಡೆಯಬೇಕು, ಆಕೆಯನ್ನು ಬಂಧನದಿಂದ ಬಿಡುಗಡೆ ಮಾಡಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಆಗ್ರಹಿಸಿದೆ.

ದಿಶಾ ರವಿ, ನವ್‌ದೀಪ್ ಕೌರ್, ಮಂದೀಪ್ ಪೂನಿಯ ಬಂಧನ; ನೂಸ್ ಕ್ಲಿಕ್ ಮೇಲೆ ಇ.ಡಿ. ದಾಳಿ

ಜನಗಳ ಹೋರಾಟಗಳನ್ನು ಬೆಂಬಲಿಸುವವರ ದನಿಗಳನ್ನು ಅಡಗಿಸುವ ಪ್ರಯತ್ನಗಳು–ಎಐಕೆಎಸ್

ರೈತರ ಹೋರಾಟವನ್ನು ಬೆಂಬಲಿಸಿದ್ದಕ್ಕೆ ಬೆಂಗಳೂರಿನ ಪರಿಸರ ಕಾರ್ಯಕರ್ತೆ 21 ವರ್ಷದ ದಿಶಾ ರವಿಯನ್ನು ಬಂಧಿಸಲಾಗಿದೆ. ಇದಕ್ಕೆ ಮೊದಲು ಪತ್ರಕರ್ತ ಮಂದೀಪ್ ಪೂನಿಯಾರನ್ನು ಇದೇ ಕಾರಣಕ್ಕೆ ಬಂಧಿಸಲಾಗಿತ್ತು. ದಲಿತ ಮತ್ತು ಕಾರ್ಮಿಕ ಹಕ್ಕುಗಳ ಕಾರ್ಯಕರ್ತೆ 23 ವರ್ಷದ ನವ್‌ದೀಪ್ ಕೌರ್‌ಳನ್ನು ಬಂಧಿಸಿ ಲೈಂಗಿಕ ಕಿರುಕುಳವನ್ನೂ ಕೊಡಲಾಗಿದೆ ಎಂದು ವರದಿಯಾಗಿದೆ. ಇದನ್ನು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಖಂಡಿಸಿದೆ.

ಇವೆಲ್ಲವೂ ರೈತರ ಹೋರಾಟವನ್ನು, ವಿವಿಧ ಜನಗಳ ಹೋರಾಟಗಳನ್ನು ಬೆಂಬಲಿಸುತ್ತಿರುವವರ ಅಥವ ಬಿಜೆಪಿ ಸರಕಾರದ ಧೋರಣೆಗಳಿಗೆ ಅಸಮ್ಮತಿ ವ್ಯಕ್ತಪಡಿಸುತ್ತಿರುವವರ ದನಿಯನ್ನು ಅಡಗಿಸುವ ಪ್ರಯತ್ನ ನಡೆಯುತ್ತಿದೆ ಎಂಬುದನ್ನು ತೋರಿಸುತ್ತಿದೆ ಎಂದು ಅದು ಹೇಳಿದೆ. ಇಂತಹ ಸರ್ವಾಧಿಕಾರಶಾಹೀ ಕ್ರಮಗಳನ್ನು ಪ್ರತಿರೋಧಿಸಬೇಕು ಎಂದಿರುವ ಅದು ದಿಶಾ ರವಿ ಮತ್ತು ನವ್‌ದೀಪ್ ಕೌರ್‌ರನ್ನು ಕೂಡಲೇ ಬೇಷರತ್ತಾಗಿ ಬಿಡುಗಡೆ ಮಾಡಬೇಕು, ಪೋಲಿಸ್ ಕಸ್ಟಡಿಯಲ್ಲಿ ಕೌರ್ ಮೇಲೆ ಲೈಂಗಿಕ ಕಿರುಕುಳದ ಆರೋಪದ ಬಗ್ಗೆ ಒಂದು ನ್ಯಾಯಯುತ ವಿಚಾರಣೆ ನಡೆಸಬೇಕು ಎಂದು ಆಗ್ರಹಿಸಿದೆ.

ಬೃಹತ್ ಸ್ವರೂಪದ ಮತ್ತು ಶಾಂತಿಯುತವಾದ ರೈತರ ಹೋರಾಟ ಭಾರತದಾದ್ಯಂತ ಮತ್ತು ವಿದೇಶಗಳಲ್ಲೂ ಕೋಟ್ಯಂತರ ಶ್ರಮಜೀವಿಗಳ ಮನದಲ್ಲಿ ವಿಶ್ವಾಸವನ್ನು ಆತ್ಮವಿಶ್ವಾಸವನ್ನು ಮೂಡಿಸಿದೆ. ಮೋದಿ ಸರಕಾರ ರೈತರ ಮತ್ತು ಇತರ ಜನಗಳ ಹೋರಾಟಗಳನ್ನು ಬೆಂಬಲಿಸುವ ವ್ಯಕ್ತಿಗಳ ಹಕ್ಕುಗಳನ್ನು ಮೊಟಕುಗೊಳಿಸಲು, ಅವರನ್ನು ಬೆದರಿಸುವ ನಾಚಿಕೆಗೆಟ್ಟ ಪ್ರಯತ್ನಗಳನ್ನು ನಡೆಸಿದೆ ಎಂಬುದು ಅವರ ಮೇಲೆ ಸುಳ್ಳು ಕೇಸುಗಳನ್ನು ಹಾಕಿ, ಬಂಧಿಸುತ್ತಿರುವುದರಿಂದ ವೇದ್ಯವಾಗುತ್ತಿದೆ ಎಂದು ಎಐಕೆಎಸ್ ಅಭಿಪ್ರಾಯ ಪಟ್ಟಿದೆ. ಸಕ್ರಿಯ ಕಾರ್ಯಕರ್ತರುಗಳ ಟ್ವಿಟರ್ ಹ್ಯಾಂಡಲುಗಳು, ಫೇಸ್ ಬುಕ್ ಪುಟಗಳು ಮತ್ತಿತರ ಸಾಮಾಜಿಕ ಮಾಧ್ಯಮ ಅಕೌಂಟುಗಳನ್ನು ನಿಷೇಧಿಸುವ ಅಭೂತಪೂರ್ವ ಕ್ರಮಗಳನ್ನು ಕೈಗೊಳ್ಳುತ್ತಿದೆ.

ನ್ಯೂಸ್‌ಕ್ಲಿಕ್ ಮೇಲೆ ಇತ್ತೀಚಿನ ಜಾರಿ ನಿರ್ದೇಶನಾಲಯದ ದಾಳಿಗಳು ಮತ್ತು ಇದಕ್ಕೆ ಮೊದಲು ಹಿರಿಯ ಪತ್ರಕರ್ತರುಗಳು ಮತ್ತು ರಾಜಕಾರಣಿಗಳ ಮೇಲೆ ರಾಜದ್ರೋಹದ ಕೇಸುಗಳನ್ನು ಹೇರಿರುವುದನ್ನು ಒಪ್ಪಲು ಸಾಧ್ಯವಿಲ್ಲ. ರಾಜಕೀಯ ಮುಖಂಡರು ಮತ್ತು ಸಂಸದ್ ಸದಸ್ಯರನ್ನು ಸರಿಯಾದ ಕಾರಣಗಳನ್ನು ಕೊಡದೆ ಗೃಹಬಂಧನದಲ್ಲಿಡುವುದು ಮುಂತಾದ ಹಗೆಸಾಧಕ ಕ್ರಮಗಳಿಗೆ ಈ ಬಿಜೆಪಿ ಸರಕಾರ ಕೈಹಾಕಿದೆ. ಇದು ತುರ್ತು ಪರಿಸ್ಥಿತಿಯ ದಿನಗಳನ್ನು ನೆನಪಿಸುತ್ತಿದೆ. ಬಿಜೆಪಿ ಸರಕಾರ ವಸಾಹತುಶಾಹೀ ಆಳರಸರ ಸರ್ವಾಧಿಕಾರಶಾಹೀ ಕ್ರಮಗಳನ್ನು ಅನುಸರಿಸುತ್ತಿದೆ ಎಂದು ಎಐಕೆಎಸ್ ಖೇದ ವ್ಯಕ್ತಪಡಿಸಿದೆ.

ಎಲ್ಲ ವರ್ಗ ಮತ್ತು ಸಮೂಹ ಸಂಘಟನೆಗಳು, ರಾಜಕೀಯ ಪಕ್ಷಗಳು ಮತ್ತು ಪ್ರಜಾಪ್ರಭುತ್ವವಾದೀ ಶಕ್ತಿಗಳು ಒಂದಾಗಿ ಈ ದಾಳಿಯನ್ನು ಪ್ರತಿರೋಧಿಸಬೇಕು ಮತ್ತು ಸರ್ವಾಧಿಕಾರಶಾಹೀ ಆಳ್ವಿಕೆಯ ವಿರುದ್ಧ ಪ್ರತಿಭಟನೆಗಳನ್ನು, ಭಿನ್ನ ಮತವನ್ನು ವ್ಯಕ್ತಪಡಿಸುವವರನ್ನು ಬೆಂಬಲಿಸಬೇಕು ಎಂದು ಎಐಕೆಎಸ್ ಕರೆ ನೀಡಿದೆ.

ದಿಶಾ ರವಿ ಕಸ್ಟಡಿಗೆ ವ್ಯಾಪಕ ಅಸಮ್ಮತಿ

'ಟೂಲ್‌ಕಿಟ್'ನಲ್ಲಿ ಅಪರಾಧವೆನಿಸುವ ಒಂದು ಸಾಲನ್ನು ತೋರಿಸಬಲ್ಲಿರಾ?"

ರೈತರ ಪ್ರತಿಭಟನೆಗೆ ಸಂಬಂಧಿಸಿದ ಸಾಮಾಜಿಕ ಮಾಧ್ಯಮದಲ್ಲಿ "ಟೂಲ್ ಕಿಟ್" ರಚಿಸುವಲ್ಲಿ ಮತ್ತು ಹಂಚಿಕೊಳ್ಳುವಲ್ಲಿ ಭಾಗಿಯಾಗಿದ್ದಕ್ಕಾಗಿ 22 ವರ್ಷದ ಹವಾಮಾನ ಕಾರ್ಯಕರ್ತೆ ದಿಶಾ ರವಿಯನ್ನು ಐದು ದಿನಗಳ ಪೊಲೀಸ್ ಕಸ್ಟಡಿಗೆ ಕಳುಹಿಸುವ ದಿಲ್ಲಿ ನ್ಯಾಯಾಲಯದ ನಿರ್ಧಾರದ ಬಗ್ಗೆ ಕಾನೂನು ತಜ್ಞರು ಪ್ರಶ್ನೆಗಳನ್ನು ಎತ್ತಿದ್ದಾರೆ. "ಪರಿಸರ ನ್ಯಾಯದ ಮೈತ್ರಿಕೂಟ" (ಸಿ.ಇ.ಜೆ.) ಕೂಡಾ ಇದನ್ನು ಖಂಡಿಸಿದೆ. ಹಿರಿಯ ವಕೀಲೆ ರೆಬೆಕಾ ಜಾನ್, ಮ್ಯಾಜಿಸ್ಟ್ರೇಟ್ ಆದೇಶವು ಆಘಾತಕಾರೀ ರೀತಿಯಲ್ಲಿ ನ್ಯಾಯಾಂಗ ಕರ್ತವ್ಯಗಳನ್ನು ಕೈಬಿಟ್ಟಿದೆ ಎಂದು ಹೇಳಿದ್ದಾರೆ.

ಈ ನಡುವೆ ದಿಲ್ಲಿ ಪೋಲೀಸ್ ತಮ್ಮ ವಿಚಾರಣೆಗೆ ಮುಂಬೈಯ ವಕೀಲರಾದ ನಿಕಿತಾ ಜೇಕಬ್ ಮತ್ತೊಬ್ಬ ಹವಾಮಾನ ನ್ಯಾಯ ಕಾರ್ಯಕರ್ತ ಶಂತನು ಎಂಬವರ ವಿರುದ್ಧ ಜಾಮೀನುರಹಿತ ವಾರಂಟ್ ಪಡೆದಿದ್ದಾರೆ ಎಂದು ವರದಿಯಾಗಿದೆ.

ಸ್ವೀಡಿಷ್ ಹವಾಮಾನ ಕಾರ್ಯಕರ್ತೆ ಗ್ರೇಟಾ ಥನ್ಬರ್ಗ್ ಹಂಚಿಕೊಂಡ ಈ "ಟೂಲ್‌ಕಿಟ್"ಗೆ ಸಂಬಂಧಿಸಿದಂತೆ ದಿಲ್ಲಿ ಪೊಲೀಸ್‌ನ ಸೈಬರ್ ಸೆಲ್ ಫೆಬ್ರುವರಿ 14ರಂದು ದಿಶಾ ಅವರನ್ನು ದಿಲ್ಲಿ ನ್ಯಾಯಾಲಯಕ್ಕೆ ಹಾಜರುಪಡಿಸಿ ಆಕೆಯ ಏಳು ದಿನಗಳ ಕಸ್ಟಡಿಗೆ ಕೋರಿತ್ತು. ದಿಲ್ಲಿ ಪಾಟಿಯಾಲ ಹೌಸ್ ಡ್ಯೂಟಿ ಮ್ಯಾಜಿಸ್ಟ್ರೇಟ್ ಐದು ದಿನಗಳ ಕಾಲ ಅವಳನ್ನು ಪ್ರಶ್ನಿಸಲು ಪೊಲೀಸರಿಗೆ ಅವಕಾಶ ನೀಡಿದರು.

ವಿಚಾರಣೆಯ ಸಮಯದಲ್ಲಿ, ದಿಶಾ ತಾನು ಟೂಲ್‌ಕಿಟ್‌ನ ಎರಡು ಸಾಲುಗಳನ್ನು ಮಾತ್ರ ಎಡಿಟ್ ಮಾಡಿದ್ದು, ರೈತರ ಪ್ರತಿಭಟನೆಯನ್ನು ಬೆಂಬಲಿಸ ಬಯಸುತ್ತೇನೆ ಎಂದು ಹೇಳಿರುವುದಾಗಿ ವರದಿಯಾಗಿದೆ.

"ನ್ಯಾಯಾಧೀಶರು ತಮ್ಮ ರಿಮಾಂಡ್ ಕರ್ತವ್ಯಗಳನ್ನು ಗಂಭೀರವಾಗಿ ಪರಿಗಣಿಸಬೇಕು ಮತ್ತು ಸಂವಿಧಾನದ 22 ನೇ ಪರಿಚ್ಛೇದದ ಆದೇಶವನ್ನು ಸೂಕ್ಷ್ಮವಾಗಿ ಅನುಸರಿಸಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಬೇಕು. ವಿಚಾರಣೆಯ ಸಮಯದಲ್ಲಿ ಆರೋಪಿಗಳನ್ನು ವಕೀಲರು ಪ್ರತಿನಿಧಿಸದಿದ್ದರೆ, ಮ್ಯಾಜಿಸ್ಟ್ರೇಟ್ ಅವರ ಸಲಹೆ ಬರುವ ವರೆಗೆ ಅಥವಾ ಪರ್ಯಾಯವಾಗಿ, ಅವರಿಗೆ ಕಾನೂನು ನೆರವು ನೀಡುವವರೆಗೂ ಕಾಯಬೇಕಾಗಿತ್ತು "ಎಂದು ವಕೀಲೆ ರೆಬೆಕಾ ಜಾನ್ ಹೇಳುತ್ತಾರೆ.

ಬೆಂಗಳೂರು ನ್ಯಾಯಾಲಯಗಳಿಂದ ಟ್ರಾನ್ಸಿಟ್ (ಕರೆದೊಯ್ಯುವ) ರಿಮಾಂಡ್ ಇಲ್ಲದೆ ದಿಶಾಳನ್ನು ಬೆಂಗಳೂರಿನಿಂದ ದಿಲ್ಲಿಯಲ್ಲಿ ಏಕೆ ಹಾಜರು ಪಡಿಸಲಾಗಿದೆ ಎಂದು ಡ್ಯೂಟಿ ಮ್ಯಾಜಿಸ್ಟ್ರೇಟ್ ದಿಲ್ಲಿ ಪೋಲಿಸ್‌ನ ವಿಶೇಷ ಸೆಲ್‌ನ್ನು ಕೇಳಿದರೇ? ಎಂದು ಪ್ರಶ್ನಿಸಿರುವ ರೆಬೆಕಾ ಜಾನ್, ಭಾನುವಾರದಂದು ಕರ್ತವ್ಯ ನಿಭಾಯಿಸುವ ಡ್ಯೂಟಿ ಮ್ಯಾಜಿಸ್ಟ್ರೇಟ್ ಹೆಚ್ಚೆಂದರೆ ಒಂದು ದಿನಕ್ಕೆ ರಿಮ್ಯಾಂಡ್ ಕೊಟ್ಟು ಸಾಮಾನ್ಯ ನ್ಯಾಯಾಲಯವು ಮರುದಿನ ಈ ವಿಷಯವನ್ನು ಕೈಗೆತ್ತಿಕೊಳ್ಳುವಂತೆ ಮಾಡಬೇಕು, ಆರೋಪಿಯನ್ನು ಐದು ದಿನಗಳ ಪೊಲೀಸ್ ಕಸ್ಟಡಿಗೆ ಕಳುಹಿಸಬಾರದು ಎಂದು ಅವರು ಅಭಿಪ್ರಾಯ ಪಡುತ್ತಾರೆ.

ಇನ್ನೊಬ್ಬ ಹಿರಿಯ ವಕೀಲ ಸೌರಭ್ ಕಿರ್ಪಾಲ್ **ಮಾತೆತ್ತಿದರೆ ಜನಗಳನ್ನು ಬಂಧಿಸುವ ಈ ಪರಿ ಏಕೆ** ಎಂದು ಕೇಳುತ್ತಾರೆ. "ಯಾರಾದರೂ ತಪ್ಪಿತಸ್ಥರಾಗಿದ್ದರೆ, ಅವರನ್ನು ವಿಚಾರಣೆಗೆ ಒಳಪಡಿಸಿ ಶಿಕ್ಷಿಸಿ. ವಿಚಾರಣೆಗೆ ಮುಂಚಿನ ಬಂಧನ (ಶಿಕ್ಷೆಗೆ ಬದಲಿಯಾಗಿ) ತನಿಖೆ ನಡೆಸುವ ಪೊಲೀಸರ ಜವಾಬ್ದಾರಿಯನ್ನು ಕೈಬಿಟ್ಟಂತಾಗುತ್ತದೆ. ಇದು ನಾಗರಿಕರಾಗಿ ನಮ್ಮನ್ನು ನಿಶ್ಚೇಷ್ಟಿತಗೊಳಿಸುತ್ತದೆ "ಎಂದು ಅವರು ಟ್ವೀಟ್ ಮಾಡಿದ್ದಾರೆ.

ಸುಪ್ರೀಂ ಕೋರ್ಟ್‌ನ ಇನ್ನೊಬ್ಬರು ಪ್ರಖ್ಯಾತ ವಕೀಲ ಪ್ರಶಾಂತ್ ಭೂಷಣ್ ಅವರು ದಿಶಾ ಬಂಧನವನ್ನು "ಕಾನೂನುಬಾಹಿರ ಮತ್ತು ದುರುದ್ದೇಶದ್ದು" ಎಂದಿದ್ದಾರೆ. ಅವರು ಸಂಚಾಲಕರಾಗಿರುವ "ನ್ಯಾಯಾಂಗ ಹೊಣೆಗಾರಿಕೆ ಮತ್ತು ಸುಧಾರಣೆ ಅಭಿಯಾನ" ಕೂಡ ತನ್ನ ಹೇಳಿಕೆಯಲ್ಲಿ ಈ "ಬಂಧನ" ಭಾರತೀಯ ದಂಡ ಸಂಹಿತೆ(ಐಪಿಸಿ) ಮತ್ತು ಸಂವಿಧಾನದಲ್ಲಿ ವಿಧಿಸಿರುವ ಕಾರ್ಯವಿಧಾನಗಳ ಉಲ್ಲಂಘನೆಯಾಗಿದೆ ಎಂದು ಅಭಿಪ್ರಾಯ ಪಟ್ಟಿದೆ. "**ದಿಲ್ಲಿ ಪೊಲೀಸರ ಇಂತಹ ಕಾನೂನುಬಾಹಿರ ಕ್ರಮಗಳು ಕಾನೂನಿನ ನೆಪದಲ್ಲಿ ಅಪಹರಣವಾಗುತ್ತದೆ**" ಎಂದು ಹೇಳಿಕೆ ತಿಳಿಸಿದೆ.

"ಪರಿಸರ ನ್ಯಾಯದ ಮೈತ್ರಿಕೂಟ" ಕೂಡ ಇದು "ನ್ಯಾಯಬಾಹಿರ ಅಪಹರಣವಾಗುತ್ತದೆ" ಎಂದಿದೆ.

ಡ್ಯೂಟಿ ಮ್ಯಾಜಿಸ್ಟ್ರೇಟ್ ಅವರ ಕರ್ತವ್ಯವನ್ನು ಯಾಂತ್ರಿಕ ರೀತಿಯಲ್ಲಿ ನಿರ್ವಹಿಸಿದ್ದಾರೆ, ಇದರಿಂದ ಮಾನವ ಹಕ್ಕುಗಳ ಗಂಭೀರ ಉಲ್ಲಂಘನೆಯಾಗಿದೆ. ದಿಶಾ ರವಿಯನ್ನು ತಕ್ಷಣ ಬಿಡುಗಡೆ ಮಾಡಿ ಡ್ಯೂಟಿ ಮ್ಯಾಜಿಸ್ಟ್ರೇಟ್ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕೆಂದು ಅದು ಕರೆ ನೀಡಿದೆ.

"ಟೂಲ್‌ಕಿಟ್" ಎನ್ನುವುದು ಯಾವುದೇ ಪ್ರಶ್ನೆಯನ್ನು ವಿವರಿಸಲು ರಚಿಸಲಾದ ದಸ್ತಾವೇಜು. ಸಮಸ್ಯೆಯನ್ನು ಪರಿಹರಿಸಲು ಏನು ಮಾಡಬೇಕೆಂಬುದರ ಬಗ್ಗೆಯೂ ಇದು ಮಾಹಿತಿಯನ್ನು ಒದಗಿಸುತ್ತದೆ. ಇದು ಅರ್ಜಿಗಳ ಬಗ್ಗೆ ಮಾಹಿತಿ, ಪ್ರತಿಭಟನೆಗಳ ಬಗ್ಗೆ ವಿವರಗಳು ಮತ್ತು ಸಾಮೂಹಿಕ ಚಳುವಳಿಗಳನ್ನು ಒಳಗೊಂಡಿರಬಹುದು.

ವಿವಿಧ ವರದಿಗಳ ಪ್ರಕಾರ, ದಿಶಾ ರವಿ ರೈತರ ಪ್ರತಿಭಟನೆಗಳಿಗೆ ಸಂಬಂಧಿಸಿದ ಟೂಲ್‌ಕಿಟ್‌ನ ಸಂಪಾದಕರಲ್ಲಿ ಒಬ್ಬರು ಮತ್ತು ಒಬ್ಬ 'ಪ್ರಮುಖ ಪಿತೂರಿಗಾರರು' ಎಂದು ಭಾವಿಸಿರುವ ದಿಲ್ಲಿ ಪೊಲೀಸರು, ತಾವು ಭಾರತ ಸರ್ಕಾರದ ವಿರುದ್ಧ ನಡೆದಿರುವ ಈ ಪಿತೂರಿಯ ಮತ್ತು ಖಲಿಸ್ತಾನ್ ಆಂದೋಲನಕ್ಕೆ ಸಂಬಂಧಿಸಿದಂತೆ ಆಕೆಯ ಪಾತ್ರದ ತನಿಖೆಗೆ ಆಕೆಯನ್ನು ಕಸ್ಟಡಿಗೆ ತೆಗೆದುಕೊಂಡಿರುವುದಾಗಿ ಹೇಳುತ್ತಾರೆ.

ಬಿ.ಬಿ.ಎ. ಪದವೀಧರರಾಗಿರುವ ದಿಶಾ ರವಿ, ಹವಾಮಾನ ನ್ಯಾಯಕ್ಕಾಗಿ ಆಂದೋಲನ ನಡೆಸುವ 'ಫ್ರೈಡೇಸ್ ಫಾರ್ ಫ್ಯೂಚರ್ ಇಂಡಿಯಾ' ಎಂಬ ಗುಂಪಿನ ಸ್ಥಾಪಕ ಸದಸ್ಯರಲ್ಲಿ ಒಬ್ಬರು ಎನ್ನಲಾಗಿದೆ.

"ಈ ಟೂಲ್‌ಕಿಟ್ ನ ನಿಮ್ಮಲ್ಲಿರುವ ಯಾವುದೇ ಆವೃತ್ತಿಯಲ್ಲಿ ಯಾವ ಸಾಲು ಒಂದು ಅಪರಾಧವಾಗುತ್ತದೆ ಎಂದು ನಮಗೆ ಹೇಳಬಲ್ಲಿರಾ?" ಎಂದು ಖಾರವಾಗಿ ಪ್ರಶ್ನಿಸಿರುವ ಹಿರಿಯ ಸುಪ್ರೀಂ ಕೋರ್ಟ್ ವಕೀಲ ಕೊಲಿನ್ ಗೊನ್ಸಾಲ್ವೆಸ್ ಇದು ನಾಚಿಕೆಗೇಡಿನ ಸಂಗತಿ, ಇಲ್ಲಿ ಯಾವ ಅಪರಾಧವೇ ನಡೆದಿಲ್ಲದಿರುವಾಗ ಹೆದರಬೇಕಾಗಿಲ್ಲ, ದೇಶದ ಯುವಜನರು ಈ ಸವಾಲನ್ನು, ಸರಕಾರೀ ಭಯೋತ್ಪಾದನೆಯನ್ನು ಎದುರಿಸಲು ಒಂದು ಅವಕಾಶವಾಗಿ ತೆಗೆದುಕೊಳ್ಳಬೇಕು ಎಂದು ಅವರು ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

ಸಂಪಾದಕೀಯ

ಉಳ್ಳವರಿಗೇ ಕೊಡಲಾಗುವುದು !

ರಾಜ್ಯದಲ್ಲಿ ಮೀಸಲಾತಿಗಾಗಿ ಬಹುತೇಕವಾಗಿ ಸವರ್ಣೀಯರು ನಡೆಸುತ್ತಿರುವ ಮೇಲಾಟ ಅಪಾಯದ ಹಂತಕ್ಕೆ ಹೊಗುತ್ತಿರುವಂತೆ ಭಾಸವಾಗುತ್ತದೆ. ಜನತೆ ತನ್ನ ಏಕ್ಯತೆಯನ್ನು ಗಟ್ಟಿಗೊಳಿಸಿ ಕೊಳ್ಳಬೇಕಾಗಿದ್ದ ಕಾಲಘಟ್ಟಲ್ಲಿ, ಒಡಕಿನತ್ತ ಸಾಗುತ್ತಿರುವುದು ಆತಂಕದ ಬೆಳವಣಿಗೆಯಾಗಿದೆ. ಡಾ| ಬಾಬಾ ಸಾಹೇಬ್ ಒಮ್ಮೆ ಹೇಳಿದ್ದರು: "ಈ ಶ್ರೇಣೀಕೃತ ಜಾತಿ ಪದ್ಧತಿ ಶ್ರಮವನ್ನು ಮಾತ್ರವಲ್ಲ ಶ್ರಮಿಕರನ್ನೂ ವಿಭಜಿಸುತ್ತದೆ". ಬಸವಣ್ಣನ ಕಲ್ಯಾಣವನ್ನು ನಮ್ಮ ಕಣ್ಮುಂದೆ ಇಟ್ಟುಕೊಂಡವರು ನಾವು. ಸಮಾಜದ ಕಟ್ಟಕಡೆಯ ನಮ್ಮ ಬಂಧುಗಳನ್ನು ಮೇಲೆತ್ತಲು ಶ್ರಮಿಸಬೇಕಾದ ನಾವು ನಮ್ಮ ಪಾಲನ್ನು ಪಡೆಯಲು ಅವಕಾಶ ವಂಚಿತರನ್ನು ತುಳಿಯುತ್ತಿದ್ದೇವೆ. ಶತಮಾನಗಳಿಂದ ನಾವು ತುಳಿದ ಜನಗಳು ನಮಗೆ ಕಾಣುವುದೇ ಇಲ್ಲ. ನಾವು ಈಗ ಪಂಚಾಮಸಾಲಿ, ನಾವು ಕುರುಬ, ನಾವು ವಾಲ್ಮೀಕಿ ಆಗಿದ್ದೇವೆ. ಪಾದಯಾತ್ರೆಗಳೆಂಬ ದಂಡಯಾತ್ರೆಗಳಲ್ಲಿ ಮುಳುಗಿದ್ದೇವೆ. ಬಿಜೆಪಿ ಹೈಕಮಾಂಡ್ ಮೇಲೆ ಯಾರು ಹೆಚ್ಚು ಪ್ರಭಾವ ಬೀರುತ್ತಾರೆ, ಆರೆಸ್ಸೆಸ್ ನಾಯಕರನ್ನು ಯಾರು ಹೆಚ್ಚು ಒಲಿಸಿಕೊಳ್ಳುತ್ತಾರೆ ಎಂಬ ಸ್ಪರ್ಧೆಯಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ಸಂಘದ ನಾಯಕರು ಇದೊಂದು ಒಳ್ಳೆಯ ಅವಕಾಶ ಎಂದು ಅಂದುಕೊಂಡಿರುತ್ತಾರೆ. ಒಡೆದು ಆಳುವ ನೀತಿಯನ್ನು ಅವರು ಬಿಳಿಯರಿಂದ ಕರಗತ ಮಾಡಿಕೊಂಡಿದ್ದಾರೆ. ದೇಶದಲ್ಲಿ ಕಾರ್ಪೊರೇಟೀಕರಣದ ಹಾದಿಯನ್ನು ಅವರು ಕೇಂದ್ರದಲ್ಲಿ ಮತ್ತು ಕರ್ನಾಟಕ ರಾಜ್ಯದಲ್ಲಿ ಸುಗಮಗೊಳಿಸಲು ಹೆಣಗುತ್ತಿರುವಾಗ, ದೇಶದ ಕಾರ್ಮಿಕರು, ರೈತರು ಎರಡನೇ ಸ್ವಾತಂತ್ರ್ಯ ಸಮರದತ್ತ ಹೆಜ್ಜೆಹಾಕುತ್ತಿರುವಾಗ, ಅವರ ಹಾದಿ ತಪ್ಪಿಸಲು, ಅವರ ಗಮನ ಬೇರೆಕಡೆಗೆ ಸೆಳೆದು ಕಾರ್ಪೊರೇಟ್ ಕಂಪೆನಿಗಳಿಂದ ಪ್ರಾಯೋಜಿತ ಕಾನೂನುಗಳನ್ನು ತರಾತುರಿಯಲ್ಲಿ ಅನುಷ್ಠಾನಗೊಳಿಸಲು ಇದೇ ಒಳ್ಳೆಯ ಸಮಯ ಎಂದುಕೊಂಡಿದ್ದಾರೆ. ಮೀಸಲಾತಿಗಾಗಿ ಹೋರಟಿರುವ ಜಾತಿ ನಾಯಕರಿಗೆ ಇದು ಅರ್ಥವಾಗದಿರುವುದು ಖೇದದ ಸಂಗತಿ.

ನಮ್ಮ ಸಂವಿಧಾನ ಪ್ರತಿಪಾದಿಸುವ ಮೀಸಲಾತಿ ಸಾಮಾಜಿಕ ನ್ಯಾಯಕ್ಕಾಗಿ. ಶತಮಾನಗಳಿಂದ ಅವಕಾಶ ವಂಚಿತರಾಗಿ ಉಳಿದ ನಮ್ಮ ಅವರ್ಣೀಯ ಬಂಧುಗಳು ನಮ್ಮ ಸಂವಿಧಾನ ಘೋಷಿಸಿರುವ ಸಮಾನತೆಯನ್ನು ಸಾಧಿಸಬೇಕಾದರೆ ಅವರಿಗೆ ಶಿಕ್ಷಣ ರಂಗದಲ್ಲಿ ಮತ್ತು ಉದ್ಯೋಗರಂಗದಲ್ಲಿ ಮೀಸಲಾತಿ ನೀಡಬೇಕಾಗಿದೆ. ಮೀಸಲಾತಿ ಒಂದರಿಂದ ಅವರಿಗೆ ಸಂಪೂರ್ಣ ನ್ಯಾಯ ಸಿಗಲಾರದು. ಮೀಸಲಾತಿ ಒಂದು ತಾತ್ಕಾಲಿಕ ಪರಿಹಾರ ಮಾತ್ರ. ಈ ಶ್ರೇಣೀಕೃತ ಸಮಾಜ ವ್ಯವಸ್ಥೆಯಲ್ಲಿ ದಲಿತರಿಗೆ, ಅಸ್ಪೃಶ್ಯರೆಂದೆನಿಸಿಕೊಂಡವರಿಗೆ ಮೀಸಲಾತಿ ಒಂದೆ ಪರಿಹಾರವಲ್ಲ. ಅಂತಹ ಸೀಮಿತ ಹಕ್ಕನ್ನು ಅನುಭವಿಸಲು ಸವರ್ಣೀಯರು ಬಿಡಲಾರರು ಎಂಬುದಕ್ಕೆ ಇತಿಹಾಸವೇ ಸಾಕ್ಷಿ ಒದಗಿಸುತ್ತದೆ. ಅಸ್ಪೃಶ್ಯತಾ ಆಚರಣೆಗಳಿಂದ ನಮ್ಮ ದಲಿತ ಬಂಧುಗಳು ನೊಂದಿದ್ದಾರೆ, ಬೆಂದಿದ್ದಾರೆ. ಅವರ ಮೇಲೆ ಸವರ್ಣೀಯರ ದೌರ್ಜನ್ಯ ನಡೆಯುತ್ತಲೇ ಇದೆ. ಅವರ ಮಹಿಳೆಯರಿಗೆ ರಕ್ಷಣೆ ಇಲ್ಲ. ಅವರ ಮಕ್ಕಳಿಗೆ ಶಿಕ್ಷಣ ಇಲ್ಲ. ಅವರಿಗೆ ಗುಣಮಟ್ಟದ ವೈದ್ಯಕೀಯ ಚಿಕಿತ್ಸೆ ದೊರೆಯುವುದಿಲ್ಲ. ದೇವರಿಗೆ ಪೂಜೆಸಲ್ಲಿಸಲು ಬಯಸುವ ದಲಿತರಿಗೆ ದೇವಸ್ಥಾನದೊಳಕ್ಕೆ ಪ್ರವೇಶವಿಲ್ಲ. ಸಾರ್ವಜನಿಕ ಕೆರೆ, ಭಾವಿಗಳಿಗೆ ಹೋಗಿ ಅವರು ನೀರು ತರುವಂತಿಲ್ಲ. ದಲಿತ ಯುವಕರು ಶುಭ್ರವಾದ ಬಟ್ಟೆ ಧರಿಸುವಂತಿಲ್ಲ. ದ್ವಿಚಕ್ರ ವಾಹನ ಚಲಿಸುವಂತಿಲ್ಲ. ಸವರ್ಣೀಯರ ಮಕ್ಕಳೊಂದಿಗೆ ಅವರು ವಿವಾಹ ಮಾಡಿಕೊಳ್ಳುವಂತಿಲ್ಲ. ಇದು ನ್ಯಾಯವೇ? ಇಂತಹ ಸಮಾಜ ಬದುಕಲು ಯೋಗ್ಯವೆ?

ಮೀಸಲಾತಿಗಾಗಿ ಸಮರಕ್ಕೆ ಹೊರಟವರಂತೆ ಹೊರಟಿರುವ ಮಠಾಧೀಶರಿಗೂ ಈ ಸಾಮಾಜಿಕ ಪ್ರಶ್ನೆ ಕಾಣುವುದಿಲ್ಲ. ಮೀಸಲಾತಿ ಯಾರಿಗೆ ಕೊಡಬೇಕು? ಅವಕಾಶ ವಂಚಿತರಿಗೆ, ಉಳ್ಳವರಿಗೇ ಕೊಡುವುದಲ್ಲ. ಇಲ್ಲದವರಿಗೆ ಕೊಡಬೇಕು. ಆದರೆ ಕೆಲವು ಸ್ವಾಮಿಗಳು ಉಳ್ಳವರಿಗೆ ಕೊಡಿಸಲು ಹೊರಟಿದ್ದಾರೆ! ಇದರ ಮರ್ಮವೇನು?

ಮೇಲ್ಜಾತಿ, ಮೇಲ್ವರ್ಣಗಳಲ್ಲಿಯೂ ಕಡು ಬಡವರಿದ್ದಾರೆ. ಅವರಿಗೂ ನ್ಯಾಯಸಿಗಬೇಲ್ಲವೇ? ಈ ಸಮಸ್ಯೆಗೆ ನಿಜವಾದ ಪರಿಹಾರ ಎಲ್ಲವೂ ಎಲ್ಲರಿಗೆ ಸಿಕ್ಕಾಗ. ಎಲ್ಲರಿಗೂ ಶಿಕ್ಷಣ ಸಿಗಬೇಕು. ಎಲ್ಲರಿಗೂ ಉದ್ಯೋಗ ಸಿಗಬೇಕು. ಶಿಕ್ಷಣ ಮತ್ತು ಉದ್ಯೋಗ ಮೂಲಭೂತ ಹಕ್ಕಾಗಬೇಕು. ಅಲ್ಲಿಯವರೆಗೆ ಅದು ಅವಕಾಶ ವಂಚಿತರ ಸೊತ್ತಾಗಬೇಕು. ತಮ್ಮದೇನೂ ತಪ್ಪು ಇಲ್ಲದಿದ್ದಾಗ್ಯೂ ಅವರು ಶತಮಾನಗಳಿಂದ ಶಿಕ್ಷೆಯನ್ನು ಅನುಭವಿಸುತ್ತಾ ಬಂದಿದ್ದಾರೆ. ಪಶುಗಳಿಗಿಂತ ಕೀಳಾಗಿ ಕಂಡು ಅವರ ಮನಸ್ಸಿಗೆ ವಾಸಿಯಾಗದ ಗಾಯ ಮಾಡಲಾಗಿದೆ. ನಾವು ಎಂದಾದರೂ ನಮ್ಮ ಸಹೋದರ ಸಹೋದರಿಯರ ನೋವನ್ನು ಅರಿತಿದ್ದೇವಾ? ಆಗ ನಮಗೆ ಯಾವುದು ಮುಖ್ಯವಾಗುತಿತ್ತು? ಪಂಚಮಸಾಲಿ, ಕುರುಬ, ವಾಲ್ಮೀಕಿ ಮೀಸಲಾತಿಗಿಂತ ದಲಿತರಿಗೆ, ಅಸ್ಪೃಶ್ಯರಿಗೆ ನೀಡಲಾದ ಮೀಸಲಾತಿ ಆ ಸಮುದಾಯದ ಕಟ್ಟಕಡೆಯ ಫಲಾನುಭವಿಗೆ ತಲಪಬೇಕು ಎಂಬುವುದಾಗುತಿತ್ತು.

ನಮ್ಮ ಪೂಜ್ಯ ಸ್ವಾಮಿಗಳು ಯಾಕೆ ದಲಿತರಿಗೆ ದೇವಸ್ಥಾನದ ಗರ್ಭಗುಡಿಯೊಳಗೆ ಪ್ರವೇಶ ನೀಡುವ ಆಂದೋಲನ ಮಾಡುವುದಿಲ್ಲ. ಭಕ್ತರೊಂದಿಗೆ, ಅವರ ಜಾತಿಯನ್ನು ಪ್ರಶ್ನಿಸದೆ ಯಾಕೆ ಸಹಬೋಜನ ಮಾಡಿ ಸಮಾಜಕ್ಕೆ ಮಾದರಿ ಆಗುವುದಿಲ್ಲ. ಮಠ, ಪೀಠಕ್ಕಾಗಿ ಕೋರ್ಟಿನ ಬಾಗಿಲು ತಟ್ಟುವ ಮಠಾಧೀಶರಿಂದ ಸರ್ಮಾಜಕ್ಕೇನು ಮಾರ್ಗದರ್ಶನ ಸಿಗಬಹುದು. 'ಕಲ್ಯಾಣ ಕರ್ನಾಟಕ' ಎಂದು ಹೆಸರು ಇಟ್ಟುಕೊಂಡರೆ ಸಾಕೆ? ಕಲ್ಯಾಣ ಕರ್ನಾಟಕ ನಿರ್ಮಾಣವಾಗಬೇಕಲ್ಲವೇ? ಅದಕ್ಕೊಂದು ಮಹಾಪಾದಯಾತ್ರೆ ಬಸವಕಲ್ಯಾಣದಿಂದ ಆರಂಭಗೊಂಡು ರಾಜ್ಯಾದ್ಯಂತ ಪಸರಿಸುವಂತೆ ಮಾಡಲು ಎಷ್ಟು ಮಂದಿ ಮಠಾಧೀಶರು ಯೋಚನೆ ಮಾಡಬಲ್ಲರು?

ದೇಶದಲ್ಲಿ ಇಂದು ರೈತರ ಮತ್ತು ದುಡಿಯುವ ಇತರ ಜನ ವಿಭಾಗಗಳ ಚಾರಿತ್ರಿಕ ಆಂದೋಲನವೊಂದು ನಡೆಯುತ್ತಿದೆ. ಅತ್ಯಂತ ಶಾಂತ ರೀತಿಯಿಂದ ನಡೆಯುವ ಈ ಆಂದೋಲನವನ್ನು ತಡೆಯಲು ಯಾರೂ ಪ್ರಯತ್ನ ಪಟ್ಟರೂ ಅವರಿಗೆ ಅದು ಸಾಧ್ಯವಾಗಿಲ್ಲ. ಕಾಯಕ ಜೀವಿಗಳು ತಮ್ಮ ಕೆಲಸಕ್ಕೆ ನ್ಯಾಯ ಸಮ್ಮತ ಪ್ರತಿಫಲ ಕೇಳುತ್ತಾರೆ. ತಮಗಾಗಿ ಮಾತ್ರವಲ್ಲ, ದೇಶಕ್ಕಾಗಿ. ನಮ್ಮ ಹಿರಿಯರು ಕಷ್ಟಪಟ್ಟುಗಳಿಸಿದ ಸ್ವಾತಂತ್ರ್ಯ ಮತ್ತೆ ಕಾರ್ಪೊರೇಟ್ ಕಂಪೆನಿಗಳ ವಶವಾಗುವ ಸ್ಥಿತಿ ನಿರ್ಮಾಣವಾಗಿದೆ. ಈ ಆತಂಕವನ್ನು ತಡೆಯಲು ಮುಂದಾಗಿರುವ, ಯಾವ ತ್ಯಾಗಕ್ಕೂ ಸಿದ್ಧರಾಗಿರುವ ರೈತರಿಗೆ ಮತ್ತು ಕಾರ್ಮಿಕರಿಗೆ ರಾಜ್ಯದ ಸಜ್ಜನ ಮಠಾಧೀಶರು ಬೆಂಬಲ ನೀಡುವುದಾಗಬೇಕು. ಇಂತಹ ಸಮಯದಲ್ಲಿ ಮೀಸಲಾತಿಗಾಗಿ ಜನರನ್ನು ಎತ್ತಿಕಟ್ಟುವುದು ಸಮಂಜಸವಾಗಲಾರದು. ದಲಿತ ಸಮುದಾಯದ ಹಕ್ಕುಗಳಿಗಾಗಿ ಹೋರಾಡುವುದು ಮತ್ತು ರೈತ-ಕಾರ್ಮಿಕರ ಚಾರಿತ್ರಿಕ ಚಳುವಳಿಯನ್ನು ಬೆಂಬಲಿಸುವುದು ಈಗ ಎಲ್ಲ ದೇಶಪ್ರೇಮಿ ಶಕ್ತಿಗಳಿಗೆ ಮತ್ತು ವ್ಯಕ್ತಿಗಳಿಗೆ ಮುಖ್ಯವಾಗಬೇಕು.

ಮುಖ್ಯಮಂತ್ರಿ ಯಡಿಯೂರಪ್ಪ ಮೀಸಲಾತಿ ಆಂದೋಲನ ಕುರಿತು ಮೌನವಾಗಿಯೇ ಇದ್ದಾರೆ. ಅವರು ತೂಗಿ ನೋಡುತ್ತಿರಬಹುದು. ಕದಡಿದ ನೀರಿನಲ್ಲಿ ಮೀನು ಹಿಡಿಯುವ ಜಾಯಮಾನ!

ಬೆಂಗಳೂರು ಯುವತಿ ದಿಶಾರವಿ ಬಂಧನ ಕಾನೂನು ಬಾಹಿರ ಹಾಗೂ ಅಕ್ರಮ-ಸಂಯುಕ್ತ ಹೋರಾಟ-ಕರ್ನಾಟಕ ಕಟು ಟೀಕೆ

ರೈತ ಹೋರಾಟಕ್ಕೆ ಬೆಂಬಲಿಸಿದ ಕಾರಣಕ್ಕಾಗಿ ಹಾಗೂ ರೈತ ಹೋರಾಟಕ್ಕೆ ಯಾವ ರೀತಿಯಲ್ಲಿ ಬೆಂಬಲಿಸಬಹುದು ಎಂಬ ಮಾರ್ಗಸೂಚಿ ಮಾಹಿತಿ (ಟೂಲ್ ಕಿಟ್) ಹಂಚಿಕೊಂಡ ಕಾರಣಕ್ಕಾಗಿ ನಡೆದಿರುವ ದಿಶಾರವಿರವರ ಬಂಧನ ಕಾನೂನು ಬಾಹಿರ ಹಾಗೂ ಅಕ್ರಮ ಎಂದು ಸಂಯುಕ್ತ ಹೋರಾಟ-ಕರ್ನಾಟಕ ಕಟುವಾಗಿ ಟೀಕಿಸಿದೆ.

ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ಸಂವಿಧಾನ ನೀಡಿರುವ ಮೂಲಭೂತ ಹಕ್ಕುಗಳನ್ನು ಚಲಾಯಿಸಿದ ಕಾರಣದಿಂದಾಗಿ ದೆಹಲಿ ಪೊಲೀಸರು ಬೆಂಗಳೂರಿಗೆ ಬಂದು ನಡೆಸಿರುವ ದೌರ್ಜನ್ಯ ಆತಂಕಕಾರಿ ಯಾದುದು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಬಹುದೊಡ್ಡ ಹಲ್ಲೆ ಎಂದು ಸಂಯುಕ್ತ ಹೋರಾಟ-ಕರ್ನಾಟಕ ಅಭಿಪ್ರಾಯಪಡುತ್ತದೆ.

ಯಾವುದೇ ವ್ಯಕ್ತಿಯನ್ನು ಬಂಧನಕ್ಕೆ ಒಳಪಡಿಸಬೇಕಾದರೆ ಹಾಗೂ ಬಂಧಿಸಿದ ವ್ಯಕ್ತಿಯನ್ನು ಬಂಧನದ ಸ್ಥಳದ ವ್ಯಾಪ್ತಿಯಿಂದ ಹೊರಗೆ ಸಾಗಿಸಬೇಕಾದರೆ ಸಂಬಂಧಿಸಿದ ನ್ಯಾಯಾಲಯದ ಅನುಮತಿ ಅಗತ್ಯ. ಆದರೆ ದೆಹಲಿ ಪೊಲೀಸರು ದಿಶಾರವಿ ರವರನ್ನು ಅಪಹರಣ ಮಾದರಿಯಲ್ಲಿ ಕಾರ್ಯಾಚರಣೆ ನಡೆಸಿ, ಸಂಬಂಧಿಸಿದ ಕೋರ್ಟ್‌ನಿಂದ ಅನುಮತಿ ಹಾಗೂ ಸ್ಥಳೀಯ ಪೊಲೀಸರಿಗೆ ಅಗತ್ಯ ಮಾಹಿತಿ ನೀಡದೇ ನೆಲದ ಕಾನೂನನ್ನು ಉಲ್ಲಂಘಿಸಿದೆ. ಇಂತಹ ಅಕ್ರಮ ಕಾನೂನು ಬಾಹಿರ ಹಾಗೂ ಮಾನವ ಹಕ್ಕುಗಳಿಗೆ ಚ್ಯುತಿ ತಂದಿರುವ ದೆಹಲಿ ಪೊಲೀಸರ ಮೇಲೆ ಕಠಿಣ ಕ್ರಮ ಜರುಗಿಸಲು ಸಂಯುಕ್ತ ಹೋರಾಟ-ಕರ್ನಾಟಕ ರಾಷ್ಟ್ರಪತಿಗಳನ್ನು ಆಗ್ರಹಿಸಿದೆ.

ಸಾಮಾಜಿಕ ಜಾಲತಾಣವನ್ನು ಬಳಸಿ ರೈತ ಹೋರಾಟಕ್ಕೆ ಬೆಂಬಲಿಸಿದ ಏಕಮಾತ್ರ ಕಾರಣಕ್ಕಾಗಿ ಬಂಧಿಸಿರುವುದು ರೈತ ಹೋರಾಟಕ್ಕೆ ಹೆಚ್ಚುತ್ತಿರುವ ಯುವಜನರ ಬೆಂಬಲ ತಡೆಯುವ ಹತಾಶ ಯತ್ನ ಹಾಗೂ ಯುವತಿಯನ್ನು ಬಂಧಿಸಿರುವ ಮಾದರಿ ಮೋದಿ ಸರ್ಕಾರದ ಬೇಟಿ ಬಚಾವೋ ಘೋಷಣೆಯ ವ್ಯಂಗ್ಯ ಎಂದು ಸಂಯುಕ್ತ ಹೋರಾಟ-ಕರ್ನಾಟಕ ಟೀಕಿಸಿದೆ.

ಈ ಕೂಡಲೇ ದಿಶಾರವಿ ರವರನ್ನು ಬೇಷರತ್ ಆಗಿ ಬಿಡುಗಡೆ ಮಾಡಬೇಕು, ದಿಶಾ ರವಿ ರವರನ್ನು ಅಪಾರ ಯಾತನೆ, ಕಿರುಕುಳ, ಅಕ್ರಮ ಬಂಧನ, ಅಕ್ರಮ ಸಾಗಾಣಿಕೆಗೆ ಒಳಪಡಿಸಿರುವ ಕಾರಣಕ್ಕಾಗಿ ಒಂದು ಕೋಟಿ ರೂಪಾಯಿ ಪರಿಹಾರ ನೀಡಬೇಕೆಂದು ಸಂಯುಕ್ತ ಹೋರಾಟ-ಕರ್ನಾಟಕ ಆಗ್ರಹಿಸಿದೆ.

ಫಾಸ್ಟ್ ಟ್ಯಾಗ್ ಗೆ ವ್ಯಾಪಕ ವಿರೋಧ, ಟೋಲ್ ನಿಂದ 'ಮುಕ್ತಿ' ಸಿಗೋದು ಯಾವಾಗ?





ವಾಹನಗಳಿಗೆ ಫಾಸ್ಟ್ ಟ್ಯಾಗ್ ಕಡ್ಡಾಯ ಎಂಬ ಕೇಂದ್ರ ಸರಕಾರದ ಯೋಜನೆಗೆ ವ್ಯಾಪಕ ವಿರೋಧ ವ್ಯಕ್ತವಾಗಿದೆ. ಹಲವು ಟೋಲ್ ಗಳಲ್ಲಿ ವಾಹನ ಸವಾರರು ಪ್ರಶ್ನೆಯನ್ನು ಮಾಡ್ತಾ ಇದ್ದು ಮಾತಿನ ಚಕಮಕಿ ಕೂಡಾ ನಡೀತಾ ಇದೆ. ರಸ್ತೆಗೆ ಟೋಲ್ ತೆಗೆದುಕೊಳ್ಳುತ್ತಿರುವ ಸರಕಾರದ ಕ್ರಮ ಎಷ್ಟು ಸರಿ?, ಅವಧಿ ಮುಗಿದ ಟೋಲ್ ಟೆಂಡರ್ ನ್ನು ಮತ್ತೆ ಮುಂದುವರೆಸುತ್ತಿರುವುದು ಯಾಕೆ? ಈ ಟೋಲ್ ಸುಲುಗೆ ನಿಲ್ಲೋದು ಯಾವಾಗ? ಎಂದು ವಾಹನ ಸವಾರರು ಬೇಸರವನ್ನು ವ್ಯಕ್ತಪಡಿಸುತ್ತಿದ್ದಾರೆ.

ಹೆದ್ದಾರಿಗಳ ಟೋಲ್ ಮೂಲಕ ಸಾಗುವ ವಾಹನಗಳಿಗೆ ಫಾಸ್ಟ್‌ಟ್ಯಾಗ್ ಕಡ್ಡಾಯವೆಂಬ ನಿಯಮ ಸೋಮವಾರ ರಾತ್ರಿಯಿಂದ ಜಾರಿಗೆ ಬಂದಿದೆ. ಫಾಸ್ಟ್ ಟ್ಯಾಗ್ ಕುರಿತು ಸರಕಾರದ ನಿಲುವನ್ನು ವಿರೋಧಿಸಿ ಹಲವು ಟೋಲ್ ಗೇಟ್ ನಲ್ಲಿ ವಾಹನ ಸವಾರರು ಪ್ರತಿಭಟನೆ ನಡೆಸಿದ್ದಾರೆ. ಪೆಟ್ರೋಲ್, ಡಿಸೈಲ್ ಬೆಲೆ ಏರಿಕೆಯ ನಡುವೆ ಫಾಸ್ಟ್ ಟ್ಯಾಗ್ ನಿಯಮ ವಾಹನ ಸವಾರರ ತಲೆ ಬಿಸಿ ಮಾಡಿದೆ. 'ಫಾಸ್ಟ್ ಟ್ಯಾಗ್ ಇಲ್ಲದಿದ್ದರೆ ದುಪ್ಪಟ್ಟು ಶುಲ್ಕ ಕಟ್ಟಿ' ಎನ್ನುವ ನಿಯಮದ ವಿರುದ್ಧ ಕೆಲವು ಚಾಲಕರು ಸಿಡಿಮಿಡಿಗೊಳುತ್ತಿದ್ದಾರೆ. ಟೋಲ್ ಸಿಬ್ಬಂದಿ ಜತೆ ಬಿರುಸಿನ ವಾಗ್ವಾದ ನಡಸ್ತಾ ಇದ್ದಾರೆ, ನಾಗಮಂಗಲದ ಟೋಲ್‌ನಲ್ಲಿ 'ಬೌನ್ಸರ್'ಗಳು ವಾಹನ ಸವಾರರನ್ನು ಬೆದರಿಸಿದ ಘಟನೆಗಳು ನಡೆದಿವೆ. ಟೋಲ್ ರಸ್ತೆಗಳಲ್ಲಿ ಫಾಸ್ಟ್ ಟ್ಯಾಗ್ ಹೆಸರಿನಲ್ಲಿ ಸರಕಾರಗಳು ಹಗಲು ದರೋಡೆ ಮಾಡುತ್ತಿವೆ ಎಂದು ಆಮ್ ಆದ್ಮಿ ಪಾರ್ಟಿ ಆರೋಪವನ್ನು ಮಾಡಿದೆ.

ವಾಹನ ಪಡೆಯುವಾಗಲೂ ನಾವು ರಸ್ತೆಗೆ ಟ್ಯಾಕ್ಸ್ ಕಟ್ಟಿರುತ್ತೇವೆ, ಬೇರೆ ಬೇರೆ ಸಂದರ್ಭದಲ್ಲೂ ಟ್ಯಾಕ್ಸ್ ಕಟ್ಟಿರುತ್ತೇವೆ. ಒಂದೆಡೆ ಪೆಟ್ರೋಲ್, ಡಿಸೈಲ್ ಏರಿಕೆಯ ಬಿಸಿ, ಇನ್ನೊಂದೆಡೆ ಟೋಲ್, ಫಾಸ್ಟ್ ಟ್ಯಾಗ್ ಬಿಸಿ ನಾವು ಯಾವುದನ್ನು ಸಹಿಸಿಕೊಳ್ಳಬೇಕು? ಆಳುವ ಸರಕಾರಗಳು ಜನರ ಹಿತ ಕಾಪಾಡುವ ಬದಲು ಅವರು ಯಾರ ಪರ ಕೆಲಸ ಮಾಡುತ್ತಿದ್ದಾರೆ ಎಂಬುದು ಗೊತ್ತಾಗುತ್ತಿಲ್ಲ ಎಂದು ಮುನೀರ್ ಕಾಟಿಪಳ್ಳ ಆರೋಪಿಸಿದ್ದಾರೆ.

ಅಟಲ್ ಬಿಹಾರಿ ವಾಜಪೇಯಿ ಯವರು ಪ್ರಧಾನಿ ಆಗುವ ಮೊದಲು, ಕೇಂದ್ರ ಭೂ ಸಾರಿಗೆ, ಹೆದ್ದಾರಿ ಖಾತೆ ಅಷ್ಟೋನು ಮಹತ್ವವನ್ನು ಪಡೆದಿರಲಿಲ್ಲ. ಸುವರ್ಣ ಚತುಷ್ಪತ ಯೋಜನೆ ಜಾರಿಯಾಗಿ ಸುಂಕ ವಸೂಲಿ ಆರಂಭವಾಗುತ್ತಿದ್ದಂತೆ ಕೇಳುವವರಿಲ್ಲದ ಖಾತೆಗೆ ರಾಜಯೋಗ ಬಂತು. ಬಿ.ಸಿ.ಖಂಡೂರಿಯವರು ನಿರ್ವಹಿಸಿದ ಖಾತೆ, ಇಂದು ನಿತೀನ್ ಗಡ್ಕರಿಯಂತಹ ಪ್ರಭಾವಿಗಳ ಪಾಲಾಗಿದೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಚಿನ್ನದ ಮೊಟ್ಟೆ ಇಡುವ ಕೋಳಿಯಾಗಿದೆ. ಸುವರ್ಣ ಚತುಷ್ಪತ ಯೋಜನೆ ಜಾರಿಯಾಗುವ ವೇಳೆ ಬಹಳಷ್ಟು ಮಂದಿ ಆಕ್ಷೇಪ ವ್ಯಕ್ತ ಪಡಿಸಿದ್ದರು. ನಮ್ಮದೇ ಜಮೀನು, ನಮ್ಮದೇ ರಸ್ತೆ. ದುಡ್ಡು ಕೊಟ್ಟು ಯಾಕೆ ಓಡಾಡಬೇಕು ಎಂಬ ಪ್ರಶ್ನೆ ಕೇಳಿಬಂದಿದ್ದವು.

ರಸ್ತೆಯನ್ನು ನಿರ್ಮಾಣ ಮಾಡುವಂತದ್ದು ಸಾರ್ವಜನಿಕರ ಅನುಕೂಲಕ್ಕಾಗಿ ಅದಕ್ಕಾಗಿ ಸರಕಾರ ಸರಕಾರಿ ಭೂಮಿಯನ್ನು ಬಳಸಬಹುದು ಇಲ್ಲವೆ ಬೇರೆಯವರಿಂದ ಖರೀದಿಸಿ ರಸ್ತೆಯನ್ನು ನಿರ್ಮಿಸುತ್ತದೆ. ಸಾರ್ವಜನಿಕರಿಗಾಗಿ ನಿರ್ಮಿಸಿದ ರಸ್ತೆಯನ್ನು ನಿರ್ವಹಣೆ ಮಾಡಲಿಕ್ಕಾಗಿ ಖಾಸಗಿ ಕಂಪನಿಗಳಿಗೆ ನೀಡುವ ಮೂಲಕ ಈ ಟೋಲ್ ಸಂಸ್ಕೃತಿಯನ್ನು ಹುಟ್ಟಿಹಾಕಲಾಯಿತು. ಈ ಟೋಲ್ ಗಳು ನಿಜಕ್ಕೂ ಸಾರ್ವಜನಿಕರ ರಕ್ತವನ್ನು ಹೀರುತ್ತಿವೆ. ಈಗ ಫಾಸ್ಟ್ ಟ್ಯಾಗ್ ಕಡ್ಡಾಯದ ಹೆಸರಿನಲ್ಲಿ ದುಪ್ಪಟ್ಟು ಹಣ ಪಡೆಯುವುದರಿಂದ ಸಾರ್ವಜನಿಕರು ಎಷ್ಟು ಹಣವನ್ನು ಕಟ್ಟಬೇಕಾಗುತ್ತದೆ ಎಂಬುದನ್ನು ನಾವು ತಿಳಿಯಬೇಕಿದೆ.

ನಿಮಗೆ ಇಲ್ಲೊಂದು ನಕ್ಷೆ ಕಾಣುತ್ತಿದೆ. ಅದರ ಒಂದೊಂದು ವಿವರಣೆಯನ್ನು ನಾವು ನೋಡ್ತಾ ಹೋಗೋಣ ಬೆಂಗಳೂರಿನಿಂದ ಬೆಳಗಾವಿಗೆ ನಾವು ಕಾರ್ ಮೂಲಕ ಪ್ರಯಾಣವನ್ನು ಮಾಡಿದರೆ ಬೆಳಗಾವಿಯನ್ನು ತಲುಪುವಷ್ಟರಲ್ಲಿ ನಮಗೆ 10 ಟೋಲ್ ಗಳು ಸಿಗುತ್ತವೆ. ಈ 10 ಟೋಲ್ ನಲ್ಲಿ 575 ರೂ ಹಣವನ್ನು ಸಂದಾಯ ಮಾಡಬೇಕಾಗುತ್ತದೆ. ಇದು ಕೇವಲ ಒಂದು ಕಡೆಯ ಪ್ರಯಾಣ ಮಾತ್ರ. ಪಾಸ್ಟ್ ಟ್ಯಾಗ್ ಇಲ್ಲಾ ಅಂದ್ರೆ 1150 ರೂ ಹಣವನ್ನು ಸಂದಾಯ ಮಾಡಬೇಕಾಗುತ್ತದೆ. ಬೆಂಗಳೂರಿನಿಂದ ಶಿವಮೊಗ್ಗ ತಲುಪುವಷ್ಟರಲ್ಲಿ ನಾಲ್ಕು ಟೋಲ್ ಬರುತ್ತವೆ, 200 ರೂ ಹಣವನ್ನು ಕೊಡಬೇಕಾಗುತ್ತೆ. ಬೆಂಗಳೂರಿನಿಂದ ಹಾಸನಕ್ಕೆ ಕಾರ್ ಮೂಲಕ ಹೋಗುವಾಗ ನಮಗೆ 5 ಟೋಲ್ ಗಳು ಎದರುಗಾತ್ತವೆ. 200 ರೂ ಟೋಲ್ ಶುಲ್ಕವನ್ನು ಅಲ್ಲಿ ಕಟ್ಟಬೇಕಾಗುತ್ತೆ. ಇದು ಕೇವಲ ಒಂದು ಕಡೆಯ ಪ್ರಯಾಣದ ಶುಲ್ಕ ಮಾತ್ರ, ಫಾಸ್ಟ್ ಟ್ಯಾಗ್ ಇಲ್ಲಾ ಅಂದ್ರೆ ದುಪಟ್ಟು ಹಣ ಕೊಡಬೇಕು ಅಂದ್ರೆ 400 ರೂ ಕೊಡಬೇಕಾಗುತ್ತದೆ. ಬೆಂಗಳೂರಿನಿಂದ ತಿರುಪತಿಗೆ ಹೋಗುವಾಗ 3 ಟೋಲ್ ಗಳಲ್ಲಿ ನಾವು ಶುಲ್ಕ ಕಟ್ಟಬೇಕು. ಒಂದು ಬಾರಿ ಕಾರಿನ ಪ್ರಯಾಣಕ್ಕೆ 115 ರೂ ಕಟ್ಟಬೇಕಾಗುತ್ತದೆ.

ಬೆಂಗಳೂರಿನಿಂದ ಹೈದ್ರಾಬಾದ್ ಗೆ ಹೋಗುವಾಗ ಎಂಟು ಟೋಲ್ ಗಳು ಎದುರಾಗುತ್ತವೆ. ಒಂದು ಬಾರಿಯ ಪ್ರಯಾಣಕ್ಕೆ 760 ರೂ ಗಳನ್ನು ಟೋಲ್ ಶುಲ್ಕವಾಗಿ ನೀಡಬೇಕಾಗುತ್ತೆ. ಬೆಂಗಳೂರಿನಿಂದ ಚೆನ್ನೈ ಗೆ ಹೋಗುವಾಗ 6 ಟೋಲ್ ಗಳು ಎದುರಾಗುತ್ತವೆ ಅಲ್ಲಿ 370 ರೂ ಹಣವನ್ನು ಕಟ್ಟಬೇಕಾಗುತ್ತೆ. ಬೆಂಗಳೂರಿನಿಂದ ಕಲುಬುರಗಿಗೆ ಹೋಗುವಾಗ 04 ಟೋಲ್ ಗಳು ಬರುತ್ತವೆ. 410 ರೂ ಟೋಲ್ ಶುಲ್ಕವನ್ನು ಕಟ್ಟಬೇಕಾಗುತ್ತೆ. ಬೆಂಗಳೂರು ಹೊಸಪೇಟೆಗೆ ಹೋಗುವಾಗ 4 ಟೋಲ್ ಗಳು ಎದುರಾಗುತ್ತವೆ, ಅಲ್ಲಿ 200 ರೂ ಹಣವನ್ನು ಕೊಡಬೇಕು. ಫಾಸ್ಟ್ ಟ್ಯಾಗ್ ಹೊಂದಿಲ್ಲ ಅಂದ್ರೆ 400 ರೂ ಹಣವನ್ನು ಕೊಡಬೇಕಾಗುತ್ತೆ. ಅದೇ ರೀತಿ ಬೆಂಗಳೂರಿನಿಂದ ಕೊಡಗಿಗೆ ಹೋಗುವಾಗ 04 ಟೋಲ್ ಗಳು ಎದುರಾಗುತ್ತವೆ. 115 ರೂ ಗಳನ್ನು ಅಲ್ಲಿ ಟೋಲ್ ಶುಲ್ಕವಾಗಿ ಕಟ್ಟಬೇಕು, ಫಾಸ್ಟ್ ಟ್ಯಾಗ್ ಇಲ್ಲಾ ಎಂದಾದರೆ 230 ರೂ ಹಣವನ್ನು ಕಟ್ಟಬೇಕಾಗುತ್ತದೆ.

ಈಗಾಗಲೆ ಪೆಟ್ರೋಲ್, ಡಿಸೈಲ್ ಬೆಲೆ ಏರಿಕೆಯಿಂದ ತತ್ತರಿಸಿರುವ ಸಾರ್ವಜನಿಕರು ಫಾಸ್ಟ್ ಟ್ಯಾಗ್ ಕಡ್ಡಾಯ ಮಾಡಿಸದ ಕಾರಣ ದುಪ್ಪಟ್ಟ ಹಣವನ್ನು ನೀಡಿ ಎನ್ನುವ ಕೇಂದ್ರ ಸರಕಾರದ ಆದೇಶಕ್ಕೆ ವ್ಯಾಪಕ ವಿರೊಧ ವ್ಯಕ್ತಪಡಿಸ್ತಾ ಇದ್ದಾರೆ, ರಸ್ತೆಯ ನಿರ್ವಹಣೆಯ ಹೆಸರಲ್ಲಿ ಖಾಸಗಿ ಕಂಪನಿಗಳ ಲೂಟಿಗೆ ಅವಕಾಶವನ್ನು ನೀಡಲಾಗುತ್ತಿದೆ. ಇದೊಂದು ದೊಡ್ಡ ಪ್ರಮಾಣದ ಕೇಂದ್ರ ಸರಕಾರದ ಭ್ರಷ್ಟಾಚಾರ ಎಂದೆಲ್ಲ ಆರೋಪವನ್ನು ಮಾಡುತ್ತಿದ್ದಾರೆ, ಅವರ ಆರೋಪ ನಿಜ ಎನ್ನುವಂತೆ ಕೆಲವೊಂದಿಷ್ಟು ದಾಖಲೆಗಳು ಸಾಕ್ಷಿಯನ್ನು ನೀಡ್ತಾ ಇವೆ.

ಆರಂಭದಲ್ಲಿ ಕೆಲವು ರಸ್ತೆಗಳನ್ನು 18 ವರ್ಷಗಳ ಅವಧಿವರೆಗೂ ಗುತ್ತಿಗೆ ನೀಡಲಾಗಿತ್ತು. ಟೋಲ್ ಶುಲ್ಕ ವಸೂಲಿ ಆರಂಭಿಸಿದ 12 ವರ್ಷಕ್ಕೆ ರಸ್ತೆ ನಿರ್ಮಾಣ ವೆಚ್ಚ ವಸೂಲಿಯಾಗಲಿದೆ, ಬಾಕಿ ಆರು ವರ್ಷ ನಿರ್ವಹಣೆಯ ಒಟ್ಟಾರೆ ವೆಚ್ಚವನ್ನು ವಸೂಲಿ ಮಾಡಿಕೊಳ್ಳಬಹುದು ಎಂಬ ಅಂದಾಜಿತ್ತು. ಅನೇಕ ಟೋಲ್ ನಿರ್ವಹಣೆಯ ಗುತ್ತಿಗೆ ಅವಧಿ ಕಳೆದ ವರ್ಷ ಮುಗಿದಿದೆ. ಆದರೆ ಸರ್ಕಾರಗಳು ಈ ಅವಧಿಯನ್ನು ಸದ್ದಿಲ್ಲದೆ ಈಗ ಮತ್ತೆ 30 ವರ್ಷಗಳಿಗೆ ನವೀಕರಿಸಿಕೊಟ್ಟಿವೆ ಎಂಬ ಆಘಾತಕಾರಿ ಅಂಶಗಳು ಹೊರಬಿದ್ದಿವೆ.

ಹದಿನೆಂಟು ವರ್ಷಗಳವರಗೆ ಗುತ್ತಿಗೆ ಕೊಟ್ಟಾಗ ಹೊಸ ರಸ್ತೆ ನಿರ್ಮಿಸುವ ಜವಾಬ್ದಾರಿ ಇತ್ತು. ಹಾಲಿ ಇದ್ದ ರಸ್ತೆಯ ಅಕ್ಕ ಪಕ್ಕ ಮರ ಕಡಿದು, ಅಗಲೀಕರಣ ಮಾಡಿ, ಅಗತ್ಯ ಇರುವ ಕಡೆ ಸೇತುವೆಗಳನ್ನು ನಿರ್ಮಿಸಿ, ಟಾರ್ ಹಾಕಿದ್ದು ಬಿಟ್ಟರೆ ಖಾಸಗಿ ಕಂಪೆನಿಗಳು ಬೇರೆನು ಮಾಡಿಲ್ಲ. ನಿಯಮದ ಪ್ರಕಾರ ಸುಸಜ್ಜಿತ ಪರ್ಯಾಯ ರಸ್ತೆ ನಿರ್ಮಿಸಿಲ್ಲ. ರಸ್ತೆಗೆ ಅಗತ್ಯವಾದ ಭೂಮಿಯನ್ನು ಸರ್ಕಾರವೇ ಸ್ವಾಧೀನ ಮಾಡಿಕೊಟ್ಟಿದೆ. ಈಗ ಮೂವತ್ತು ವರ್ಷ ಗುತ್ತಿಗೆ ನವೀಕರಿಸುವಾಗ ರಸ್ತೆ ಅಗಲೀಕರಣ ಸೇರಿದಂತೆ ಯಾವ ಹೆಚ್ಚುವರಿ ವೆಚ್ಚಗಳು ಇರಲಿಲ್ಲ. ಕಿತ್ತು ಹೋದ ರಸ್ತೆಗೆ ಒಂದಿಷ್ಟು ತೇಪೆ ಹಾಕಲಾಗಿದೆ. ಬಹಳಷ್ಟು ಕಡೆ ಅದನ್ನು ಸರಿಯಾಗಿ ಮಾಡುತ್ತಿಲ್ಲ. ಪ್ರಶ್ನಿಸಿದವರ ಮೇಲೆ ಬೌನ್ಸರ್ ಗಳನ್ನು ಬಿಟ್ಟು ಹಲ್ಲೆಗಳನ್ನು ಮಾಡಲಾಗುತ್ತಿದೆ. ಕೇಂದ್ರ ಸರಕಾರದ ಅಂಕಿ ಸಂಖ್ಯೆಯ ಪ್ರಕಾರ ದಿನವೊಂದಕ್ಕೆ 80 ಕೋಟಿ ರೂಪಾಯಿಗೂ ಹೆಚ್ಚು ಟೋಲ್ ವಸೂಲಿಯಾಗುತ್ತಿದೆ.

ರಾಜ್ಯದಲ್ಲಿ ಒಟ್ಟು 7335 ಕಿ.ಮೀ ರಾಷ್ಟ್ರೀ ಹೆದ್ದಾರಿ ಕಾಮಗಾರಿಯಲ್ಲಿ ಪ್ರಾಧಿಕಾರ, ಸ್ವತಃ ಟೋಲ್ ಸಂಗ್ರಹ ಮಾಡುತ್ತಿರುವುದು 521 ಕಿಲೋ ಮೀಟರ್ ಗೆ ಮಾತ್ರ. ಉಳಿದ 6814 ಕಿ.ಮೀಗೆ ಗುತ್ತಿಗೆದಾರರೇ ಸಂಗ್ರಹ ಮಾಡುತ್ತಿದ್ದಾರೆ. ಇಷ್ಟೆಲ್ಲಾ ಹಣಸಂಗ್ರಹವಾಗುತ್ತಿದ್ದುರು ಇನ್ನೂ ಜನರು ಟೋಲ್ ಕಟ್ಟುವುದನ್ನ ನಿಲ್ಲಿಸಲಾಗುತ್ತಿಲ್ಲ. ಸಾರ್ವಜನಿಕರು ಉಚಿತವಾಗಿ, ಮುಕ್ತವಾಗಿ ಓಡಾಡುವುದು ಯಾವಾಗ? ಎಂಬ ಪ್ರಶ್ನೆ ಸಹಜವಾಗಿ ಕಾಡುತ್ತದೆ. ಜೀವನ ಪರ್ಯಂತ ಬರೀ ಟೋಲ್ ಗಳಿಗೆ ಶುಲ್ಕವನ್ನು ಕೊಟ್ಟು ಪ್ರಯಾಣ ಮಾಡುವುದು ಅಸಾಧ್ಯ. ಸರ್ಕಾರ ಎಚ್ಚೆತ್ತುಕೊಂಡು ಟೋಲ್ ಗೆ ಬ್ರೆಕ್ ಹಾಕಬೇಕಿದೆ. ಅವೈಜ್ಞಾನಿಕ ಫಾಸ್ಟ್ ಟ್ಯಾಗ್ ನ್ನು ಕೈ ಬಿಡಬೇಕಿದೆ. ಇಲ್ಲವಾದರೆ ಶತಮಾನ ಕಳೆದರೂ ಸಾರ್ವಜನಿಕರು ಟೋಲ್ ಶುಲ್ಕವನ್ನು ಕಟ್ಟುತ್ತಲೇ ಇರಬೇಕಾಗುತ್ತದೆ. ●

ಕೋಳಿ ಸಾಕಾಣಿಕೆದಾರರ ರೈತ ಹೋರಾಟಕ್ಕೆ ಸ್ಪಂದಿಸದ ಸರ್ಕಾರ

ಸಮಸ್ಯೆಗಳ ಪರಿಹಾರಕ್ಕೆ ಫೆಬ್ರವರಿ 24, 2021 ನಿಗದಿಯಾದ ಸಭೆ



ಜನವರಿ 11, 2021 ರಂದು ಪಶುಭವನ, ಬೆಂಗಳೂರಿನಲ್ಲಿ ಪಶುಸಂಗೋಪನೆ ಇಲಾಖೆ ನಿರ್ದೇಶಕರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ತೀರ್ಮಾನದಂತೆ ಪ್ರತಿ ಕೆ.ಜಿ. ಕೋಳಿಗೆ ಸಾಕಾಣಿಕೆ ದರವಾಗಿ ತಾತ್ಕಾಲಿಕ ರೂ. 7.50 ಯನ್ನು ಜಾರಿ ಮಾಡಲು "ಸರ್ಕಾರಿ ಆದೇಶ" ಹೊರಡಿಸಬೇಕು ಇತ್ಯಾದಿ ಬೇಡಿಕೆಗಳನ್ನು ಈಡೇರಿಸಬೇಕೆಂದು ಇಂದು ಪಶುಭವನ, ಹೆಬ್ಬಾಳ, ಬೆಂಗಳೂರಿನಲ್ಲಿ ನಡೆದ ರಾಜ್ಯ ಮಟ್ಟದ ಪ್ರತಿಭಟನಾ ಧರಣಿಯ ಹೋರಾಟಕ್ಕೆ ಸ್ಪಂದಿಸಿ ಬೇಡಿಕೆಗಳ ಪತ್ರವನ್ನು ಸ್ವೀಕರಿಸಿದ ಪಶು ಸಂಗೋಪನೆ ಇಲಾಖೆಯ ನಿರ್ದೇಶಕರು ಹಾಗು ಇದಕ್ಕೆ ಸಂಬಂದಿಸಿದ 'ಸರ್ಕಾರಿ ಸಮಿತಿ'ಯ ಸದಸ್ಯ ಕಾರ್ಯದರ್ಶಿ, ಈ ಸಮಸ್ಯೆಗಳ ಪರಿಹಾರಕ್ಕಾಗಿ ಸರ್ಕಾರ ಅಪರ ಮುಖ್ಯ ಕಾರ್ಯದರ್ಶಿ, ಪಶು ಸಂಗೋಪನೆ ಇಲಾಖೆ ರವರ ಅಧ್ಯಕ್ಷತೆ ಫೆಬ್ರವರಿ 24, 2021 ರಂದು ಕೋಳಿ ಸಾಕಾಣಿಕೆದಾರ ರೈತರ ಪ್ರತಿನಿಧಿಗಳು, ಕಂಪನಿಗಳ ಪ್ರತಿನಿಧಿಗಳ ಸಭೆಯನ್ನು ಕರೆದಿರುವುದಾಗಿ ತಿಳಿಸಿದರು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ನೂರಾರು ಕೋಳಿ ಸಾಕಾಣಿಕೆದಾರ ರೈತರ ಪ್ರತಿಭಟನಾ ಧರಣಿಯನ್ನು ಉದ್ದೇಶಿಸಿ ಮಾತನಾಡಿದ ಸಂಘದ ರಾಜ್ಯ ಗೌರವ ಅಧ್ಯಕ್ಷರಾದ ಜಿ.ಸಿ. ಬಯ್ಯಾರೆಡ್ಡಿ, ಅಧ್ಯಕ್ಷರಾದ ಜೆ.ಸಿ. ಮಂಜುನಾಥ, ಪ್ರಧಾನ ಕಾರ್ಯದರ್ಶಿ ಸಿ.ಎಂ. ರಮೇಶ್ ಮತ್ತಿತರೆ ಮುಖಂಡರು, ಫೆಬ್ರವರಿ 24, 2021 ರ ಸಭೆಯಲ್ಲಿ ಬೇಡಿಕೆಗಳು ಈಡೇರದಿದ್ದಲ್ಲಿ ರಾಜ್ಯವ್ಯಾಪಿ ಉಗ್ರ ಹೋರಾಟವನ್ನು ನಡೆಸಲು ಕರೆ ನೀಡಿದರು.

ವೈಜ್ಞಾನಿಕ ಸಾಕಾಣಿಕೆ ದರ ನಿಗದಿ, ಕೋಳಿ ಸಾಕಾಣಿಕೆಯನ್ನು "ಕೃಷಿ" ಎಂದು ಘೋಷಣೆ ಮಾಡುವುದು ಇತ್ಯಾದಿ ಬೇಡಿಕೆಗಳ ಆಧಾರದಲ್ಲಿ ರಾಜ್ಯ ಮಟ್ಟದಲ್ಲಿ ಸಂಘಟನೆಯನ್ನು ಬಲಪಡಿಸಲು ಧರಣಿಯಲ್ಲಿ ಭಾಗವಹಿಸಿ ಮಾತನಾಡಿದ ಎಲ್ಲಾ ಮುಖಂಡರು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.



ಹಾಸ್ಟೇಲ್ ಸಿಬ್ಬಂದಿಗಳನ್ನು ನಿವೃತ್ತಿವರೆಗೂ ಮುಂದುವರಿಕೆಗೆ ಆಗ್ರಹಿಸಿ ಪ್ರತಿಭಟನೆ



ಸರ್ಕಾರಿ ಹಾಸ್ಟೆಲ್ ಹಾಗೂ ಸರ್ಕಾರಿ ವಸತಿ ಶಾಲೆಗಳ 'ಡಿ' ವರ್ಗದ ಹೊರಗುತ್ತಿಗೆ ನೌಕರರಿಗೆ ಬಾಕಿ ಇರುವ ವೇತನ ಹಾಗೂ ಲಾಕ್‌ಡೌನ್ ಅವಧಿಯ ವೇತನವನ್ನು ಸಂದಾಯ ಮಾಡಲು ಮತ್ತು ಸೇವೆಯಿಂದ ಬಿಡುಗಡೆಗೊಳಿಸಲಾದ ಹೊರಸಂಪನ್ಮೂಲ ಸಿಬ್ಬಂದಿಗಳನ್ನು ನಿವೃತ್ತಿ ವರೆಗೆ ಸೇವೆಯಲ್ಲಿ ಮುಂದುವರೆಸಲು ಒತ್ತಾಯಿಸಿ ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರ ಸಂಘದಿಂದ ಸ್ವಾತಂತ್ರ್ಯ ಉದ್ಯಾನವನದಲ್ಲಿ ಸಾಮೂಹಿಕ ಧರಣಿ ನಡೆಸಿದ್ದಾರೆ.

ರಾಜ್ಯದ ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ಅಡಿಯಲ್ಲಿರುವ ವಿದ್ಯಾರ್ಥಿ ನಿಲಯಗಳಲ್ಲಿ, ಆಶ್ರಮ ಶಾಲೆಗಳಲ್ಲಿ, ಮೊರಾರ್ಜಿ ದೇಸಾಯಿ, ರಾಣಿ ಚೆನ್ನಮ್ಮ ಮತ್ತು ಡಾ. ಅಂಬೇಡ್ಕರ್ ವಸತಿ ಶಾಲೆಗಳಲ್ಲಿ 'ಡಿ' ವರ್ಗದ ಸಿಬ್ಬಂದಿಗಳಾಗಿ ಹತ್ತಾರು ವರ್ಷಗಳಿಂದ ಅಡುಗೆ, ಸ್ವಚ್ಛತೆ, ಕಾವಲು ಮೊದಲಾದ ಕೆಲಸ ಮಾಡಿಕೊಂಡು ಬಂದಿರುವವರಿಗೆ ಕೊರೊನಾ ಪೂರ್ವದ ಕೆಲವು ತಿಂಗಳುಗಳ ವೇತನ ಹಾಗೂ ಲಾಕ್‌ಡೌನ್ ಅವಧಿಯ ವೇತನ ಸಂದಾಯವಾಗಿಲ್ಲ ಎಂದು ಪ್ರತಿಭಟನೆಕಾರರು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯದ ವಿವಿಧ ಇಲಾಖೆಗಳ ಎಲ್ಲಾ ಹೊರಗುತ್ತಿಗೆ ನೌಕರರಿಗೆ ಲಾಕ್‌ಡೌನ್ ಅವಧಿಯ ವೇತನ ದೊರೆತಿದೆ. ಇವರಿಗೆ ಮಾತ್ರ ಅದು ಬಾಕಿ ಇದೆ.

ಆಹಾರ ಸಾಮಗ್ರಿಗಳ ಕಿಟ್ ಸಹ ವಿತರಣೆ ಮಾಡಬೇಕು ಎಂದು ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟೆಲ್ ಮತ್ತು ವಸತಿಶಾಲಾ ಹೊರಗುತ್ತಿಗೆ ನೌಕರರ ಸಂಘದ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ ಆಗ್ರಹಿಸಿದರು.

ಇವರು ಆರ್ಥಿಕವಾಗಿ ಅತೀ ಹಿಂದುಳಿದವರು. ಇವರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರೇ ಇದ್ದಾರೆ. ಈ ಮಹಿಳೆಯರಲ್ಲಿ ಹಲವರು ವಿಧವೆಯರು, ಸಣ್ಣ ಸಣ್ಣ ಮಕ್ಕಳನ್ನು ಸಾಕುವ ಜವಾಬ್ದಾರಿ ಉಳ್ಳವರು. ಅವರು ಈಗ ಕೆಲಸವೂ ಇಲ್ಲದೆ, ಸಂಬಳವೂ ಇಲ್ಲದೆ ಒದ್ದಾಡುತ್ತಿದ್ದಾರೆ. ಇವರಿಗೆ ಆದಾಯದ ಬೇರೆ ಮೂಲಗಳಿಲ್ಲ. ಹಾಸ್ಟೆಲ್‌ನಲ್ಲಿ ಕೆಲಸ ಮಾಡುವುದನ್ನೇ ಅವಲಂಭಿಸಿರುವ ಇವರು ಕೊರೊನಾ ಹಾವಳಿಯಿಂದ ತೀವ್ರ ಸಂಕಷ್ಟಕ್ಕೆ ಒಳಗಾಗಿದವರಾಗಿದ್ದಾರೆ. ಇವರಿಗೆ ಬಾಕಿ ಇರುವ ವೇತನವನ್ನು ಸಂದಾಯಮಾಡಿ ಅವರಲ್ಲಿ ಸೇವೆಯಿಂದ ಬಿಡುಗಡೆಗೊಳಿಸಲಾದ ಎಲ್ಲ ಹೊರಸಂಪನ್ಮೂಲ ಸಿಬ್ಬಂದಿಗಳನ್ನು ನಿವೃತ್ತಿವರೆಗೆ ಸೇವೆಯಲ್ಲಿ ಮುಂದುವರೆಸಲು ಒತ್ತಾಯಿಸಿ ಮುಖ್ಯಮಂತ್ರಿಗಳು, ಸಚಿವರು, ಇಲಾಖೆಯ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ಈ ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟೆಲ್ ಮತ್ತು ವಸತಿಶಾಲಾ ಹೊರಗುತ್ತಿಗೆ ನೌಕರರ ಸಂಘ, ಪ್ರಧಾನ ಕಾರ್ಯದರ್ಶಿ ಭೀಮಶೆಟ್ಟಿ ಯಂಪಳ್ಳಿ, ಸಹ ಕಾರ್ಯದರ್ಶಿ ಕೆ. ಹನುಮೇಗೌಡ, ಖಜಾಂಚಿ ಚಂದ್ರಪ್ಪ ಹೊಸ್ಕೇರಾ ಮತ್ತಿತರರು ಉಪಸ್ಥಿತರಿದ್ದರು.



ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ದರ ಹೆಚ್ಚಳ ವಿರೋಧಿಸಿ ಪ್ರತಿಭಟನೆ

ಪೆಟ್ರೋಲ್, ಡಿಸೇಲ್, ಗ್ಯಾಸ್ ಹಾಗೂ ಅಗತ್ಯ ವಸ್ತುಗಳ ಬೆಲೆ ಹೆಚ್ಚಳವನ್ನು ವಿರೋಧಿಸಿ ಸಿಪಿಐಎಂ ನಿಂದ ಬಿಬಿಎಂಪಿ ಕಚೇರಿಗಳ ಮುಂದೆ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆ ಉದ್ದೇಶಿಸಿ ಬೆಂಗಳೂರು ಉತ್ತರ ಜಿಲ್ಲಾ ಸಮಿತಿಯ ಸಿಪಿಐಎಂ ಮುಖಂಡರಾದ ಟಿ. ಲೀಲಾವತಿ ಮಾತನಾಡಿ, ಪೆಟ್ರೋಲ್, ಡಿಸೆಲ್ ಹಾಗೂ ಅಡುಗೆ ಅನಿಲ (ಗ್ಯಾಸ್), ಹಣ್ಣು ತರಕಾರಿ, ಆಹಾರ ಧಾನ್ಯಗಳು ಸೇರಿದಂತೆ ಅಗತ್ಯ ವಸ್ತುಗಳ ಬೆಲೆಗಳು ಜನಸಾಮಾನ್ಯರ, ಮಧ್ಯಮ ವರ್ಗದವರ ಬದುಕನ್ನು ಇನ್ನಷ್ಟು ಸಂಕಷ್ಟಕ್ಕೆ ದೂಡಿದೆ. ಕೇಂದ್ರ ಸರ್ಕಾರವೇ ಪೆಟ್ರೋಲ್/ಡೀಸೆಲ್ ಬೆಲೆ ಏರಿಸುವುದರ ಮೂಲಕ ಎಲ್ಲಾ ವಸ್ತುಗಳ ಬೆಲೆ ಏರಿಕೆಗೆ ಕಾರಣವಾಗುತ್ತಿದೆ. ಜತೆಯಲ್ಲೇ ಅಡುಗೆ ಅನಿಲದ ಬೆಲೆಯನ್ನೂ ತೀವ್ರವಾಗಿ ಹೆಚ್ಚಿಸಿದೆ.

ಮೋದಿ ಸರ್ಕಾರ 2014 ರಲ್ಲಿ ಅಧಿಕಾರಕ್ಕೆ ಬಂದಾಗ ಪೆಟ್ರೋಲ್ ಬೆಲೆ ರೂ.72 ರ ಆಸುಪಾಸಿನಲ್ಲಿತ್ತು, ಆಗ ಅಂತರಾಷ್ಟ್ರೀಯ ಕಚ್ಚಾತೈಲದ ಬೆಲೆ ಒಂದು ಬ್ಯಾರೆಲ್ಲಿಗೆ 110 ಡಾಲರುಗಳ ಆಸುಪಾಸಿನಲ್ಲಿತ್ತು. ಈಗ ಅಂತರಾಷ್ಟ್ರೀಯ ಕಚ್ಚಾತೈಲದ ಬೆಲೆ 56 ಡಾಲರ್ ಗೆ ಇಳಿದಿದೆ. 2014ರ ತೈಲ ಬೆಲೆಗೆ ಹೋಲಿಸಿದರೆ ಈಗ ಅದು ಸರಿ ಸುಮಾರು ಅರ್ಧಕ್ಕೆ ಇಳಿದಿದೆ. ಅಂದರೆ ಪೆಟ್ರೋಲ್ ಬೆಲೆ ರೂ.36 ಕ್ಕೆ ಇರಬೇಕಿತ್ತು. ಆದರೆ ಅದು ಬೆಂಗಳೂರು ನಗರದಲ್ಲಿ ರೂ.90 ನ್ನುದಾಟಿ ರೂ. 100 ರತ್ತ ವೇಗದಿಂದ ಧಾವಿಸುತ್ತಿದೆ. ಹೆಚ್ಚುವರಿ ರೂ. 54 ಎಲ್ಲಿಗೆ ಹೋಯಿತು? ಎಂದು ಪ್ರಶ್ನಿಸಿದರು.



ಕಚ್ಚಾತೈಲದ ಬೆಲೆ ಇಳಿಕೆಯಿಂದ ಸಿಗಬೇಕಾದ ಪ್ರಯೋಜನವನ್ನುಗ್ರಾಹಕರಿಗೆ ವರ್ಗಾಯಿಸದೆ ಅದರ ಅಷ್ಟೂ ಪ್ರಯೋಜನವನ್ನು ಕೇಂದ್ರ ಸರ್ಕಾರವೇ ಪಡೆಯುತ್ತಿದೆ. ಈಗಾಗಲೇ 11 ಕ್ಕಿಂತ ಹೆಚ್ಚು ಬಾರಿತೈಲದ ಮೇಲಿನ ಅಬಕಾರಿ ಸುಂಕವನ್ನು ಹೆಚ್ಚಿಸುವುದರ ಮೂಲಕ ಲಕ್ಷಾಂತರ ಕೋಟಿ ರೂಪಾಯಿಯನ್ನು ಕೇಂದ್ರ ಸರ್ಕಾರ ತನ್ನ ಬೊಕ್ಕಸಕ್ಕೆ ಹಾಕಿಕೊಂಡಿದೆ. ಏಪ್ರಿಲ್–ನವಂಬರ್ 2020 ರ ಕೋವಿಡ್–19 ಅವಧಿಯಲ್ಲೇ ಕೇಂದ್ರ ಸರ್ಕಾರವು ರೂ. 62,000 ಕೋಟಿಯ ಅಬಕಾರಿ ಸುಂಕವನ್ನುಜನರಿಂದ ಸಂಗ್ರಹಿಸಿದೆ ಎಂದು ಲೀಲಾವತಿ ಆಗ್ರಹಿಸಿದರು.

ಬೆಂಗಳೂರು ಉತ್ತರ ವಲಯ ಕಾರ್ಯದರ್ಶಿ ಹುಳ್ಳಿ ಉಮೇಶ್ ಮಾತನಾಡಿ, ಮೋದಿ ಸರ್ಕಾರ ಅಧಿಕಾರಕ್ಕೆ ಬಂದಾಗ ಕೇವಲ ರೂ. 10.39 ಇದ್ದ ಕೇಂದ್ರ ತೆರಿಗೆಯು ಈಗ ರೂ. 32.98 ಆಗಿದೆ, ಅಂದರೆ ಮೂರು ಪಟ್ಟು ಹೆಚ್ಚಾಗಿದೆ. ಅದೇ ರೀತಿಯಲ್ಲಿ ಡೀಸೆಲ್ ಮೇಲಿದ್ದ ಕೇಂದ್ರತೆರಿಗೆಯು ರೂ. 3.56 ಇದ್ದದ್ದು ಈಗ ರೂ. 31,83 ಆಗಿದೆ, ಅಂದರೆ ಹತ್ತುಪಟ್ಟು ಹೆಚ್ಚಾಗಿದೆ. ಕೇಂದ್ರ ಸರ್ಕಾರದ ಈ ದುರಾಸೆಯು ಅಗತ್ಯ ವಸ್ತುಗಳ ಬೆಲೆಯ ಮೇಲೆ ದುಷ್ಪರಿಣಾಮ ಬೀರಿದೆ. ಈ ಕಾರಣದಿಂದಾಗಿಯೇ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದೆ. ಜಗತ್ತಿನಲ್ಲೇ ಪೆಟ್ರೋಲಿಯಂ ಉತ್ಪನ್ನಗಳಿಗೆ ಅತಿ ಹೆಚ್ಚು ತೆರಿಗೆಯನ್ನು ವಿಧಿಸುತ್ತಿರುವ ದೇಶ ಭಾರತವಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಲಕ್ಷಾಂತರ ಕೋಟಿ ರೂಪಾಯಿಗಳನ್ನು ಅಬಕಾರಿ ಸುಂಕದ ಹೆಸರಿನಲ್ಲಿ ಜನರಿಂದ ಲೂಟಿ ಮಾಡುತ್ತಿರುವಾಗಲೇ ಮೋದಿ ಸರ್ಕಾರವು ತಮ್ಮ ಚಮಚಾ ಬಂಡವಳಿಗರಿಗೆ ರೂ.9 ಲಕ್ಷಕೋಟಿ ರೂಪಾಯಿ ಬ್ಯಾಂಕ್‌ಸಾಲ ಮನ್ನಾ ಮಾಡಿದೆ. ಜನಸಾಮಾನ್ಯರ ಜೀವಮಾನದ ಉಳಿತಾಯದ ಹಣವನ್ನುಕಾರ್ಪೊರೇಟ್ ಕುಳಗಳಿಗೆ ಧಾರೆಯೆರೆದಿದೆ.

ಅಲ್ಲದೇ ನಮ್ಮ ರಾಜ್ಯ ಸರ್ಕಾರವೂ ನೀರು, ವಿದ್ಯುತ್ ಮುಂತಾದವುಗಳ ದರ ಹೆಚ್ಚಿಸುವ ಜತೆಯಲ್ಲೇ ಬಿಬಿಎಂಪಿ ಮೂಲಕ ರಸ್ತೆಗುಂಡಿ ತೆರಿಗೆ, ನಿವೇಶನ ತೆರಿಗೆ, ಪಾರ್ಕಿಂಗ್ ಶುಲ್ಕ, ಕಸ ವಿಲೇವಾರಿ ಶುಲ್ಕ ಮುಂತಾದವುಗಳನ್ನು ಜನರಿಂದ ಸುಲಿಗೆ ಮಾಡಲು ಮುಂದಾಗಿದೆ. ರಾಜ್ಯದಲ್ಲಿ ಜನರು ಕೋವಿಡ್ 19 ಬರ, ಅತಿವೃಷ್ಠಿಯಿಂದಾಗಿ ಸಂಕಷ್ಟದಲ್ಲಿರುವಾಗ ರಾಜ್ಯ ಸರ್ಕಾರ ಜನರ ಸಂಕಷ್ಟಗಳಿಗೆ ಕಿವಿಯಾಗಿ, ಕಣ್ಣಾಗಿ ಸಮಸ್ಯೆಗಳ ಪರಿಹಾರಕ್ಕೆ ಮುಂದಾಗಬೇಕಿತ್ತು. ಆದರೆ ರಾಜ್ಯ ಸರ್ಕಾರದ ನಡೆ ಈ ದಿಕ್ಕಿನಲ್ಲಿಲ್ಲದಿರುವುದು ಸ್ಪಷ್ಟವಾಗಿಗೋಚರಿಸುತ್ತಿದೆ ಎಂದು ಉಮೇಶ್ ಆರೋಪಿಸಿದರು.

ಬಾಗಲಗುಂಟೆ, ರಾಜಗೋಪಾಲನಗರ ಬಿಬಿಎಂಪಿ ಕಛೇರಿಗಳ ಮುಂದೆ ಸಿಪಿಐಎಂ ಪ್ರತಿಭಟನೆ ನಡೆಸಿತು.

ಪ್ರತಿಭಟನೆಯಲ್ಲಿ ಮುಖಂಡರಾದ ವಿಜಯಲಕ್ಷ್ಮಿ, ರೇಣುಕ, ಮಂಗಳಕುಮಾರಿ, ಹರೀಶ್ .ಕೆ, ವಿನಾಯಕ, ತಿಮ್ಮರಾಜು, ಚಂದ್ರಶೇಖರ್ .ಆರ್, ಸುಶೀಲಮ್ಮ ಸೇರಿದಂತೆ ಅನೇಕರಿದ್ದರು. ●

6ನೇ ತರಗತಿಯ ಸಮಾಜ ವಿಜ್ಞಾನ ಪಠ್ಯ ಪುಸ್ತಕದಲ್ಲಿರುವ ಹೊಸ ಧರ್ಮಗಳ ಉದಯ ಪಾಠವನ್ನು ಬೋಧನೆ ಮಾಡಬಾರದು ಮತ್ತು ಮೌಲ್ಯಮಾಪನಕ್ಕೆ ಪರಿಗಣಿಸಬಾರದು ಎಂಬ ಸುತ್ತೋಲೆಯನ್ನು ವಾಪಸ್ ಪಡೆಯಲು ಎಸ್‌ಎಫ್‌ಐ ಆಗ್ರಹ

ಆರನೇ ತರಗತಿಯ ಸಮಾಜ ವಿಜ್ಞಾನ ಪಠ್ಯ ಪುಸ್ತಕದಲ್ಲಿ ಬರುವ ಪೇಜ್ ನಂಬರ್ 82 ಮತ್ತು 83 ರಲ್ಲಿ ಇರುವು ಹೊಸ ಧರ್ಮಗಳ ಉದಯ ಎಂಬ ಪಾಠವನ್ನು ಶೈಕ್ಷಣಿಕ ವರ್ಷದಲ್ಲಿ ಬೋಧನೆ ಮಾಡಬಾರದು ಮತ್ತು ಮೌಲ್ಯಮಾಪನಕ್ಕೆ ಪರಿಗಣಿಸಬಾರದು ಎಂಬ ವಿವಾದಾತ್ಮಕ ಸುತ್ತೋಲೆಯನ್ನು ವಾಪಸ್ ಪಡೆಯಬೇಕೆಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಸಂಘಟನೆಯು ಆಗ್ರಹ ಮಾಡುತ್ತದೆ.

ಆರನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ ಹೊಸ ಧರ್ಮಗಳ ಉದಯ ಎಂಬ ಪಾಠದಲ್ಲಿ ಹೊಸ ಧರ್ಮಗಳ ಏಕೆ ಉದಯಿಸಿದವು ಎಂಬುದರ ಕುರಿತು ವಿವರಣೆಯಲ್ಲಿ ಉತ್ತರ ವೇದಗಳ ಕಾಲದಲ್ಲಿ ವೈದಿಕ ಆಚರಣೆಗಳಾದ ಯಾಗ, ಯಜ್ಞಗಳ ಹೆಸರಿನಲ್ಲಿ ಕೃಷಿಗೆ ನೆರವಾಗುತ್ತಿದ್ದ ಪ್ರಾಣಿಗಳನ್ನು ಕೊಲ್ಲಲಾಗುತ್ತಿತ್ತು, ಇದರಿಂದಾಗಿ ಆಹಾರದ ಉತ್ಪಾದನೆಯು ಕುಂಠಿತವಾಯಿತ್ತು, ಅಷ್ಟು ಮಾತ್ರವಲ್ಲ ಯಾಗ, ಯಜ್ಞಗಳಲ್ಲಿ ಆಹಾರಧಾನ್ಯ ಹಾಲು,ತುಪ್ಪಗಳನ್ನು 'ಹವಿಸ್ಸು' ಎಂದು ದಹಿಸಲಾಗುತ್ತಿತ್ತು, ಪರಿಣಾಮವಾಗಿ ಆಹಾರದ ಅಭಾವ ಕೂಡ ಸೃಷ್ಟಿಯಾಯಿತು, ಈ ದುಬಾರಿ ಆಚರಣೆಗಳು ಜನಸಾಮಾನ್ಯರಿಗೆ ಸಾಧ್ಯವಿರಲಿಲ್ಲ, ಆಚರಣೆಗಳನ್ನು ಸಂಸ್ಕೃತ ಮಂತ್ರಗಳ ಮೂಲಕ ನಡೆಸಲಾಗುತ್ತಿತ್ತು, ಸಂಸ್ಕೃತವು ಪುರೋಹಿತರ ಭಾಷೆಯಾಗಿದ್ದರಿಂದ ಜನ ಸಾಮಾನ್ಯರಿಗೆ ಅರ್ಥವಾಗುತ್ತಿರಲಿಲ್ಲ ಹಾಗಾಗಿ ಜನರು ಸಹ ಜನಸಾಮಾನ್ಯರ ಸರಳ ಭಾಷೆಯ ಮೂಲಕ ಮುಕ್ತಿ ತೋರುವ ಹೊಸ ಧರ್ಮ ಗಳನ್ನು ಅಪೇಕ್ಷಿಸುತ್ತಿದ್ದರು, ಎಂದು ಹೊಸ ಧರ್ಮಗಳ ಉದಯದ ಪ್ಯಾರಾದಲ್ಲಿ ವಿವರಣೆಯನ್ನು ಕೊಡಲಾಗಿದೆ ಇದು ತಪ್ಪಾ? ಸುಮಾರು ವರ್ಷಗಳಿಂದ ಇದ್ದ ಪಾಠವನ್ನು ಏಕೆ ಏಕೆ ಈ ಶೈಕ್ಷಣಿಕ ವರ್ಷದಲ್ಲಿ ಬೋಧನೆ ಮಾಡಬಾರದು ಮತ್ತು ಮೌಲ್ಯಮಾಪನಕ್ಕೆ ಪರಿಗಣಿಸಬಹುದು ಎಂಬುದರ ಅರ್ಥವೇನು, ಒಂದರ್ಥದಲ್ಲಿ ಕೈಬಿಡಬೇಕೆಂಬ ಸೂಚನೆಯು ಈ ಸುತ್ತಲೇ ತೋರಿಸುತ್ತದೆ.

ಹೊಸ ಧರ್ಮಗಳ ಉದಯ ದಲ್ಲಿ ಮೊದಲನೇದಾಗಿ ಬರುವ ನಮ್ಮ ಭಾರತ ದೇಶದಲ್ಲಿ ಜನ್ಮ ತಾಳಿ ಇರುವ ಬೌದ್ಧ ಧರ್ಮದಲ್ಲಿ ಹೊಸ ಧರ್ಮ ಉದಯವಾಗಲು ಉತ್ತರ ವೇದಗಳ ಕಾಲದಲ್ಲಿ ವರ್ಣವ್ಯವಸ್ಥೆಯಿಂದ ಸಾಮಾಜಿಕ ವಿಘಟನೆ ಆರಂಭವಾಯಿತು, ಇದು ಸಮಾಜದಲ್ಲಿ ತಾರತಮ್ಯಕ್ಕೆ ಎಡೆಮಾಡಿಕೊಟ್ಟಿತ್ತು, ಸಮಾಜದಲ್ಲಿ ಬ್ರಾಹ್ಮಣರೆಂದು ಕರೆಯಲ್ಪಡುತ್ತಿದ್ದ ಪುರೋಹಿತ ವರ್ಗ ಹಲವಾರು ಸವಲತ್ತುಗಳನ್ನು ಹೊಂದಿತ್ತು, ಇದೇ ಕಾಲದಲ್ಲಿ ಕ್ಷತ್ರಿಯರು ಕೂಡ ಪ್ರಾಬಲ್ಯಕ್ಕೆ ಬರಲಾರಂಭಿಸಿದರು, ಪರಿಣಾಮವಾಗಿ ನಂತರದ ಕಾಲದಲ್ಲಿ ಹಲವು ಗಣರಾಜ್ಯಗಳು ಉದಯಿಸಿದವು, ಈ ಗಣರಾಜ್ಯಗಳ ಕ್ಷತ್ರಿಯರು ಬಹು ಸವಲತ್ತನ್ನು ಹೊಂದಿದ್ದ ಬ್ರಾಹ್ಮಣರಿಗೆ ಪ್ರತಿಯಾಗಿ ಹೊಸ ಧರ್ಮಗಳ ಉದಯಕ್ಕೆ ಕಾರಣರಾದರು ಎಂದು ಹೇಳುತ್ತದೆ.

ಹಾಗಾದರೆ ನಮ್ಮ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ರಾಜ್ಯದ ವಿದ್ಯಾರ್ಥಿಗಳಿಗೆ ಏನನ್ನು ಬೋಧನೆ ಮಾಡಿಸಲು ಹೊರಟಿದ್ದಾರೆ, ಸಂವಿಧಾನ ಶಿಲ್ಪಿ ಡಾಕ್ಟರ್ ಬಿ.ಆರ್, ಅಂಬೇಡ್ಕರ್ ಅವರ ಹೇಳಿರುವಂತೆ ಇತಿಹಾಸವನ್ನು ತಿಳಿಯದವರು ಇತಿಹಾಸವನ್ನು ಸೃಷ್ಟಿಸಲಾರರು ಎಂಬ ವಾಕ್ಯ ಅತ್ಯಂತ ಸ್ಪಷ್ಟವಾಗಿದೆ ಏಕೆಂದರೆ ಹೊಸ ಧರ್ಮಗಳ ಉದಯಕ್ಕೆ ಕಾರಣ ಏನು ಎಂಬುದನ್ನು ನಾವು ಅರಿತುಕೊಳ್ಳದೆ ಮುಂದೆ ಹೋಗುವುದು ಸರಿಯಲ್ಲ ಮತ್ತು ಬಿಜೆಪಿ ಸರ್ಕಾರವು ತನ್ನ ಅಜೆಂಡಾಗಳನ್ನು ಪಠ್ಯಪುಸ್ತಕದಲ್ಲಿ ಸೇರಿಸುವುದು ಕೆಲವೊಂದು ಪಾಠಗಳನ್ನು ಕೈಬಿಡಲು ಸೂಚಿಸುವುದು ಸಂವಿಧಾನಾತ್ಮಕವಾಗಿ ಸರಿಯಾದ ಕ್ರಮವಲ್ಲ, ಸತ್ಯವನ್ನು ಹೇಳಲಾರದೆ ಸುಳ್ಳನ್ನು ಹೇಳುವುದರ ಮೂಲಕ ರಾಜ್ಯದ ವಿದ್ಯಾರ್ಥಿಗಳನ್ನು ದಿಕ್ಕು ತಪ್ಪಿಸುವ ಕೆಲಸವನ್ನು ಸರ್ಕಾರ ಮಾಡಲು ಹೊರಟಿರುತ್ತದೆ.

ವಿದ್ಯಾರ್ಥಿಗಳಿಗೆ ಸರ್ಕಾರ ಸತ್ಯವನ್ನು ಮರೆಮಾಚುವ ಯತ್ನವನ್ನು ಮಾಡುಲು ಹೊರಟಿರುವುದನ್ನು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ರಾಜ್ಯ ಸಮಿತಿಯು ಖಂಡಿಸುತ್ತದೆ. ಅಲ್ಲದೆ ಕೂಡಲೇ ಈ ಸುತ್ತೋಲೆಯನ್ನು ವಾಪಸ್ ಪಡೆಯಬೇಕೆಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರನ್ನು ಮತ್ತು ಸಂಬಂಧಿಸಿದ ಶಿಕ್ಷಣ ಸಚಿವರನ್ನು ಸಂಘಟನೆಯು ಒತ್ತಾಯಿಸಿದೆ. ಎಸ್‌ಎಫ್‌ಐ ರಾಜ್ಯ ಅಧ್ಯಕ್ಷ ಅಮರೇಶ ಕಡಗದ, ರಾಜ್ಯ ಕಾರ್ಯದರ್ಶಿ ವಾಸುದೇವ ರಡ್ಡಿ, ರಾಜ್ಯ ಉಪಾಧ್ಯಕ್ಷರಗಳಾದ ಶಿವಕುಮಾರ ಮ್ಯಾಗಳಮನಿ, ದಿಲೀಪ್ ಶೆಟ್ಟಿ, ರಾಜ್ಯ ಜಂಟಿ ಕಾರ್ಯದರ್ಶಿ ಭೀಮನಗೌಡ ಹೇಳಿದ್ದಾರೆ.

ರಜನಿಯ “ಆಧ್ಯಾತ್ಮಿಕ ರಾಜಕೀಯ” ಭ್ರಮಾ ರಾಜಕೀಯ ಮಾತ್ರ



ಹಿಂದಿನ ಮುಖ್ಯಮಂತ್ರಿ ಮತ್ತು ಜನಪ್ರಿಯ ನಟರಾದ ಎಂ.ಜಿ.ಆರ್ ಪ್ರತಿಪಾದಿಸುತ್ತಿದ್ದ ‘ಅಣ್ಣಾಇಸಂ’ಗೆ ಅರ್ಥ ಕೇಳಿದಾಗ, ಅದು ‘ಬಂಡವಾಳವಾದ’ ‘ಸಮಾಜವಾದ’ ಮತ್ತು ‘ಫಾಸಿವಾದ’ಗಳ ಮಿಶ್ರಣ ಎಂದೇ ಹೇಳುತ್ತಿದ್ದರು! ರಜನಿ ಅವರ “ಆಧ್ಯಾತ್ಮಿಕ ರಾಜಕೀಯ” ಅದಕ್ಕಿಂತಲೂ ಹೆಚ್ಚು ಗೊಂದಲಮಯವಾಗಿದೆ!! ಆಧ್ಯಾತ್ಮಿಕ ರಾಜಕೀಯದ ಹೆಸರಿನಲ್ಲಿ ಜನರನ್ನು ಗೊಂದಲಕ್ಕೆ ಸಿಲುಕಿಸಿದರೆ ಜಾತ್ಯತೀತತೆಯ ಕಲ್ಪನೆಯನ್ನು ಹಾಳುಗೆಡವಿ, ರಾಜಕೀಯ ಮತ್ತು ಆಡಳಿತದಲ್ಲಿ ಧಾರ್ಮಿಕ ಮೂಲಭೂತವಾದಿಗಳ ರಾಜಕೀಯ ಕಾರ್ಯ ಸೂಚಿಯನ್ನು ಬಲಪಡಿಸಿದಂತಾಗುತ್ತದೆ. ರಾಜಕೀಯವು, ನಿವೃತ್ತಿ ಹೊಂದುತ್ತಿರುವವರ ಕೊನೆಯ ಆಯ್ಕೆ ಅಲ್ಲ ಬದಲಿಗೆ ಹೋರಾಟಗಳ ಯುದ್ಧಭೂಮಿ. ಈಗ ದಿಢೀರನೆ ಪ್ರತ್ಯಕ್ಷವಾಗಿರುವ ಈ ಭ್ರಷ್ಟಾಚಾರ-ವಿರೋಧಿಗಳು ಈ ವ್ಯವಸ್ಥೆಯ ಭಾಗವಾಗಿರುವ ಸಾಂಸ್ಥಿಕ ಭ್ರಷ್ಟಾಚಾರದ ಬಗೆಗೆ ಮಾತನಾಡುವುದಿಲ್ಲ.

ಟಿ.ಕೆ. ರಂಗರಾಜನ್ (ಅನು: ಎಂ.ಜಿ. ವೆಂಕಟೇಶ್)


ನವ ಉದಾರೀಕರಣದ ನೀತಿಗಳ ಫಲವಾಗಿ 1990 ರ ನಂತರ ಭಾರತದ ರಾಜಕೀಯ, ಆರ್ಥಿಕ ಮಹತ್ತರ ತಿರುವು ಪಡೆದು, ದಶಕಗಳ ನಂತರವೂ ಅದರ ನಕಾರಾತ್ಮಕ ಪರಿಣಾಮಗಳನ್ನು ಅನುಭವಿಸುತ್ತಿದ್ದೇವೆ. ಸ್ವಾತಂತ್ರ ಸಂಗ್ರಾಮದಲ್ಲಿ ಮೂಡಿಬಂದಿದ್ದ ರಾಷ್ಟ್ರೀಯ ಸಾರ್ವಭೌಮತ್ವ, ಸ್ವಾಯುತ್ತತೆ, ಒಕ್ಕೂಟ ತತ್ವ, ಜಾತ್ಯಾತೀತತೆಯ ಮೌಲ್ಯಗಳನ್ನು ಪ್ರಶ್ನಿಸಲಾಗುತ್ತಿದೆ.

ನೀತಿಗಳ ಬದಲಾವಣೆ ಮತ್ತು ಅದರ ಫಲವಾದ ಪ್ರಾಯೋಗಿಕ ಬದಲಾವಣೆಗಳು ಸಮಾಜದ ಕೃಷಿ, ಕೈಗಾರಿಕೆ, ಸೇವೆಗಳು, ಶಿಕ್ಷಣ, ಆರೋಗ – ಇತ್ಯಾದಿ ಎಲ್ಲ ರಂಗಗಳಿಗೂ ಆವರಿಸಿ, ಸಾಮಾನ್ಯ ಜನರ ಅದರಲ್ಲೂ ಪರಿಶಿಷ್ಟ ಜನಾಂಗ, ಹಿಂದುಳಿದ ಹಾಗೂ ಜನಸಂಖ್ಯೆಯ ಅರ್ಧ ಭಾಗವಾಗಿರುವ ಮಹಿಳೆಯರ ಜೀವನದ ಮೇಲೆ ಭೀಕರ ಪರಿಣಾಮ ಬೀರಿವೆ. ರಾಜ್ಯಗಳ ಹಕ್ಕು, ಎಲ್ಲ ಭಾಷೆಗಳಿಗೆ ಸಿಗಬೇಕಿರುವ ಸಮಾನ ಗೌರವ, ಸಾಮಾಜಿಕ ವೈವಿಧ್ಯತೆಗಳ ಒಳಗೊಳ್ಳುವಿಕೆ, ಜಾತ್ಯತೀತತೆ – ಸಂವಿಧಾನದದಲ್ಲಿ ಪವಿತ್ರ ಎಂದು ಪರಿಗಣಿತವಾಗಿರುವ ಎಲ್ಲ ಮೌಲ್ಯಗಳನ್ನೂ ಇಂದು ವಿಕೃತಗೊಳಿಸಲಾಗುತ್ತಿದೆ. ಧರ್ಮ, ಭಾಷೆ, ಜಾತಿ, ಕುಲಗಳ ಆಧಾರದಲ್ಲಿ ದ್ವೇಷ ಬಿತ್ತಲಾಗುತ್ತಿದೆ. ಈ ದ್ವೇಷಪೂರಕ ಪ್ರಚಾರಕ್ಕೆ ಸಾಂಪ್ರದಾಯಿಕವಾದ ತಪ್ಪಾದ ವಿವರಣೆಗಳನ್ನು ಕೊಡಲಾಗುತ್ತಿದೆ. ಪ್ರಾಚೀನ ಉಜ್ವಲ ಪರಂಪರೆ ಮತ್ತು ಸ್ವಾತಂತ್ರ್ಯ ಚಳುವಳಿಯ ತ್ಯಾಗ ಬಲಿದಾನಗಳನ್ನು ಕ್ಷುಲ್ಲಕಗೊಳಿಸಲಾಗುತ್ತಿದೆ. ಸಾಂವಿಧಾನಿಕ ಮೌಲ್ಯಗಳ ಜಾಗದಲ್ಲಿ ಅಪ್ರಯೋಜಕ, ಕೊಳೆತ ಮನುಸ್ಮೃತಿಯನ್ನು ಸ್ಥಾಪಿಸಲಾಗುತ್ತಿದೆ. ಟಿವಿ, ಮುದ್ರಣ, ಸಾಮಾಜಿಕ ಮಾಧ್ಯಮಗಳ ಪ್ರಚಾರಗಳ ಮೂಲಕ ಯುವ ಜನತೆಯನ್ನು ಹಿಂದುತ್ವದ ತತ್ವಗಳಿಗೆ ಅಡಿಯಾಳಾಗುವಂತೆ ನೋಡಿಕೊಳ್ಳಲಾಗುತ್ತಿದೆ.

ದಾರಿ ತಪ್ಪಿಸುವ ಕ್ರಮಗಳು:

ಹಲವು ಕ್ಷೇತ್ರಗಳಲ್ಲಿ ಆರ್ಥಿಕ ಸಂಕಷ್ಟಗಳ ವಿರುದ್ಧ ದುಡಿಯುವ ವರ್ಗದ ಹೋರಾಟಗಳು ರಾಷ್ಟ್ರೀಯ ವ್ಯಾಪಿಯನ್ನು ಹೊಂದುತ್ತಿರುವಾಗ, ಜೀವನೋಪಾಯ ಮತ್ತು ನ್ಯಾಯಕ್ಕಾಗಿ ಹೋರಾಡುತ್ತಿರುವ ಅವರನ್ನು ವಿಭಜಿಸಲು ಆಳುವ ವರ್ಗ ಹುನ್ನಾರ ನಡೆಸಿದೆ. “ಆಧ್ಯಾತಿಕ ರಾಜಕೀಯ” ಮುಂತಾದ ಪದಗಳಿಂದ ಜನರನ್ನು ದೈನಂದಿನ ಸಮಸ್ಯೆಗಳಿಂದ ವಿಮುಖರನ್ನಾಗಿಸಲು ಮಾಧ್ಯಮಗಳು ತೊಡಗಿವೆ. ಇಂತಹ ಸನ್ನಿವೇಶದಲ್ಲಿ ನಿವೃತ ನ್ಯಾಯಾಧೀಶರು, ಐಎಎಸ್, ಐಪಿಎಸ್ ಮಿಲಿಟರಿ ಅಧಿಕಾರಿಗಳು ಮತ್ತು ‘ನಿವೃತ್ತಿಯ ಅಂಚಿನಲ್ಲಿರುವ’ ಚಲನಚಿತ್ರ ನಟರು ರಾಜಕೀಯಕ್ಕೆ ಪ್ರವೇಶ ಪಡೆಯಲು ಸಿದ್ಧರಾಗುತ್ತಿದ್ದಾರೆ. ಇಂದಿನ ಸಾಂಸ್ಕೃತಿಕ ಅವನತಿ ಮತ್ತು ಭೀಕರ ದುಸ್ಥಿತಿಗೆ ಅವರೂ ಕಾರಣವೆಂಬುದನ್ನು ಮರೆತು, ಹಾಳಾದ ವ್ಯವಸ್ಥೆಯನ್ನು ಸರಿಪಡಿಸಲು ಬಂದಿರುವ ಅವತಾರ ಪುರುಷರಂತೆ ಆಡುತ್ತಿದ್ದಾರೆ. ಮಾಧ್ಯಮಗಳಿಂದ ಇವರಿಗೆ ಸಿಗುವ ಅಗಾಧ ಪ್ರಚಾರ ಮತ್ತು ಸಾಮಾಜಿಕ ಬದಲಾವಣೆ ಬಯಸುವ ತರುಣರು ಈ ದುರುದ್ದೇಶದ ಆಟಕ್ಕೆ ಬಲಿಯಾಗುತ್ತಿರುವುದು ದುರದೃಷ್ಟಕರ. ಆರ್‌ಎಸ್‌ಎಸ್ ನ ರಾಜಕೀಯ ಅಂಗವಾದ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಆಳ್ವಿಕೆಯಲ್ಲಿ ಸ್ವಾತಂತ್ರ ಚಳುವಳಿಯ ತಿರುಚುವಿಕೆ, ಪ್ರಜಾಪ್ರಭುತ್ವ ತತ್ವಗಳ ಅಪಮೌಲ್ಯ, ಐಕ್ಯತೆ, ಸಾಂವಿಧಾನಿಕ ಮೌಲ್ಯಗಳ ಕಡೆಗಣನೆ, ರಾಜ್ಯಗಳ ಹಕ್ಕು ಕಸಿಯುವಿಕೆ ವ್ಯಾಪಕವಾಗಿ ನಡೆದಿದೆ.

ದೇಶದ ಹಿತಾಸಕ್ತಿಗಳನ್ನು ಕಾರ್ಪೋರೇಟ್ ಮತ್ತು ಬಹುರಾಷ್ಟ್ರೀಯ ಕಂಪನಿಗಳಿಗೆ ಒತ್ತೆಯಿಡುವುದು ಅವ್ಯಾಹತವಾಗಿ ಮುಂದುವರೆದಿದೆ. ಜನರ ಆಸ್ತಿಗಳಾದ ಸಾರ್ವಜನಿಕ ಉದ್ದಿಮೆಗಳನ್ನು ಮಾರಲಾಗುತ್ತಿದೆ. ಕೃಷಿ ಕಾನೂನು ಮೇಲ್ನೋಟದಲ್ಲಿ ಮೋಸದಿಂದ ಅಂಗೀಕಾರಗೊಂಡಿದೆ. ಬ್ಯಾಂಕ್, ವಿಮಾ, ರೈಲ್ವೇ ಮತ್ತು ಸೇವಾ ಕ್ಷೇತ್ರಗಳನ್ನು ಹೆಚ್ಚೆಚ್ಚಾಗಿ ವೇಗವಾಗಿ ಖಾಸಗಿ ಕ್ಷೇತ್ರಕ್ಕೆ ಮತ್ತು ಕೃಷಿ ಕ್ಷೇತ್ರವನ್ನು ಕಾರ್ಪೋರೇಟ್‌ಗಳಿಗೆ ವಹಿಸಿ ಕೊಡಲಾಗುತ್ತಿದೆ.



ಕೃಪೆ: ಸತೀಶ್ ಆಚಾರ್ಯ

ದ್ರಾವಿಡ ಪಕ್ಷಗಳು ತಮಿಳುನಾಡಿನಲ್ಲಿ 1967 ರಿಂದ ಆಡಳಿತ ನಡೆಸುತ್ತಿದ್ದು ಅವುಗಳ ಆಡಳಿತದ ಬಗ್ಗೆ ಟೀಕೆ ಇದ್ದರೂ ಈ ರಾಜ್ಯ ಅನೇಕ ವಿಷಯಗಳಲ್ಲಿ ಗುಜರಾತ್, ಉತ್ತರಪ್ರದೇಶ, ಬಿಹಾರ್ ರಾಜ್ಯಗಳಿಗಿಂತ ಮುಂದಿದೆ. ಆದರೆ ಈಗಿನ ಎಐಡಿಎಂಕೆ ಸರ್ಕಾರ ಘೋಷಿತ ದ್ರಾವಿಡ ನೀತಿಗಳಿಂದ ದೂರಸರಿಯುತ್ತಾ ಬಿಜೆಪಿ ಕೃಪಾಕಟಾಕ್ಷದಲ್ಲಿ ಬದುಕಲು ಹೊರಟಿದ್ದು, ತಮಿಳುನಾಡಿನ ಹಿತಾಸಕಿಗಳನ್ನು ಬಲಿಕೊಡುತ್ತಿದೆ. ಇದು ಬಿಜೆಪಿಗೆ ರಾಜ್ಯದಲ್ಲಿ ಕಾಲೂರಲು ಅವಕಾಶ ಮಾಡಿಕೊಡುತ್ತಿದೆ.

ದಿಢೀರ್ ರಾಜಕಾರಣಿಗಳು

ಈ ಹಿನ್ನೆಲೆಯಲ್ಲಿ ಸಿನಿಮಾ ನಟರಾದ ರಜನಿಕಾಂತ್ ಕಮಲ ಹಾಸನ್ ಬಂದು ತಮಿಳುನಾಡು ರಾಜಕೀಯವನ್ನು ಅಡಿಮೇಲು ಮಾಡುತ್ತಾರೆ ಎನ್ನಲಗಿದೆ. ಕಮಲ್ ಪಕ್ಷ “ಮಕ್ಕಳ ನೀಧಿ ಮೈಯಂ” (ಮೈಯ್ಯಂ ಅಂದರೆ ತಮಿಳಿನಲ್ಲಿ ಕೇಂದ್ರ) ಈಗ ಘೋಷಿತವಾಗಿದೆ. ಡಿಸೆಂಬರ್ 31 ಕ್ಕೆ ರಜನಿ ಪಕ್ಷದ ಘೋಷಣೆ ಆಗಬೇಕಿತ್ತು. ಆದರೆ, ಯಾವತ್ತೂ ರಾಜಕೀಯ ಪ್ರವೇಶಿಸಲು ಹಿಂಜರಿಯುತ್ತಿದ್ದ ರಜನೀಕಾಂತ್, ಆರೋಗ್ಯದ ಕಾರಣ ಕೊಟ್ಟು ಪ್ರಾರಂಭವಾಗುವ ಮೊದಲೇ ರಾಜಕೀಯದಿಂದ ಹಿಂದೆ ಸರಿದಿದ್ದಾರೆ. ಅವರು ತಮ್ಮದು “ಆಧ್ಯಾತ್ಮಿಕ ರಾಜಕೀಯ” ಎಂದು ಹೇಳಿಕೊಂಡಿದ್ದರು. ಪ್ರಜಾತಂತ್ರದಲ್ಲಿ ಎಲ್ಲರಿಗೂ, ರಾಜಕೀಯ ಕ್ಷೇತ್ರ ಪ್ರವೇಶಿಸಲು ಅವಕಾಶವಿದೆ, ರಜನೀಕಾಂತ್ ಅವರೂ ಪ್ರವೇಶಿಸಬಹುದು. ಆದರೆ ಮಾಧ್ಯಮಗಳಲ್ಲಿ “ರಜನಿ ರಾಜಕೀಯ ಪ್ರವೇಶ” ಎಂಬುದು ಏಕಮಾತ್ರ ಸುದ್ದಿಯೇನೋ ಎಂಬಂತೆ ಪ್ರಚಾರ ಪಡೆದು, ಕೆಲಕಾಲ ನಂತರ ಈಗ ಠುಸ್ ಆಗಿದೆ. ಎಷ್ಟೇ ಗೊಂದಲಗಳಿದ್ದರೂ ಕಮಲ್ ಹಾಸನ್ ಹಿಂದುತ್ವ ರಾಜಕೀಯದಿಂದ ಸ್ಪಷ್ಟ ಅಂತರ ಕಾಪಾಡಿಕೊಂಡಿದ್ದಾರೆ.

ಅವರ ಸಿನಿಮಾ ಅಭಿಮಾನಿಗಳಿಗೆ ಒಬ್ಬ “ವಿಶ್ವನಾಯಕ” (ವಿಶ್ವ ಗುರು ಅಲ್ಲ) ಮತ್ತು ಇನ್ನೊಬ್ಬ “ಸೂಪರ್‌ಸ್ಟಾರ್” ಆಗಿರುವವರು ಭ್ರಷ್ಟಾಚಾರ ತೊಡೆದು ಹಾಕಲು ಬಂದ ಅವತಾರಗಳಂತೆ ಆಡುತ್ತಿದ್ದಾರೆ. ‘ಎಲ್ಲವನ್ನು ಬದಲಾಯಿಸುತ್ತೇವೆ’ ಎಂದು ಅವರು ಪದೇಪದೇ ಹೇಳುತ್ತಿರುವುದು ಸಿನಿಮಾ ಡೈಲಾಗ್ ರೀತಿಯಲ್ಲಿದೆ. ರಾಜಕೀಯ ಮತ್ತು ಆಧ್ಯಾತ್ಮಿಕತೆ ಪ್ರತ್ಯೇಕ ಕ್ಷೇತ್ರಗಳಾಗಿದ್ದರೂ ರಜನಿ ಇವುಗಳನ್ನು ಸೇರಿಸುತ್ತಿರುವುದರಿಂದ ಗೊಂದಲವುಂಟಾಗುತ್ತಿದೆ. ಈ ಕುರಿತು ಜನರ ಪ್ರಶ್ನೆಗಳಿಗೆ ಉತ್ತರಗಳು ಸಿಗುತ್ತಿಲ್ಲ. ಹಿಂದಿನ ಮುಖ್ಯಮಂತ್ರಿ ಜನಪ್ರಿಯ ನಟರಾದ ಎಂ.ಜಿ.ಆರ್ ಪ್ರತಿಪಾದಿಸುತ್ತಿದ್ದ ‘ಅಣ್ಣಾಇಸಂ’ಗೆ ಅರ್ಥ ಕೇಳಿದಾಗ, ಅದು ‘ಬಂಡವಾಳವಾದ’ ‘ಸಮಾಜವಾದ’ ಮತ್ತು ‘ಫಾಸಿವಾದ’ಗಳ ಮಿಶ್ರಣ ಎಂದೇ ಹೇಳುತ್ತಿದ್ದರು! ರಜನಿ ಅವರ “ಆಧ್ಯಾತ್ಮಿಕ ರಾಜಕೀಯ” ಅದಕ್ಕಿಂತಲೂ ಹೆಚ್ಚು ಗೊಂದಲಮಯವಾಗಿದೆ!!

ಆಧ್ಯಾತ್ಮಿಕತೆ ಅಂದರೇನು?

ಆಧ್ಯಾತ್ಮಿಕತೆ ವೈಯಕ್ತಿಕ ಶಾಂತಿ ಮತ್ತು ನೆಮ್ಮದಿಯ ಹುಡುಕಾಟ. ಪ್ರಪಂಚದ ಎಲ್ಲ ಕಡೆಗಳಲ್ಲೂ ಎಲ್ಲ ಧರ್ಮಗಳಲ್ಲೂ ಆಧ್ಯಾತ್ಮಿಕತೆಯ ಧಾರೆ ಕಾಣಸಿಗುತ್ತದೆ. ಆಧ್ಯಾತ್ಮಿಕತೆ ಮತ್ತು ಧರ್ಮಗಳು ಒಂದೇ ಅಲ್ಲ. ಅವುಗಳ ನಡುವೆ ಸಾಮ್ಯವೂ ಇದೆ, ಭಿನ್ನತೆಗಳೂ ಇವೆ. ಆಧ್ಯಾತ್ಮಿಕತೆಯ ಪ್ರಮುಖ ಕಾಳಜಿ, ಹುಟ್ಟಿನ ಮೊದಲು ಮನುಷ್ಯರು ಏನಾಗಿದ್ದರು ಮತ್ತು ಸಾವಿನ ನಂತರ ಮನುಷ್ಯರು ಏನಾಗುತ್ತಾರೆ ಎಂಬುದರ ಕುರಿತು ಇರುತ್ತದೆ. ಆದರೆ ಆಧ್ಯಾತ್ಮಿಕತೆ ಮತ್ತು ರಾಜಕೀಯ ಎರಡೂ ಪೂರ್ಣವಾಗಿ ಭಿನ್ನವಾದವುಗಳು.

ಧಾರ್ಮಿಕ ನಂಬಿಕೆಯುಳ್ಳ ಸ್ವಾಮಿ ವಿವೇಕನಂದರು, ನಾರಾಯಣಗುರು, ರಾಮಲಿಂಗ ಅಡಿಗಳರ್, ವೈಗುಂಡಸಾಮಿ ಮುಂತಾದವರು ಸಮಾಜ ಸುಧಾರಕರೂ ಆಗಿದ್ದರು. ಅವರು ಧಾರ್ಮಿಕ ಚೌಕಟ್ಟಿನೊಳಗೆ ಸಮಾಜ ಸುಧಾರಣೆಗೆ ಗಟ್ಟಿದನಿ ಎತ್ತಿದ್ದರು. ಅವರು ಧರ್ಮಗಳ ಸಾಂಸ್ಥೀಕರಣದ, ಮೌಢ್ಯಗಳ, ಜಾತಿ ತಾರತಮ್ಯದ ವಿರುದ್ಧವಿದ್ದರು. ಮಹಿಳೆಯರ ಹಕ್ಕಿನ ಪ್ರತಿಪಾದಕರಾಗಿದ್ದರು. ರಜನೀಕಾಂತ್ ಸ್ಟೈಲಿನ “ಆಧ್ಯಾತ್ಮಿಕ ರಾಜಕೀಯ” ಇದಕ್ಕೆ ತದ್ವಿರುದ್ಧವಾಗಿದ್ದು, ವಿರೋಧಾಭಾಸಗಳಿಂದ ಕೂಡಿದ್ದು, ಬಿಜೆಪಿ ತತ್ವಗಳನ್ನು ಹೋಲುತ್ತಾ ಪ್ರತಿಗಾಮಿ ತತ್ವಗಳನ್ನು ಛಂದ ಕಾಣಿಸುವ ಪ್ರಯತ್ನ ಮಾಡುತ್ತದೆ.

ಆಧ್ಯಾತ್ಮಿಕತೆಯನ್ನು ಅಮೇರಿಕಾ ಸೇರಿದಂತೆ ಹಲವು ವಿಶ್ವವಿದ್ಯಾನಿಲಯಗಳಲ್ಲಿ ಬೋಧಿಸಿದರೂ ಅದು ಧರ್ಮ ಸಂಬಂಧಿಯಾಗಿರದೆ ಯೋಗ, ಉಸಿರಾಟದ ವ್ಯಾಯಾಮದ ಪಠ್ಯ ಕ್ರಮದಂತಿರುತ್ತದೆ. ಶಂಕರಾಚಾರ್ಯರ ಪ್ರಕಾರ ಪ್ರಪಂಚ ಕೇವಲ ಮಾಯೆ. ಬ್ರಹ್ಮ (ಪರಮಾತ್ಮ) ಮಾತ್ರ ಸತ್ಯ. ಆತ್ಮವು ಬ್ರಹ್ಮನ ಮಾಯಾರೂಪ ಮಾತ್ರ. ಆತ್ಮ, ಪರಮಾತ್ಮ ಎಲ್ಲಾ ಒಂದೇ ತತ್ವ ಎನ್ನುವ ಅದ್ವೈತ, ಮಧ್ವಾಚಾರ್ಯರ ದ್ವೈತ, ರಾಮಾನುಜಾಚಾರ್ಯರ ವಿಶಿಷ್ಟಾದ್ವೈತ – ಇವುಗಳ ಮಧ್ಯೆ ತಾತ್ವಿಕ ಭಿನ್ನಾಭಿಪ್ರಾಯಗಳಿವೆ. ಆತ್ಮ, ಪರಮಾತ್ಮ, ಪ್ರಕೃತಿ ಒಂದೇನೇ ಬೇರೆಯೇ? ಅವುಗಳ ನಡುವಿನ ಸಂಬಂಧಗಳೇನು ಎಂಬುದರ ಕುರಿತು ಈಗಲೂ ತಾತ್ವಿಕ ವಾಗ್ವಾದಗಳು ಮುಂದುವರೆದಿವೆ. ಸುಬ್ರಮಣ್ಯ ಭಾರತಿಯವರ ಹಾಡಿನಲ್ಲಿ : ನಿಂತಿರುವ, ಹಾರುವ, ನಡೆಯುವ ಎಲ್ಲಾ ವಿದ್ಯಮಾನಗಳು ಕನಸೇ; ಎಲ್ಲಾ ಕಲ್ಪನೆ, ಕಲಿಕೆಗಳಿಗೆ ಅರ್ಥವಿಲ್ಲವೇ – ಹೀಗೆ ಪ್ರಶ್ನಿಸುತ್ತಾ ನಾವು ಕಾಣುತ್ತಿರುವುದಕ್ಕೆ ಅರ್ಥವಿದೆಯೇ ಹೊರತು ಕಾಣದ್ದನ್ನು ನಂಬುವುದಿಲ್ಲ ಎನ್ನುತ್ತಾರೆ. ಅವರು ದೇವರನ್ನು ನಂಬಿದರೂ ಮಾಯಾವಾದವನ್ನು ನಿರಾಕರಿಸಿರುತ್ತಾರೆ.

ಮಾರ್ಕ್ಸ್‌ವಾದ ಜನರ ನಂಬಿಕೆಗಳ ಹಿನ್ನೆಲೆ, ಕಾರಣಗಳನ್ನು ಅರ್ಥ ಮಾಡಿಕೊಳ್ಳುತ್ತದೆ. ಆರ್ಥಿಕ-ರಾಜಕೀಯ ಸ್ಥಿತಿಗಳ ಬದಲಾವಣೆಗಳ ಮುಖಾಂತರ ಮಾತ್ರವೇ, ಜಗತ್ತಿನ ಎಲ್ಲ ಜನರಿಗೆ ಭ್ರಾಮಕವಲ್ಲದ ನಿಜವಾದ, ಎಲ್ಲ ಬಗೆಯ ನೆಮ್ಮದಿಯ ಬದುಕು ತರಲು ಸಾಧ್ಯ ಎಂಬುದು ಮಾರ್ಕ್ಸ್‌ವಾದದ ತಿಳುವಳಿಕೆ. ಆಧ್ಯಾತ್ಮಿಕ ರಾಜಕೀಯದ ಹೆಸರಿನಲ್ಲಿ ಜನರನ್ನು ಗೊಂದಲಕ್ಕೆ ಸಿಲುಕಿಸಿದರೆ, ಜಾತ್ಯತೀತತೆಯ ಕಲ್ಪನೆಯನ್ನು ಹಾಳುಗೆಡವಿ, ರಾಜಕೀಯ ಮತ್ತು ಆಡಳಿತದಲ್ಲಿ ಧಾರ್ಮಿಕ ಮೂಲಭೂತವಾದಿಗಳ ರಾಜಕೀಯ ಕಾರ್ಯ ಸೂಚಿಯನ್ನು ಬಲಪಡಿಸಿದಂತಾಗುತ್ತದೆ. ಇದರ ಮೂಲಕ ಹಿಂದುತ್ವ ಶಕ್ತಿಗಳು ಕಾರ್ಪೋರೇಟ್ ಶಕ್ತಿಗಳಿಗೆ ಕೊಡುತ್ತಿರುವ ಬೆಂಬಲವನ್ನು ಜನರಿಂದ ಮರೆ ಮಾಚಲಾಗುತ್ತದೆ.

ರಜನೀಕಾಂತ್, ಕಮಲ ಹಾಸನ್ ಭ್ರಷ್ಟಾಚಾರದ ವಿರುದ್ಧ ಮಾತನಾಡುತ್ತಾರೆ. ಆದರೆ ಭ್ರಷ್ಟಾಚಾರವು ಒಂದು ಸ್ವತಂತ್ರ ವಿದ್ಯಮಾನವಲ್ಲ, ಬಂಡವಾಳಶಾಹಿ ವ್ಯವಸ್ಥೆಯ ಅನಿವಾರ್ಯ ಪರಿಣಾಮ. ಕಮ್ಯೂನಿಸ್ಟರು ಹೋರಾಡುವುದು ಭ್ರಷ್ಟಾಚಾರದ ವಿರುದ್ಧ ಮಾತ್ರವಲ್ಲ, ಅದರ ಮೂಲ ಕಾರಣವಾಗಿರುವ ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಸಹ. ಭ್ರಷ್ಟಾಚಾರಕ್ಕೆ ಮೂಲ ಕಾರಣವಾಗಿರುವ ಅಂಶಗಳನ್ನು ನಿರ್ಮೂಲನ ಮಾಡದೆ ಭ್ರಷ್ಟಾಚಾರವನ್ನು ನಿರ್ಮೂಲನ ಮಾಡಲು ಸಾಧ್ಯವಿಲ್ಲ.

ಭ್ರಷ್ಟಾಚಾರದ ಮೂಲ:

ಲೋಕಪಾಲ ಮಸೂದೆಗಾಗಿ

➚

ರೈತರ ಪ್ರತಿಭಟನೆಗಳು ಮತ್ತು ಇಂತಹ ಇತರ ಪ್ರತಿಭಟನೆಗಳು ತನ್ನನ್ನು ಆವರಿಸಿಕೊಳ್ಳುತ್ತಿರುವುದನ್ನು ಕಾಣುತ್ತಿರುವ ಸರಕಾರ ಇವನ್ನೆಲ್ಲ ವರದಿಮಾಡದಂತೆ ತಡೆದರೆ ಅವೆಲ್ಲ ನಿಂತು ಹೋಗುತ್ತವೆ ಎಂಬ ಯೋಚನೆಯಿಂದ ನ್ಯುಸ್‌ಕ್ಲಿಕ್‌ನಂತಹ ದನಿಗಳನ್ನು ಅಡಗಿಸುವ ಕೆಲಸಕ್ಕೆ ಕೈಹಾಕಿದೆ ಎಂಬುದು ಸ್ಪಷ್ಟ. ಇದೇ ಇ.ಡಿ. ದಾಳಿಯ ನಿಜವಾದ ಸಾರ.

NEWSCLICK



ನ್ಯುಸ್‌ಕ್ಲಿಕ್ ಕತೆ : ಜನರ ದನಿಗಳನ್ನು ಅಡಗಿಸುವ ಪ್ರಯತ್ನ

(ಪೀಪಲ್ಸ್ ಡೆಮಾಕ್ರಸಿ, ಫೆ.15–21, 2021ರಲ್ಲಿ ಪ್ರಕಟವಾಗಿರುವ ಸವೇರಾ ಅವರ ಲೇಖನದಿಂದ)

ಫೆಬ್ರುವರಿ 8,2021ರ ಮುಂಜಾನೆ. ಜಾರಿ ನಿರ್ದೇಶನಾಯ(ಇ.ಡಿ.)ದ ಹತ್ತಾರು ಮಂದಿ ದಿಲ್ಲಿಯ ಎಂಟು ಸ್ಥಳಗಳಿಗೆ ಬಂದರು, ಏಕಕಾಲದಲ್ಲಿ ದಾಳಿ ಆರಂಭಿಸಿದರು. ಇವೆಲ್ಲವೂ ಸ್ವತಂತ್ರ ಸುದ್ದಿ ವೆಬ್ ತಾಣ 'ನ್ಯುಸ್‌ಕ್ಲಿಕ್‌ಗೆ ಸಂಬಂಧಪಟ್ಟವುಗಳು –ಈ ಸಂಸ್ಥೆಯ ಪ್ರಧಾನ ಕಚೇರಿ ಆವರಣ, ಅದರ ಮುಖ್ಯ ಸಂಪಾದಕ ಪ್ರಬೀರ್ ಪುರಕಾಯಸ್ಥ, ಸಂಪಾದಕ ಪ್ರಾಂಜಲ್ ಪಾಂಡೆ, ಪ್ರಖ್ಯಾತ ಲೇಖಕಿ ಗೀತ ಹರಿಹರನ್ ಮತ್ತು ಇತರ ಆಡಳಿತ ಹಾಗೂ ತಾಂತ್ರಿಕ ಸಿಬ್ಬಂದಿಗಳ ನಿವಾಸಗಳು.

ಎಲ್ಲರ ಫೋನುಗಳನ್ನು ತೆಗೆದುಕೊಂಡರು, ಯಾರೂ ಮನೆಯಿಂದ ಹೊರಹೋಗಬಾರದು ಎಂದರು, ಪ್ರಶ್ನೆಗಳ ಸುರಿಮಳೆಗರೆದರು–ಮೌಖಿಕ ಮತ್ತು ಲಿಖಿತ ಎರಡೂ. ಸತತ ವಿಚಾರಣೆಗಳ ಮೂಲಕ ಸುಸ್ತುಗೊಳಿಸುವುದೇ ಅವರ ಉದ್ದೇಶವಿದ್ದಂತಿತ್ತು.

ದಾಳಿ ಇತರೆಲ್ಲ ಸ್ಥಳಗಳಲ್ಲಿ 36 ಗಂಟೆಗಳ ಕಾಲ ಮುಂದುವರೆದರೆ, ಪ್ರಬೀರ್ ಪುರಕಾಯಸ್ಥರ ನಿವಾಸದಲ್ಲಿ 113 ಗಂಟೆಗಳ ವರೆಗೆ, ಅಂದರೆ ಸುಮಾರು ಐದು ದಿನಗಳ ವರೆಗೆ ಮುಂದುವರೆಯಿತು. ಹೋಗುವಾಗ ವೈಯುಕ್ತಿಕ ಲ್ಯಾಪ್‌ಟಾಪ್‌ಗಳು, ಫೋನುಗಳು, ದಸ್ತಾವೇಜುಗಳು ಮುಂತಾದವುಗಳನ್ನು ಒಯ್ದರು. ನ್ಯುಸ್‌ಕ್ಲಿಕ್ ಕಚೇರಿಯಲ್ಲಿ ಇದ್ದ ಫೈಲುಗಳು, ದಸ್ತಾವೇಜುಗಳನ್ನಲ್ಲದೆ ವಿವಿಧ ರೀತಿಗಳ ವೀಡಿಯೋ ಸಾಧನಗಳು, ಪಿಸಿಗಳು, ಲ್ಯಾಪ್‌ಟಾಪ್‌ಗಳು ಇತ್ಯಾದಿಗಳನ್ನೂ ಒಯ್ದರು.

ಈ ವಿಲಕ್ಷಣ ದಾಳಿಯ ಉದ್ದೇಶವೇನು?

ಇ.ಡಿ. ಎಲ್ಲರಿಗೂ ತಿಳಿದಿರುವಂತೆ ವಿವಿಧ ರೀತಿಗಳ ಆರ್ಥಿಕ ಅಪರಾಧಗಳ ತನಿಖೆ ಮಾಡುವುದಕ್ಕಾಗಿ ಇರುವ ಹಣಕಾಸು ಇಲಾಖೆಯ ಒಂದು ವಿಭಾಗ. ದಾಳಿಗೆ ಬಂದವರು ತಾವು ಪಿ.ಎಂ.ಎಲ್.ಎ.(ಕಪ್ಪು ಹಣವನ್ನು ಬಿಳಿ ಮಾಡುವುದನ್ನು ತಡೆಯುವ ಕಾಯ್ದೆ)2002ರ ಉಲ್ಲಂಘನೆಯನ್ನು ತನಿಖೆ ಮಾಡುತ್ತಿದ್ದೇವೆ ಎಂದರು. ಅಂದರೆ ಕ್ರಿಮಿನಲ್ ಚಟುವಟಿಕೆಗಳಿಂದ ಬಂದ ಹಣವನ್ನು ಹೊಂದಿರುವುದು, ಮುಚ್ಚಿಡುವುದು ಅಥವ ಬಳಸಿರುವುದರ ತನಿಖೆ. ನ್ಯುಸ್‌ಕ್ಲಿಕ್ ಇಂತಹ ಕಾನೂನುಬಾಹಿರ ಹಣವನ್ನು ಬಳಸುತ್ತಿದೆ ಎಂಬ ತೀರ್ಮಾನಕ್ಕೆ ಬಂದಿದ್ದೇವೆ, ಅದನ್ನು ಕಂಡು ಹಿಡಿಯಲು ಸಂಬಂಧಪಟ್ಟ ವ್ಯಕ್ತಿಗಳ ಮೇಲೆ ದಾಳಿ ಮಾಡುತ್ತಿದ್ದೇವೆ ಎಂಬುದು ಮಾಧ್ಯಮಗಳಲ್ಲಿ ಪ್ರಕಟವಾಗಿರುವ ಇ.ಡಿ. ಅಧಿಕಾರಿಗಳ ಅಧಿಕೃತ ವಿವರಣೆ.

ತಮ್ಮಲ್ಲಿ ಮುಚ್ಚುಮರೆ ಮಾಡುವಂತದ್ದೇನೂ ಇಲ್ಲ, ತಾವು ಯಾವುದೇ ಕಾಯ್ದೆಯನ್ನು ಉಲ್ಲಂಘಿಸಿಲ್ಲ, ತಮ್ಮ ಚಟುವಟಿಕೆಗಳಿಗೆ ಅನ್ವಯವಾಗುವ ಎಲ್ಲ ನಿಯಂತ್ರಣ ವಿಧಿನಿಯಮಗಳನ್ನು ಪಾಲಿಸಿದ್ದೇವೆ ಮತ್ತು ಈ ಬಗ್ಗೆ ಕೇಳಿರುವ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಿದ್ದೇವೆ ಎಂದು ನ್ಯುಸ್‌ಕ್ಲಿಕ್ ಸಾರ್ವಜನಿಕ ಹೇಳಿಕೆಗಳನ್ನು ಮತ್ತೆ–ಮತ್ತೆ ಕೊಟ್ಟಿದೆ.

ಆದರೆ ಇವೆಲ್ಲದರ ಮರೆಯಲ್ಲಿ ಈ 'ತನಿಖೆ' ಎಂಬುದರ ನಿಜ ಉದ್ದೇಶವನ್ನು ಕಾಣದಿರುವುದು ಸತ್ಯಕ್ಕೆ ಬಗೆವ ಅಪಚಾರವಾಗುತ್ತದೆ.

ವಾಸ್ತವ ಸಂಗತಿಯೆಂದರೆ ನರೇಂದ್ರ ಮೋದಿ ನೇತೃತ್ವದ ಪ್ರಸಕ್ತ ಸರಕಾರ ತಮ್ಮ ಧೋರಣೆಗಳಿಗೆ ಯಾವುದೇ ರೀತಿಯ ಟೀಕೆ ಮತ್ತು ವಿರೋಧವನ್ನು ದಮನ ಮಾಡಲು ಸರಕಾರೀ ಏಜೆನ್ಸಿಗಳನ್ನು ನಯವಾಗಿ, ನಿರ್ವಿಘ್ನತೆಯಿಂದ ಬಳಸುವ ವಿಜ್ಞಾನವನ್ನು ಸಿದ್ಧಿಸಿಕೊಂಡಿದೆ. ಕಳೆದ ಆರು ವರ್ಷಗಳಲ್ಲಿ ವ್ಯಕ್ತಿಗಳ ಮತ್ತು ಸಂಘಟನೆಗಳ ದನಿಯನ್ನು ಅಡಗಿಸಲು ಅಥವ ಭಯದ ವಾತಾವರಣ ಸೃಷ್ಟಿಸಲು'ಮೋದಿ ಸರಕಾರ ತನ್ನ ಅಡಿಯಲ್ಲಿರುವ ಎಲ್ಲ ಸಂಸ್ಥೆಗಳನ್ನು ಬಳಸಿಕೊಂಡಿದೆ. ಸಿಬಿಐ, ಎನ್‌ಐಎ ಮುಂತಾದ ಕೇಂದ್ರೀಯ ತನಿಖಾ ಸಂಸ್ಥೆಗಳನ್ನು ಮಾತ್ರವಲ್ಲ, ಇ.ಡಿ., ಆದಾಯ ತೆರಿಗೆ ವಿಭಾಗ ಮುಂತಾದ ಸರಕಾರೀ ವಿಭಾಗಗಳನ್ನು ಕೂಡ ಪ್ರತಿಪಕ್ಷಗಳ ರಾಜಕಾರಣಿಗಳನ್ನು, ಮತ್ತು ಭಿನ್ನ ಮತೀಯರನ್ನು ಮಾತ್ರವಲ್ಲ, ವಿವಿಧ ರಂಗಗಳ ಸಕ್ರಿಯ ಕಾರ್ಯಕರ್ತರನ್ನು, ಪ್ರತಿಭಟನಾಕಾರರನ್ನು, ಲೇಖಕರನ್ನು, ಪತ್ರಕರ್ತರನ್ನು ಬೆನ್ನಟ್ಟಲು, ಕಿರುಕುಳ ಕೊಡಲು ಬಳಸಿಕೊಂಡಿದೆ ಎಂಬುದು ಸರ್ವವಿದಿತ ಸಂಗತಿ.

ನ್ಯುಸ್‌ಕ್ಲಿಕ್ ಮೇಲೆ ಈ ದಾಳಿಯನ್ನು ಈ ಗಂಭೀರ ಸನ್ನಿವೇಶದ ಹಿನ್ನೆಲೆಯಲ್ಲಿ ನೋಡಬೇಕಾಗಿದೆ. ಇದು ವಿಮರ್ಶಾತ್ಮಕ ದನಿಗಳನ್ನು ಅಡಗಿಸುವ ಘಟನಾವಳಿಗಳಲ್ಲಿ ಇನ್ನೊಂದು.

ನ್ಯುಸ್‌ಕ್ಲಿಕ್ ಪಾತ್ರ

ನ್ಯುಸ್‌ಕ್ಲಿಕ್ ಕಳೆದ ಸುಮಾರು 12 ವರ್ಷಗಳಿಂದ ಅನ್ಯಾಯ ಮತ್ತು ಶೋಷಣೆಗಳ ವಿರುದ್ಧ ಎಲ್ಲ ಜನವಿಭಾಗಗಳ ಹೋರಾಟಗಳನ್ನು ಎತ್ತಿ ತೋರುವ ಸುದ್ದಿಗಳು, ವಿಡಿಯೋಗಳನ್ನು ಪ್ರಕಟಿಸುತ್ತ ಬಂದಿರುವ ಸುದ್ದಿ ವೆಬ್ ತಾಣ. ಮಲಹೊರುವವರು, ಅಂಗನವಾಡಿ ಕಾರ್ಯಕರ್ತೆಯರು, ತಮ್ಮ ಸಣ್ಣ ಹಿಡುವಳಿಗಳನ್ನು ದರೋಡಿಕೋರ ಕಳಗಳಿಂದ ಉಳಿಸಿಕೊಳ್ಳಲು ಹೋರಾಡುತಿರುವ ಬುಡಕಟ್ಟು ಜನಗಳು, ಗಣಿಗಳು, ಕಾಖಾನೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರು, ಮೀನುಗಾರರು, ಅಲ್ಲದೆ ವಿದ್ಯಾರ್ಥಿಗಳು, ಅಧ್ಯಾಪಕರು ಮುಂತಾದ ಎಲ್ಲ ಜನವಿಭಾಗಗಳಿಗೆ ಸಂಬಂಧಪಟ್ಟ ಕಥನಗಳಿಗೆ ವೇದಿಕೆಯಾಗಿ ಕೆಲಸ ಮಾಡುತ್ತಿದೆ. ಮರೆಯಲ್ಲೆ ಉಳಿದುಹೋಗಬಹುದಾಗಿದ್ದ ಹಲವು ಸಂಗತಿಗಳನ್ನು ಬೆಳಕಿಗೆ ತಂದಿದೆ.

ಇತ್ತೀಚೆಗೆ ನ್ಯುಸ್ ಕ್ಲಿಕ್ ರೈತರ ಹೋರಾಟಗಳನ್ನು ಎಳೆ–ಎಳೆಯಾಗಿ ದಾಖಲಿಸಿದೆ, ಪ್ರತಿಭಟನೆಗಳ ಸ್ಥಳಗಳಿಂದ ಅದು ಪ್ರಸಾರ ಮಾಡಿರುವ ಆಘಾತಕಾರಿ ಪರಿಸ್ಥಿತಿಗಳ ವೀಡಿಯೋಗಳನ್ನು, ಕರಾರುವಾಕ್ಕಾದ ವರದಿಗಳನ್ನು ಲಕ್ಷಾಂತರ ಮಂದಿ ನೊಡಿದ್ದಾರೆ, ಓದಿದ್ದಾರೆ. ಮೂರು ಕೃಷಿ ಕಾಯ್ದೆಗಳ ವಿರುದ್ಧ ಮತ್ತು ಬೆಂಬಲ ಬೆಲೆಗಳಿಗಾಗಿ ರೈತರ ದೃಢ ಸಂಕಲ್ಪವನ್ನು, ಸರಕಾರದ ವಿರುದ್ದ ಕ್ರೋಧವನ್ನು ಅದು ಬಿಂಬಿಸಿದೆ.

ರೈತರ ಪ್ರತಿಭಟನೆಗಳು ಮತ್ತು ಇಂತಹ ಇತರ ಪ್ರತಿಭಟನೆಗಳು ತನ್ನನ್ನು ಆವರಿಸಿಕೊಳ್ಳುತ್ತಿರುವುದನ್ನು ಕಾಣುತ್ತಿರುವ ಮೋದಿ ಸರಕಾರ ಇವನ್ನೆಲ್ಲ ವರದಿಮಾಡದಂತೆ ತಡೆದರೆ ಅವೆಲ್ಲ ನಿಂತು ಹೋಗುತ್ತವೆ ಎಂಬ ಯೋಚನೆಯಿಂದ ನ್ಯುಸ್‌ಕ್ಲಿಕ್‌ನಂತಹ ದನಿಗಳನ್ನು ಅಡಗಿಸುವ ಕೆಲಸಕ್ಕೆ ಕೈಹಾಕಿದೆ ಎಂಬುದು ಸ್ಪಷ್ಟ.

ಇದೇ ನ್ಯುಸ್‌ಕ್ಲಿಕ್ ಮೇಲೆ ಇ.ಡಿ.ದಾಳಿಯ ನಿಜವಾದ ಸಾರ.

ಬಹುಶಃ ದೊಡ್ಡ–ದೊಡ್ಡ ಕಾರ್ಪೊರೇಟ್ ಕುಳಗಳು ತಮ್ಮ ಶೋಷಣಾತ್ಮಕ ಚಟುವಟಿಕೆಗಳು, ಕಾರ್ಯವಿಧಾನಗಳನ್ನು ಬೆಳಕಿಗೆ ಬಾರದಂತೆ ತಡೆಯುವುದಕ್ಕಾಗಿಯೂ ಸರಕಾರದ ಮೇಲೆ ಒತ್ತಡ ಹಾಕುತ್ತಿರಬಹುದು. ಏಕೆಂದರೆ ನ್ಯುಸ್‌ಕ್ಲಿಕ್ ಇವನ್ನೆಲ್ಲ ಬಯಲಿಗೆ ತರುತ್ತಿದೆ. ಭಾರತದಲ್ಲಿ ಹೆಚ್ಚುತ್ತಿರುವ ಹೊಲಸು ಅಸಮಾನತೆ, ಕೆಲವೇ ಕಾರ್ಪೊರೇಟ್‌ಗಳ ಬಳಿ ಸಂಪತ್ತಿನ ಶೇಖರಣೆ ಮತ್ತು ಸರಕಾರೀ ಧೋರಣೆಗಳ ಸಂಪೂರ್ಣ ಶಾಮೀಲು ಮುಖ್ಯಧಾರೆಯ ಮಾಧ್ಯಮಗಳ ಮೇಲೆ ಕಾರ್ಪೊರೇಟ್‌ಗಳ ಬಿಗಿ ಹತೋಟಿಯಿಂದಾಗಿ ಮತ್ತು ಅವುಗಳ ಸಂಪೂರ್ಣ ಮೌನದಿಂದಾಗಿ ಬೆಳಕಿಗೆ ಬರದಂತೆ ತಡೆಯುವದು ನ್ಯುಸ್‌ಕ್ಲಿಕ್‌ನಂತಹ ಸ್ವತಂತ್ರ ಸುದ್ದಿ ಸಂಸ್ಥೆಗಳಿಂದಾಗಿ ಸಾಧ್ಯವಾಗುತ್ತಿಲ್ಲ ಇದು ಅವರನ್ನು ರೇಗಿಸುತ್ತಿದೆ.

ಮಸಿ ಬಳೆವ ತಂತ್ರ

ನ್ಯುಸ್‌ಕ್ಲಿಕ್ ಪ್ರಕರಣದಲ್ಲಿ ಸರಕಾರದ ಕಾರ್ಯತಂತ್ರದ ಒಂದು ಪೂರ್ಣ ದೃಶ್ಯವೂ ಕಾಣ ಬಂದಿದೆ. ಇದು ಅದರ ಕಾರ್ಯತಂತ್ರದ ಅಭಿನ್ನ ಅಂಗ ಕೂಡ. ತಪ್ಪು ಕೃತ್ಯಗಳನ್ನು ಕಂಡು ಹಿಡಿಯಲೆಂಬ ದಾಳಿಗಳು ನಡೆಯುತ್ತಿದ್ದಂತೆಯೇ, ಕೆಲವು 'ಮಾಧ್ಯಮ ಗುಂಪು'ಗಳಿಗೆ ಬೇಕೆಂದೇ ಕೆಲವು ಆಯ್ದ "ಮಾಹಿತಿ"ಗಳನ್ನು ಸೋರಿ ಹೋಗಲು ಬಿಡಲಾಗಿದೆ. ಕೆಲವು ವಿದೇಶಿ ಸಂಸ್ಥೆಗಳಿಂದ ನ್ಯುಸ್‌ಕ್ಲಿಕ್‌ಗೆ ಹಣ ವರ್ಗಾವಣೆಯಾಗುತ್ತಿದೆ, ಅಂದರೆ ದುಷ್ಟ ಉದ್ದೇಶಗಳಿಗಾಗಿ ಕೆಲವು ಸಂಶಯಾಸ್ಪದ ವ್ಯಕ್ತಿಗಳು ಈ ಮೂಲಕ ಭಾರತಕ್ಕೆ ಹಣ ಕಳಿಸುತ್ತಿದ್ದಾರೆ ಎಂಬರ್ಥ ಬರುವಂತಹ ಕತೆಗಳನ್ನು ಈ ಮಾಧ್ಮಮಗಳಲ್ಲಿ ಇ.ಡಿ.. ಮೂಲಗಳ ಹೆಸರಿನಲ್ಲಿ ಹರಿಯ ಬಿಡಲಾಗುತ್ತಿದೆ.

ತನಿಖೆ ಇನ್ನೂ ನಡೆಯುತ್ತಿರುವಾಗ, ಯಾರ ಮೆಲೂ ಆರೋಪ ಹಾಕಿರದಿರುವಾಗ ಇಂತಹ ವರದಿಗಳನ್ನು ಹರಡಿಸುತ್ತಿರುವುದು, ಅಲ್ಲದೆ ಇವೆಲ್ಲ ಬಹಿರಂಗವಾಗಿಯೇ ಆರೆಸ್ಸೆಸ್/ಬಿಜೆಪಿಯೊಂದಿಗಿರುವ ವಿವಿಧ ವೆಬ್ ತಾಣಗಳಲ್ಲಿ ಪ್ರಕಟಗೊಳ್ಳುತ್ತಿರುವುದು ಕೇವಲ ಆಕಸ್ಮಿಕವೇನಲ್ಲ.

ಇದು, ಸಾಕ್ಷ್ಯಗಳೇನೂ ಇಲ್ಲದಿದ್ದರೂ ತಮ್ಮ ಕ್ರಿಯೆಗಳಿಗೆ ಸಾರ್ವಜನಿಕರ ಸಮ್ಮತಿಯನ್ನು ಪಡೆಯುವಂತಹ ವಾತಾವರಣವನ್ನು ಸೃಷ್ಟಿ ಮಾಡಲು ಮೋದಿ ಸರಕಾರ ಈಗ ಅನುಸರಿಸುತ್ತಿರುವ ಒಂದು ಸಾಮಾನ್ಯ ವಿಧಾನ ತಾನೇ!

ಅಣ್ಣಾ ಹಜಾರೆ ನಡೆಸಿದ ಚಳುವಳಿಗೆ ಮಾಧ್ಯಮಗಳಿಂಥ ದೊಡ್ಡ ಪ್ರಚಾರ ಸಿಕ್ಕಿತ್ತು. ಅದರ ಹಿಂದೆ ಆರ್.ಎಸ್.ಎಸ್. ಸೇರಿದಂತೆ ಅನೇಕ ಸಂಘಟನೆಗಳು ಇದ್ದವು. ಈಗ ಬಿಜೆಪಿ ಆಡಳಿತದಲ್ಲಿ ಭ್ರಷ್ಟಾಚಾರವು ಸರ್ವವ್ಯಾಪಿಯಾಗಿ ಬೃಹದಾಕಾರವಾಗಿ ಬೆಳೆದಿದ್ದರೂ, ಅಣ್ಣಾ ಹಜಾರೆ ದಿವ್ಯ ಮೌನ ತಳೆದಿದ್ದಾರೆ. ಇದು ರಾತ್ರೋ ರಾತ್ರಿ ಓಡಿ ಹೋಗುವ ಚಳವಳಿಗಳ ಪೊಳ್ಳುತನದ ಲಕ್ಷಣ. ಲೋಕಪಾಲ ಮಸೂದೆ ಚರ್ಚೆಯಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಮಸೂದೆಯಲ್ಲಿ ಲಂಚ ತೆಗೆದುಕೊಳ್ಳುವವರಿಗೆ ಶಿಕ್ಷೆಯಿದ್ದು ಕೊಡುವವರಿಗೆ ಇಲ್ಲದಿರುವ ಬಗ್ಗೆ ಗಮನ ಸೆಳೆದರು. ಲಂಚ ಕೆಳಮಟ್ಟದಲ್ಲಿ ಅಲ್ಲದೇ ಮೇಲ್ಮಟ್ಟದಲ್ಲಿ ನಡೆಯುವುದರ ವಿರುದ್ಧ ಯಾವ ಕ್ರಮಗಳು ಇಲ್ಲದಿರುವುದನ್ನು ತಿಳಿಸಿದರು. ಮಿಲಿಟರಿ ಉಪಕರಣಗಳ/ಕೊಳ್ಳುವಿಕೆಯಲ್ಲಿ ಕಾರ್ಪೋರೇಟ್ ಕೈವಾಡವಿರುತ್ತದೆ. ಕಾರ್ಪೋರೇಟ್ ಗಳು ಮತ್ತು ಬಹುರಾಷ್ಟ್ರೀಯ ಕಂಪನಿಗಳು ದೊಡ್ಡ ದೊಡ್ಡ ಮೊತ್ತದ ಲಂಚ ನೀಡಿ ತಮ್ಮ ಕೆಲಸ ಮಾಡಿಸಿಕೊಳ್ಳುತ್ತಾರೆ. ಆದರಿಂದ ಅವುಗಳನ್ನು ಶಿಕ್ಷಿಸಲು ಸೂಕ್ತ ಬದಲಾವಣೆ ಮಾಡಬೇಕೆಂಬ ಸಲಹೆಯನ್ನು ಸರ್ಕಾರ ತಿರಸ್ಕರಿಸಿತು.

ಭ್ರಷ್ಟಾಚಾರವನ್ನು ಬಿಜೆಪಿ ಆಡಳಿತದಲ್ಲಿ ಈಗ 'ಕಾನೂನು ಸಮ್ಮತ'ವಾಗಿಸಲಾಗಿದೆ. ಚುನಾವಣಾ ಬಾಂಡ್ ಹೆಸರಿನಲ್ಲಿ ರಾಜಕೀಯ ಪಕ್ಷಗಳು ಕಾರ್ಪೋರೇಟ್ ಗಳು ಮತ್ತು ಬಹುರಾಷ್ಟ್ರೀಯ ಕಂಪನಿಗಳಿಂದ ಎಷ್ಟು ಬೇಕಾದರೂ ವಂತಿಗೆ ಸ್ವೀಕರಿಸಲು ಸಾಧ್ಯವಿದ್ದು ಅದರಲ್ಲಿ ಬಿಜೆಪಿ ಹೆಚ್ಚಿನ ಪಾಲು ಪಡೆದಿರುತ್ತದೆ. 2019 ರಲ್ಲಿ ದತ್ತಿ ಟ್ರಸ್ಟ್‌ಗಳಿಗೆ ತೆರಿಗೆ ವಿನಾಯಿತಿ ನೀಡಿದ್ದರಿಂದ ಕಾರ್ಪೋರೇಟ್ ಸಂಸ್ಥೆಗಳು ದೇವಮಾನವರ ಟ್ರಸ್ಟ್‌ಗಳ ಹೆಸರಿನಲ್ಲಿ ತೆರಿಗೆ ವಂಚನೆ ಮಾಡುತ್ತಿದ್ದಾರೆ.

ಈಗ ದಿಢೀರನೆ ಪ್ರತ್ಯಕ್ಷವಾಗಿರುವ ಈ ಭ್ರಷ್ಟಾಚಾರ–ವಿರೋಧಿಗಳು ಈ ವ್ಯವಸ್ಥೆಯ ಭಾಗವಾಗಿರುವ ಸಾಂಸ್ಥಿಕ ಭ್ರಷ್ಟಾಚಾರದ ಬಗೆಗೆ ಮಾತನಾಡುವುದಿಲ್ಲ. ತಮಿಳುನಾಡಿನಲ್ಲಿ ಭ್ರಷ್ಟಾಚಾರವನ್ನು ಅಳಿಸಿಹಾಕುತ್ತೇವೆನ್ನುವ ರಜನಿ, ಕಮಲ್ ಇದರ ಕುರಿತು ಮಾತನಾಡಿದ್ದಾರಾ? ಇಲ್ಲವಾದ್ದರಿಂದ, ಈ ವಿಷಯದಲ್ಲಿ ಅವರ ಮಾತುಗಳು ಕಾಳಜಿಗಳು ಪ್ರಾಮಾಣಿಕ ಎನಿಸುವುದಿಲ್ಲ. ರಾಜಕೀಯವು ನಿವೃತ್ತಿ ಹೊಂದುತ್ತಿರುವವರ ಕೊನೆಯ ಆಯ್ಕೆ ಅಲ್ಲ, ಬದಲಿಗೆ ಹೋರಾಟಗಳ ಯುದ್ಧಭೂಮಿ. ರಾಜಕಿಯ–ಆರ್ಥಿಕ ವ್ಯವಸ್ಥೆಯಲ್ಲಿ ಅಮೂಲಾಗ್ರ ರಚನಾತ್ಮಕ ಬದಲಾವಣೆಯ ಮಾತನ್ನೇ ಆಡದೇ, ಆಧ್ಯಾತ್ಮಿಕ ರಾಜಕೀಯದಂತಹ ಘೋಷಣೆಗಳು, ಜನರನ್ನು ದಾರಿ ತಪ್ಪಿಸುವ ರಾಜಕೀಯದೊಳಗೆ ಧರ್ಮ ಬೆರೆಸುವ ಶಕ್ತಿಗಳಿಗೆ ಸಹಾಯವಾಗುತ್ತದೆ ಅಷ್ಟೇ.

ರಾಜಕೀಯ ಮತ್ತು ಧರ್ಮ/ಆಧ್ಯಾತ್ಮ ಪ್ರತ್ಯೇಕವಾಗಿರಬೇಕು. ಎರಡರ ನಡುವೆ ಗೊಂದಲ ಎಬ್ಬಿಸುವವರು ಅವರು ಹೇಳುತ್ತಿರುವ ಉದ್ದೇಶಕ್ಕೆ ನ್ಯಾಯವನ್ನಂತೂ ಒದಗಿಸುವುದಿಲ್ಲ. ಸಮಾಜವಾದಿ ಸಮಾಜ ನಿರ್ಮಾಣದಿಂದ ಮಾತ್ರ ಜನತೆಗೆ ನಿಜವಾದ ವಿಮೋಚನೆ ಸಿಗುವುದು ಸಾಧ್ಯ. ಮಾರ್ಕ್ಸ್‌ವಾದವು, ಸಮಾಜವಾದಿ ಸಮಾಜ ಎಂಬ 'ಸ್ವರ್ಗ'ವನ್ನು ಇಲ್ಲೇ ಈ ಜಗತ್ತಿನಲ್ಲೇ (ಬೇರೆಲ್ಲೋ ಅಲ್ಲ) ಹೇಗೆ ಸೃಷ್ಟಿಸಬಹುದು ಎಂಬುದರ ಕುರಿತು ಮನುಕುಲಕ್ಕೆ ಹಾದಿ ತೋರಿಸುತ್ತದೆ. ಇದೇ ಭ್ರಷ್ಟಾಚಾರ ಸೇರಿದಂತೆ ಎಲ್ಲ ಸಮಸ್ಯೆಗಳಿಗೆ ಪರಿಹಾರ.

ಪ್ರತಿ ದಿನವೂ ಏರಿಕೆ ನಡೆಯುತ್ತಿರುವುದರಿಂದಾಗಿ ಅನೇಕ ನಗರಗಳಲ್ಲಿ ಪೆಟ್ರೋಲಿನ ಲೀಟರ್ ಒಂದರ ಬೆಲೆ 90 ರೂಪಾಯಿ ದಾಟಿದ್ದು ಇದೇ ವೇಗದಲ್ಲಿ ಮುಂದುವರಿದರೆ ಕೆಲವೇ ದಿನಗಳಲ್ಲಿ ನೂರು ರೂಪಾಯಿ ದಾಟಲಿದೆ.

ಪೆಟ್ರೋಲ್, ಡೀಸೆಲ್, ಎಲ್‌ಪಿಜಿಗಳ ಅವಿರತ ಬೆಲೆಯೇರಿಕೆ

ಈ ಲೂಟಿ ಕೊನೆಗೊಳ್ಳಬೇಕು



80–90–ಪೂರಾ 100

ಸರ್ಕಾರದ ಒಟ್ಟಾರೆ ಆದಾಯ ಕುಸಿಯುತ್ತಿರುವ ಸಂದರ್ಭದಲ್ಲಿ, ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಈ ಅಸಮತ್ವದಿಂದ ಕೂಡಿದ ತೆರಿಗೆ ರಚನೆಯು ಕೇಂದ್ರ ಸರ್ಕಾರದ ಆದಾಯದ ಒಂದು ಪ್ರಮುಖ ಮೂಲವಾಗಿದೆ. ಇದು ಮೋದಿ ಸರ್ಕಾರದ ಹೇಯ ಜನ–ವಿರೋಧಿ ಧೋರಣೆಯ ಭಾಗವೇ ಆಗಿದೆ. ಲಾಕ್‌ಡೌನ್ ಮತ್ತು ಸಾಂಕ್ರಾಮಿಕದಿಂದಾಗಿ ನಮ್ಮ ಸಮಾಜದಲ್ಲಿನ ಸಂಪತ್ತಿನ ಅಸಮಾನತೆ ಇನ್ನಷ್ಟು ಹೆಚ್ಚಿರುವಾಗ, ಸರ್ಕಾರ, ಸೂಪರ್–ಸಿರಿವಂತರ ಮೇಲೆ ಸಂಪತ್ತು ತೆರಿಗೆ ವಿಧಿಸಬೇಕಿತ್ತು , ಈ ಅವಧಿಯಲ್ಲಿ ಭಾರಿ ಲಾಭ ಮಾಡಿಕೊಂಡಿರುವ ಕಾರ್ಪೊರೇಟ್‌ಗಳು ಹೆಚ್ಚು ತೆರಿಗೆ ತೆರುವಂತೆ ಕೇಳಬೇಕಿತ್ತು. ಅದರ ಬದಲಿಗೆ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಇನ್ನಷ್ಟು ತೆರಿಗೆ ಹೇರಿ ಜನತೆಯ ಅಲ್ಪ–ಸ್ವಲ್ಪ ಸಂಪನ್ಮೂಲಗಳ'ನ್ನೂ ಕೊಳ್ಳೆ ಹೊಡೆಯುವ ಧೋರಣೆಯನ್ನು ನಿಲ್ಲಿಸುವಂತೆ ಒತ್ತಡ ಹಾಕಬೇಕಾಗಿದೆ.

ಪ್ರಕಾಶ ಕಾರಟ್

ಕರೊನಾ ಸಾಂಕ್ರಾಮಿಕದಿಂದ ಹೆಚ್ಚಿದ ನಿರುದ್ಯೋಗ ಮತ್ತು ಆದಾಯ ಖೋತಾದಿಂದಾಗಿ ಈಗಾಗಲೇ ಸಮಸ್ಯೆಗಳ ಸುಳಿಯಲ್ಲಿ ನಲುಗುತ್ತಿರುವ ಜನತೆಗೆ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳ ಅವಿರತ ಏರಿಕೆಯಿಂದಾಗಿ ಇನ್ನಷ್ಟು ಸಂಕಷ್ಟ ಎದುರಾಗಿದೆ.

ಪ್ರತಿ ದಿನವೂ ತೈಲ ಬೆಲೆ ಏರುತ್ತಿರುವುದರಿಂದ ಅನೇಕ ನಗರಗಳಲ್ಲಿ ಪೆಟ್ರೋಲಿನ ಲೀಟರ್ ಒಂದರ ಬೆಲೆ 90 ರೂಪಾಯಿ ದಾಟಿದ್ದು ಇದೇ ವೇಗದಲ್ಲಿ ಮುಂದುವರಿದರೆ ಕೆಲವೇ ದಿನಗಳಲ್ಲಿ ನೂರು ರೂಪಾಯಿ ದಾಟಲಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆಗಳ ಏರಿಕೆಯನ್ನು ನೆಪವಾಗಿಟ್ಟುಕೊಂಡು ಕೇಂದ್ರ ಸರ್ಕಾರ ಮತ್ತು ತೈಲ ಕಂಪೆನಿಗಳು ಈ ದರ ಏರಿಕೆಯನ್ನು ಸಮರ್ಥಿಸಿಕೊಳ್ಳುತ್ತಿವೆ. ಇದೊಂದು ಕಪಟತನದ ಸಮರ್ಥನೆಯಾಗಿದೆ. ವಾಸ್ತವ ಸಂಗತಿಯೇನೆಂದರೆ, ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಅತಿ ದುಬಾರಿ ಕೇಂದ್ರೀಯ ತೆರಿಗೆಗಳೇ ಈ ಹೊರೆಗೆ ಪ್ರಮುಖ ಕಾರಣವಾಗಿವೆ.

2014–15 ಮತ್ತು 2020–21ರ ನಡುವೆ, ಭಾರತ ಖರೀದಿಸುವ ಕಚ್ಚಾ ತೈಲಗಳ ಸರಾಸರಿ ಬೆಲೆ ಶೇಕಡ 17.6ರಷ್ಟು ಹೆಚ್ಚಾಗಿದೆ. ಅದೇ ಅವಧಿಯಲ್ಲಿ, ಪೆಟ್ರೋಲ್‌ನ ಸರಾಸರಿ ಚಿಲ್ಲರೆ ಮಾರಾಟ ಬೆಲೆ ಶೇಕಡ 55.3 ಹಾಗೂ ಡೀಸೆಲ್ ಬೆಲೆ ಶೇಕಡ 72.5ರಷ್ಟು ಏರಿಕೆಯಾಗಿದೆ. ಜಾಗತಿಕ ಬೆಲೆಗಳ ಮಟ್ಟಕ್ಕಿಂತ ಚಿಲ್ಲರೆ ಮಾರಾಟ ದರ ಬಹಳ ಪಟ್ಟು ಅಧಿಕವಾಗಿದೆ ಎನ್ನುವುದು ಕಣ್ಣಿಗೆ ರಾಚುವಂತಿದೆ.

ಕೇಂದ್ರ ಸರ್ಕಾರದ ಅಬ್ಕಾರಿ ಸುಂಕಗಳು ಮತ್ತು ಉಪಕರ(ಸೆಸ್)ಗಳು ಜನತೆಯ ಬೆನ್ನುಮೂಳೆ ಮುರಿಯುವಂತೆ ಮಾಡುತ್ತಿವೆ. ಕರೊನಾ ಮಹಾಮಾರಿ ಹಾವಳಿ ನಡೆಸಿದ 2020ರಲ್ಲಿ ಕೂಡ ಮೋದಿ ಸರ್ಕಾರ ಮಾರ್ಚ್ 14ರಂದು ಲೀಟರ್ ಪೆಟ್ರೋಲ್ ಮತ್ತು ಡೀಸೆಲ್‌ಗಳ ಮೇಲಿನ ಅಬ್ಕಾರಿ ಸುಂಕವನ್ನು ತಲಾ ಮೂರು ರೂಪಾಯಿ ಏರಿಕೆ ಮಾಡಿತ್ತು. ಇದಾದ ನಂತರ ಮೇ 6ರಂದು ಅಬ್ಕಾರಿ ಸುಂಕವನ್ನು ಪೆಟ್ರೋಲ್ ಮೇಲೆ 10 ಹಾಗೂ ಡೀಸೆಲ್ ಮೇಲೆ 13 ರೂಪಾಯಿ ಏರಿಸಿತ್ತು.

ತೆರಿಗೆ ಪ್ರಮಾಣವೇ ಜಾಸ್ತಿ

2014–15 ಮತ್ತು 2019–20ರ ನಡುವೆ ಕೇಂದ್ರ ಸರ್ಕಾರದ ಅಬ್ಕಾರಿ ಸುಂಕದ ಸಂಗ್ರಹ ಶೇಕಡ 125ರಷ್ಟು ಹೆಚ್ಚಿತು. ಅದೇ ಅವಧಿಯಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ರಾಜ್ಯಗಳ ಆದಾಯ ಶೇಕಡ 37.5ರಷ್ಟು ಏರಿಕೆಯಾಗಿದೆ ಎಂಬ ಮಾಹಿತಿಯನ್ನು ಗಮನಿಸುವುದು ಅಗತ್ಯ. ಹೀಗಾಗಿ ಪೆಟ್ರೋಲ್, ಡೀಸೆಲ್‌ಗಳ ಚಿಲ್ಲರೆ ಮಾರಾಟ ಬೆಲೆಯೇರಿಕೆಗೆ ಕೇಂದ್ರ ಸರ್ಕಾರದ ಸುಂಕಗಳ ಏರಿಕೆ ಕಾರಣವೇ ಹೊರತು ರಾಜ್ಯ ಸರ್ಕಾರಗಳ ಮೌಲ್ಯವರ್ಧಿತ ತೆರಿಗೆ (ವ್ಯಾಟ್) ಕಾರಣವಲ್ಲ ಎನ್ನುವುದು ಸ್ಪಷ್ಟ.

ಪ್ರಸ್ತುತ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ತಲಾ ಲೀಟರ್ ಪೆಟ್ರೋಲ್ ಬೆಲೆಯಲ್ಲಿ ಶೇಕಡ 63ರಷ್ಟು ತೆರಿಗೆಯೇ ಇರುತ್ತದೆ. ಅದರಲ್ಲಿ ಕೇಂದ್ರದ ಪಾಲು ಶೇ. 40 ಹಾಗೂ ರಾಜ್ಯದ ವ್ಯಾಟ್ ಪಾಲು ಶೇ. 23.

ಕೇಂದ್ರೀಯ ಬಕಾರಿ ಸುಂಕ ಮತ್ತು ಸೆಸ್‌ಗಳನ್ನು ಇಳಿಸಲು ಸರ್ಕಾರ ಸತತವಾಗಿ ನಿರಾಕರಿಸುತ್ತಿದೆ. ಅದಕ್ಕೆ ತದ್ವಿರುದ್ಧವಾಗಿ, ಲೀಟರ್ ಪೆಟ್ರೋಲ್ ಮೇಲೆ 2.50 ರೂಪಾಯಿ ಹಾಗೂ ಡೀಸೆಲ್ ಮೇಲೆ 4 ರೂಪಾಯಿ ಕೃಷಿ ಮತ್ತು ಮೂಲಸೌಕರ್ಯ ಸೆಸ್ ಎಂಬ ಹೊಸ ಸೆಸ್ ವಿಧಿಸುವುದಾಗಿ 2021–22ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಲಾಗಿದೆ.

ಮೂಲ ಅಬ್ಕಾರಿ ಸುಂಕದಲ್ಲಿ, ವಿಶೇಷ ಹೆಚ್ಚುವರಿ ಅಬ್ಕಾರಿ ಸುಂಕದಲ್ಲಿ ಈ ಸೆಸ್‌ನ ಅನುಪಾತಕ್ಕೆ ಅನುಗುಣವಾಗಿ ಕಡಿತ ಮಾಡಲಾಗುತ್ತದೆ ಎಂದು ಹಣಕಾಸು ಮಂತ್ರಿಗಳು ಪ್ರಕಟಿಸಿದ್ದಾರೆ. ಇದರಿಂದ ಗ್ರಾಹಕರ ಮೇಲೆ ಹೆಚ್ಚಿನ ಹೊರೆ ಬೀಳುವುದಿಲ್ಲ ಎನ್ನುವುದು ಸರ್ಕಾರದ ವಾದವಾಗಿದೆ. ಅಂದರೆ ಕೇಂದ್ರೀಯ ಅಬಕಾರಿ ಸುಂಕದಲ್ಲಿ ಕಡಿತವಾಗುವುದಿಲ್ಲ, ಅದರ ಒಂದು ಭಾಗವನ್ನು ಮಾತ್ರ ಸೆಸ್ ಆಗಿ ಪರಿವರ್ತಿಸಲಾಗುತ್ತದೆಯಷ್ಟೇ. ರಾಜ್ಯಗಳನ್ನು ಅವುಗಳ ಪಾಲಿನಿಂದ ವಂಚಿಸುವುದು ಈ ತಂತ್ರದ ಉದ್ದೇಶವಾಗಿದೆ. ಯಾಕೆಂದರೆ ಸೆಸ್ ಕೇಂದ್ರ–ರಾಜ್ಯಗಳು ಹಂಚಿಕೊಳ್ಳುವ ಬಾಬ್ತಿಗೆ ಬರುವುದಿಲ್ಲ.

ಈಗಾಗಲೇ ಕೇಂದ್ರೀಯ ಅಬಕಾರಿ ಸುಂಕಗಳಿಂದ ರಾಜ್ಯಗಳಿಗೆ ಬರುವ ಪಾಲಿನಲ್ಲಿ ಕಡಿತ ಆಗುತ್ತಲೇ ಇದೆ. ಅದು ಇನ್ನಷ್ಟು ತೀವ್ರಗೊಂಡು ಮುಂದುವರಿಯಲಿದೆ. ವರ್ಷದ ಪ್ರಥಮ ತ್ರೈಮಾಸಿಕದಲ್ಲೇ ಅಂದರೆ ಜನವರಿ–ಮಾರ್ಚ್‌ನಲ್ಲಿ ಕೇಂದ್ರ–ರಾಜ್ಯಗಳ ಈ ಅನುಪಾತ 65:35ಕ್ಕೆ ಕುಸಿದಿದೆ. ಹಿಂದೆ ಈ ಅನುಪಾತ 60:40 ಇತ್ತು.

ಸರ್ಕಾರದ ಒಟ್ಟಾರೆ ಆದಾಯ ಕುಸಿಯುತ್ತಿರುವ ಸಂದರ್ಭದಲ್ಲಿ, ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಈ ಅಸಮತ್ವದಿಂದ ಕೂಡಿದ ತೆರಿಗೆ ರಚನೆಯು ಕೇಂದ್ರ ಸರ್ಕಾರದ ಆದಾಯದ ಒಂದು ಪ್ರಮುಖ ಮೂಲವಾಗಿದೆ. ಸಂಸತ್ತಿನಲ್ಲಿ ಮಂಡಿಸಲಾಗಿರುವ ಬಜೆಟ್‌ನಲ್ಲಿ ಕೊಟ್ಟಿರುವ ತೆರಿಗೆ ಸಂಗ್ರಹ ಮಾಹಿತಿಗಳ ಪ್ರಕಾರ 2020–21ನೇ ಸಾಲಿನ ತೆರಿಗೆ ಆದಾಯ ಗುರಿಗಿಂತ ಕಡಿಮೆಯಾಗಿದೆ. ಅಬಕಾರಿ ಸುಂಕ ಸಂಗ್ರಹದಲ್ಲಿ ಮಾತ್ರ ಹಾಗಾಗಿಲ್ಲ. ಒಟ್ಟಾರೆ ತೆರಿಗೆ ಆದಾಯ ನಿಗದಿತ ಗುರಿಗಿಂತ ಶೇ. 17.8 ಕಡಿಮೆಯಾಗಿದ್ದರೆ ಅಬಕಾರಿ ಸುಂಕ ಸಂಗ್ರಹದಲ್ಲಿ ಗುರಿಗಿಂತ ಶೇ. 35 ಅಧಿಕ ಏರಿಕೆ ದಾಖಲಾಗಿದೆ.

ಜನಗಳ ಮೇಲೆ ಹೊರೆ ವರ್ಗಾವಣೆ

ಅಂದರೆ, ಲಾಕ್‌ಡೌನ್ ಮತ್ತು ಮುಳುಗುತ್ತಿರುವ ಆರ್ಥಿಕತೆಯ ಹೊರೆಯನ್ನು ಸರ್ಕಾರ ಜನರ ಮೇಲೆ ಹೊರಿಸಿದೆ. ಜಾಗತಿಕ ಬೆಲೆಗಳಲ್ಲಿ ಕುಸಿತವಾಗಿದ್ದರೂ ಅಥವಾ ಏರಿಕೆ ನಿಧಾನಗೊಂಡಿದ್ದರೂ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಅಬ್ಕಾರಿ ಸುಂಕವನ್ನು ಹೆಚ್ಚಿನ ಪ್ರಮಾಣದಲ್ಲಿ ಇರಿಸುವ ಮೂಲಕ ಕೇಂದ್ರ ಸರ್ಕಾರ ಇದನ್ನು ಸಾಧಿಸುತ್ತಿದೆ.

ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಿಲ ಬೆಲೆಗಳು ಗಗನಮುಖಿಯಾಗಿರುವುದರಿಂದ ಎಲ್ಲ ವಿಭಾಗಗಳ ಜನರಿಗೆ ಸಮಸ್ಯೆ ಉಂಟಾಗಿದೆ. ಉದ್ಯೋಗ ಮತ್ತು ಜೀವನೋಪಾಯ ಕಳಕೊಂಡವರು, ಸಣ್ಣ ಉದ್ಯಮಗಳು, ಅಂಗಡಿಕಾರರು, ಮತ್ತು ಸರಕುಗಳ ಸಾಗಾಟದ ಮೇಲೆ ಅವಲಂಬಿಸಿರುವ ವರ್ತಕರು ಮುಂತಾದವರಿಗೆ ಹೆಚ್ಚಿನ ಬಿಸಿ ತಟ್ಟಿದೆ. ರೈತರು ಟ್ರ್ಯಾಕ್ಟರ್ ಮತ್ತು ಪಂಪ್‌ಗಳಿಗೆ ಬಳಸುವ ಡೀಸೆಲ್‌ಗೆ ಹೆಚ್ಚಿನ ಹಣ ತೆರಬೇಕಾಗಿದೆ. ಅಸಂಘಟಿತ ವಲಯದಲ್ಲಿ ದಿನಗೂಲಿ ಅವಲಂಬಿಸಿರುವವರ ಸಾರಿಗೆ ವೆಚ್ಚ ಹೆಚ್ಚಾಗಿದೆ. ಹಿಂಜರಿತದಿಂದ ಸುಧಾರಿಸಿಕೊಂಡು ಬದುಕುಳಿಯುವ ಸಣ್ಣ ಮತ್ತು ಅತಿ ಸಣ್ಣ ಉದ್ಯಮಗಳ ಪ್ರಯತ್ನಗಳ ಮೇಲೆ ತೀವ್ರ ದುಷ್ಪರಿಣಾಮ ಉಂಟಾಗಿದೆ. ಖಾಸಗಿ ಮತ್ತು ಸಾರ್ವಜನಿಕ ಸಾರಿಗೆಗಳ ವೆಚ್ಚ ಮತ್ತು ಅಡುಗೆ ಅನಿಲ ಸಿಲಿಂಡರ್‌ಗಳ ಬೆಲೆಯೇರಿಕೆಯಿಂದಾಗಿ ಮಧ್ಯಮ ವರ್ಗದವರ ಕೌಟುಂಬಿಕ ಬಜೆಟ್‌ಗಳ ಮೇಲೆ ಭಾರಿ ಪರಿಣಾಮ ಉಂಟಾಗಿದೆ.

ಜನ–ವಿರೋಧಿ ನೀತಿಯ ಭಾಗ

ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ತೆರಿಗೆ ನೀತಿಯು ಮೋದಿ ಸರ್ಕಾರದ ಹೇಯ ಜನ–ವಿರೋಧಿ ಧೋರಣೆಯ ಭಾಗವೇ ಆಗಿದೆ. ಲಾಕ್‌ಡೌನ್ ಮತ್ತು ಕರೊನಾ ಸಾಂಕ್ರಾಮಿಕವು ನಮ್ಮ ಸಮಾಜದಲ್ಲಿನ ಸಂಪತ್ತಿನ ಅಸಮಾನತೆಯನ್ನು ಇನ್ನಷ್ಟು ಅಧಿಕಗೊಳಿಸಿದೆ. ಇಂಥ ಸನ್ನಿವೇಶದಲ್ಲಿ ಸರ್ಕಾರ, ಸೂಪರ್–ಸಿರಿವಂತರ ಮೇಲೆ ತೆರಿಗೆ ಏರಿಸಬೇಕಿತ್ತು, ಸಂಪತ್ತು ತೆರಿಗೆ ವಿಧಿಸಬೇಕಿತ್ತು ಹಾಗೂ ಈ ಅವಧಿಯಲ್ಲಿ ಭಾರಿ ಲಾಭ ಮಾಡಿದ ಕಾರ್ಪೊರೇಟ್ ಕಂಪೆನಿಗಳು ಹೆಚ್ಚು ತೆರಿಗೆ ತೆರುವಂತೆ ಸರ್ಕಾರ ಕೇಳಬೇಕಿತ್ತು. ಆದರೆ ಇದ್ಯಾವುದನ್ನೂ ಮಾಡದೆ, ಅದರ ಬದಲಿಗೆ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಅಸಮ ತೆರಿಗೆ ಹೇರಿ ಜನತೆಯ ಅಲ್ಪ–ಸ್ವಲ್ಪ ಸಂಪನ್ಮೂಲಗಳನ್ನೂ ಕೊಳ್ಳೆ ಹೊಡೆಯಲು ಮುಂದಾಗಿದೆ.

ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಅಬ್ಕಾರಿ ಸುಂಕ ಮತ್ತು ಸೆಸ್‌ಗಳ ಹೇರಿಕೆಯನ್ನು ಗಣನೀಯವಾಗಿ ಇಳಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರಬೇಕಿದೆ. ಇದಕ್ಕಾಗಿ ಹೋರಾಟವನ್ನು ತೀವ್ರಗೊಳಿಸಬೇಕು. ಈ ಚಳವಳಿಯು ಜನತೆಯ ಜೀವನೋಪಾಯ ಮತ್ತು ಮೂಲಭೂತ ಹಕ್ಕುಗಳ ರಕ್ಷಣೆಯ ಆಂದೋಲನದ ಭಾಗವಾಗಬೇಕು.

ಅನು: ವಿಶ್ವ



ಪೆಟ್ರೋಲಿಯಂ ಉತ್ಪನ್ನಗಳ ದರ–ಏರಿಕೆಗಳ ಟೀಕೆಗಳಿಂದ ತಪ್ಪಿಸಿಕೊಳ್ಳಲು......



ವ್ಯಂಗ್ಯಚಿತ್ರ: ಪಿ.ಮಹಮ್ಮದ್, ವಾರ್ತಾಭಾರತಿ



"ರಿಹಾನ್ನರ ಈ ವಾಟ್ಸ್ ಆಪ್ ಮೆಸೇಜ್ ಓದಿ!
ವ್ಯಂಗ್ಯಚಿತ್ರ: ಅಲೋಕ್ ನಿರಂತರ್/ಫೇಸ್‌ಬುಕ್

ಹಿಂದಿನ ಸರಕಾರಗಳು ತೈಲ ಆಮದನ್ನು ಕಡಿಮೆ ಮಾಡುವ ಕ್ರಮಗಳನ್ನು ಕೈಗೊಂಡಿದ್ದರೆ ಈಗ ಮಧ್ಯಮವರ್ಗದ ಜನರು ಪೆಟ್ರೋಲಿಗೆ ಇಷ್ಟೊಂದು ಬೆಲೆ ತೆರಬೇಕಾಗುತ್ತಿರಲಿಲ್ಲ ಎಂದು ಪ್ರಧಾನಿಗಳು ಪರೋಕ್ಷವಾಗಿ ಪೆಟ್ರೋಲ್ ದರ ಏರಿಕೆಗಳನ್ನು ಸಮರ್ಥಿಸಿಕೊಂಡಿದ್ದಾರೆ!



ಟೂಲ್‌ಕಿಟ್ ಎಫ್‌ಐಆರ್: ಜಾಗತಿಕ ರಂಗಕ್ಕೆ ವಿಸ್ತರಿಸಿದ ಮೋದಿ ಸರಕಾರದ ಬೆದರಿಕೆ ತಂತ್ರ

ಬಿಜೆಪಿ ಮತ್ತು ಆರೆಸ್ಸೆಸ್‌ನ ವಿದೇಶಿ ಸೆಲ್‌ಗಳು ಮತ್ತು ಮಿತ್ರ ಸಂಘಟನೆಗಳಿಗೆ "ಹೌಡಿ ಮೋದಿ" ಯಂತಹ ಕಾರ್ಯಕ್ರಮಗಳಿಗೆ ಟೂಲ್‌ಕಿಟ್‌ಗಳನ್ನು ಹಂಚಿಕೊಳ್ಳುವ ಹಕ್ಕಿದ್ದರೆ, ಅದೇ ರೀತಿ ವಿದೇಶಗಳಲ್ಲಿರುವ ಇತರ ಭಾರತೀಯ ಮೂಲದವರು ರೈತರ ಬೆಂಬಲಕ್ಕಾಗಿ "ಜೈಕಿಸಾನ್" ಸಂಘಟಿಸುವುದು ಹೇಗೆ ರಾಷ್ಟ್ರವಿರೋಧಿಯಾಗುತ್ತದೆ? "ಸಾಗರದಾಚೆಗಿನ ಪಿತೂರಿ"ಯೊಂದಿದೆ ಎಂದು ಎಫ್.ಐ.ಆರ್. ದಾಖಲಿಸುವುದರಿಂದ, ಬೆದರಿಕೆಗಳನ್ನು ಹಾಕಿ ವಿಶ್ವದ ದೃಷ್ಟಿಯಲ್ಲಿ ಭಾರತದ ಹೆಸರುಗೆಡಿಸುವುದರಿಂದ, ಇದು ರೈತರ ಹೋರಾಟ, ರೈತರೇ ಮಾಡುತ್ತಿರುವ ಹೋರಾಟ, ಆದರೆ ರೈತರಿಗಾಗಿಯಷ್ಟೇ ಅಲ್ಲ, ಇಡೀ ದೇಶಕ್ಕಾಗಿ ಎಂಬ ಬುಡಮಟ್ಟದ ವಾಸ್ತವತೆಯನ್ನೇನೂ ಬದಲಿಸಲು ಸಾಧ್ಯವಿಲ್ಲ.



ಬೃಂದಾ ಕಾರಟ್

ಭಾರತದ ರೈತರ ಹೋರಾಟದ ಬಗ್ಗೆ ಅಂತರರಾಷ್ಟ್ರೀಯ ಪ್ರಖ್ಯಾತರ ಟ್ವೀಟ್‌ಗಳಿಗೆ ಪ್ರತಿಕ್ರಿಯೆಯಾಗಿ ಕೇಂದ್ರದ ಬಿಜೆಪಿ ಸರ್ಕಾರ ತೆಗೆದುಕೊಳ್ಳುತ್ತಿರುವ ಕ್ರಮಗಳನ್ನು, ಒಬ್ಬ ತಗಡು ಸರ್ವಾಧಿಕಾರಿಯ, "ವೈಭವದ ಭ್ರಮೆಯಲ್ಲಿರುವ ನಿರಂಕುಶ ಪ್ರಭು"ವಿನ ದೇಶವೊಂದರಿಂದ ನಿರೀಕ್ಷಿಸಬಹುದಷ್ಟೇ ಹೊರತು, ಭಾರತದಂತಹ ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವದ ಒಂದು ಚುನಾಯಿತ ಸರಕಾರದಿಂದ ಖಂಡಿತಾ ಅಲ್ಲ. ಇತ್ತೀಚಿನ ಸಮೀಕ್ಷೆಗಳ ಪ್ರಕಾರ ಭಾರತದ ಪ್ರಧಾನಿಯವರ ಜನಪ್ರಿಯತೆ ಜಗತ್ತಿನ ಎಲ್ಲಾ ದೇಶಗಳ ಮುಖ್ಯಸ್ಥರುಗಳಲ್ಲೇ ಅತಿ ಹೆಚ್ಚು. ಇಷ್ಟೆಲ್ಲಾ ಜನಪ್ರಿಯತೆ ಇದ್ದರೂ ಅದೇಕೆ ಬೆರಳೆಣಿಕೆಯ ಟ್ವೀಟುಗಳಿಗೆ ಇಂತಹ ಪ್ರತಿಕ್ರಿಯೆ? ಇಂತಹ ಪ್ರಬಲ ಪ್ರಧಾನಮಂತ್ರಿಯವರ ಅಡಿಯಲ್ಲಿ ನಾವು ಇಷ್ಟೊಂದು ದುರ್ಬಲ ದೇಶವಾಗಿ ಬಿಟ್ಟಿದ್ದೇವೆಯೇ?

ಈ ಟ್ವಿಟರ್ ಬಿರುಗಾಳಿಗೆ ವಿದೇಶ ವ್ಯವಹಾರಗಳ ಮಂತ್ರಾಲಯದ ಕೋಪೋದ್ರಿಕ್ತ ವಾಗ್ದಂಡನೆ ಸಾಲದು ಎಂಬಂತೆ ದಿಲ್ಲಿ ಪೋಲಿಸ್ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ "ಟೂಲ್‌ಕಿಟ್ ವಿವಾದ"ದ ಮೇಲೆ ಯಾರನ್ನೂ ಹೆಸರಿಸದ ಒಂದು ಎಫ್.ಐ.ಆರ್.ನ್ನೇ ಹಾಕಿ ಭಾರತಕ್ಕೆ ಇನ್ನಷ್ಟು ಅವಮಾನ ತಂದಿದೆ. ಟ್ವೀಟ್‌ನಲ್ಲಿನ 'ಟೂಲ್‌ಕಿಟ್'ನ್ನು ಗಮನಕ್ಕೆ ತಗೊಂಡ ಪೋಲೀಸರು ಭಾರತ ಸರಕಾರದ ವಿರುದ್ಧ ಅಸಮಾಧಾನವನ್ನು ಮತ್ತು ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಆಧಾರಗಳಲ್ಲಿ ಅಸಾಮರಸ್ಯವನ್ನು ಹರಡಿಸುವ(ರಾಜದ್ರೋಹದ), ಮತ್ತು ಇದಕ್ಕೆ ರೂಪ ಕೊಡಲು ಒಂದು ಕ್ರಿಮಿನಲ್ ಪಿತೂರಿಯ ಕೇಸನ್ನು ದಾಖಲಿಸಿರುವುದಾಗಿ ವಿಶೇಷ ಪೋಲೀಸ್ ಆಯುಕ್ತ ಪ್ರವೀಣ್ ರಂಜನ್ ಹೇಳಿದರು. "ಈ ಟೂಲ್‌ಕಿಟ್ ಒಂದು ಸಾಗರದಾಚೆಯ ಸಂಘಟಿತ ಜಾಲದಿಂದ ಪಿತೂರಿಯನ್ನು ಬಯಲು ಮಾಡುತ್ತದೆ" ಎಂದು ಮುಂದುವರೆದು ಅವರು ಹೇಳಿದರು.

ರೈತರು ಏಕೆ ಪ್ರತಿಭಟಿಸುತ್ತಿದ್ದಾರೆ ಎಂದು ವಿವರಿಸುವ ಈ ಟೂಲ್‌ಕಿಟ್‌ನಲ್ಲಿ ವಿವಾದಾತ್ಮಕ ಎನ್ನಬಹುದಾದ ಏನೂ ಇಲ್ಲ. ಟೂಲ್‌ಕಿಟ್‌ನಲ್ಲಿ ಉಲ್ಲೇಖಿಸಿರುವ ಹೆಚ್ಚಿನ ಪ್ರಶ್ನೆಗಳನ್ನು, ಈ ಕಾಯ್ದೆಗಳು ಕಾರ್ಪೊರೇಟ್‌ಗಳಿಗೆ ನೆರವಾಗುತ್ತವೆ ಎಂಬಿತ್ಯಾದಿಗಳನ್ನು ವಿರೋಧ ಪಕ್ಷಗಳು ಈ ಮೊದಲೇ ಎತ್ತಿವೆ, ಮುಂದೆಯೂ ಸಂಸತ್ತಿನಲ್ಲಿ ಎತ್ತುತ್ತವೆ. ಟೂಲ್‌ಕಿಟ್‌ನಲ್ಲಿ ಸೂಚಿಸಲಾದ ಅನೇಕ ಕ್ರಮಗಳು ಕೂಡ ದಿನನಿತ್ಯದ ಕ್ರಿಯೆಗಳೇ. "ಭಾರತೀಯ ರೈತರಿಗೆ ನಮ್ಮ ಬೆಂಬಲವನ್ನು ಟ್ವೀಟ್ ಮಾಡಿ", #FarmersProtest, #StandWithFarmers ಎನ್ನುವ ಹ್ಯಾಷ್‌ಟ್ಯಾಗ್ ಗಳನ್ನು ಬಳಸಿ, ನಿಮ್ಮ ಯಾವುದೇ ಜನಪ್ರತಿನಿಧಿಗಳಿಗೆ ಕರೆ ಮಾಡುವ ಮೂಲಕ ಅಥವಾ ಇಮೇಲ್ ಮಾಡುವ ಮೂಲಕ ಕೃಷಿ ವಿರೋಧಿ ಕಾನೂನುಗಳನ್ನು ವಾಪಸ್ಸು ತೆಗೆದುಕೊಳ್ಳುವಂತೆ ಹೇಳಿ, ಆನ್‌ಲೈನ್ ಮನವಿಗಳಿಗೆ ಸಹಿ ಹಾಕಿ ಎಂದು ಕೇಳುವುದು; ಫೆಬ್ರುವರಿ 13/14 2021ರಂದು ಹತ್ತಿರದ ಭಾರತೀಯ ರಾಯಭಾರಿ ಕಚೇರಿ, ಮಾಧ್ಯಮ ಕಚೇರಿ ಅಥವಾ ಸ್ಥಳೀಯ ಸರಕಾರಿ ಕಚೇರಿಯ ಮುಂದೆ ಕಾರ್ಯಾಚರಣೆಗಳನ್ನು ಆಯೋಜಿಸಿ, ಸಾಮಾಜಿಕ ಜಾಲತಾಣಗಳಲ್ಲಿ ಹ್ಯಾಷ್ಟ್ಯಾಗ್‌ಗಳನ್ನು ಬಳಸಿ. ಚಿತ್ರಗಳನ್ನು ಹಂಚಿಕೊಳ್ಳಿ ಎನ್ನುವುದು– ಇವೆಲ್ಲವೂ ಟ್ವಿಟರಿನಲ್ಲಿ ಸಾಮಾನ್ಯವಾಗಿರುವ ಸಂಗತಿಗಳೇ.

ಇದರಲ್ಲೇನು ರಾಜದ್ರೋಹವಿದೆ?

ಟೂಲ್‌ಕಿಟ್ ಅನ್ನು ಟ್ವೀಟ್ ಮಾಡಿರುವುದು ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಲ್ಪಟ್ಟ ಹದಿಹರೆಯದ ಕಾರ್ಯಕರ್ತೆ ಪರಿಸರವಾದಿ, ಗ್ರೇಟಾ ಥನ್‌ಬರ್ಗ್. ಎಲ್ಲ ಜನಾಂಗಗಳು ಮತ್ತು ರಾಷ್ಟ್ರೀಯ ಗಡಿಗಳನ್ನು ಮೀರಿದ ಇಂತಹ ಪ್ರಶ್ನೆಗಳ ಮೇಲೆ ಅಂತರರಾಷ್ಟ್ರೀಯ ಸೌಹಾರ್ದದ ಕಾರ್ಯಾಚರಣೆಗಳಲ್ಲಿ ಇಂತಹ ಟೂಲ್‌ಕಿಟ್‌ಗಳು ಸಾಮಾನ್ಯ ಸಾಧನಗಳು. ಉದಾಹರಣೆಗೆ, ತಮ್ಮ ತಾಯ್ನಾಡಿನ ಹಕ್ಕಿಗಾಗಿ ಪ್ಯಾಲೇಸ್ಟಿನ್ ಜನತೆಯ ಹೋರಾಟಕ್ಕೆ ವಿಶ್ವಸಂಸ್ಥೆಯೂ 'ಅಂತರರಾಷ್ಟ್ರೀಯ ಸೌಹಾರ್ದ ದಿನ' ಆಚರಣೆಗೆ ಕರೆಯ ಮೂಲಕ ಬೆಂಬಲ ನೀಡಿದೆ. ಅದಲ್ಲದೆ ಡಿಸೆಂಬರ್ 20 2020 ಇಂತಹ ಕಾರ್ಯಾಚರಣೆಗಳ ದಿನ ಎಂದೂ ಸಹ ನಿರ್ಧರಿಸಲಾಗಿತ್ತು. ಘೋಷಣೆಗಳು, ಹ್ಯಾಶ್‌ಟ್ಯಾಗ್‌ಗಳು ಹೀಗೆ ಅನೇಕ ರೀತಿಯ ಟೂಲ್‌ಕಿಟ್‌ಗಳನ್ನು ಅಮೆರಿಕದಲ್ಲಿರುವ ರಾಷೆಲ್ ಕೊರ್ರಿ ಸೇರಿದಂತೆ ವಿಶ್ವದಾದ್ಯಂತ ಹಲವಾರು ಸಂಘಟನೆಗಳು ಹಂಚಿಕೊಂಡವು. ಅಮೆರಿಕದಲ್ಲಿ Black Lives Matter (ಕರಿಯ ಜೀವಗಳಿಗೂ ಬೆಲೆಯಿದೆ) ಹ್ಯಾಶ್‌ಟ್ಯಾಗ್ ವಿವಿಧ ಕಾರ್ಯಾಚರಣೆಗಳನ್ನು ಸೂಚಿಸಿದ ಟೂಲ್‌ಕಿಟ್ ಮೂಲಕ ಜಗತ್ತಿನಾದ್ಯಂತ ಹರಡಿದಾಗ, ಪ್ರತಿಯೊಂದು ಪ್ರತಿಭಟನಾ ಕಾರ್ಯಾಚರಣೆಯಲ್ಲೂ ತನ್ನ ಮತ್ತು ಅಮೆರಿಕಾದ ವಿರುದ್ದ ಪಿತೂರಿಯನ್ನು ಕಾಣುತ್ತಿದ್ದ ಡೊನಾಲ್ಡ್ ಟ್ರಂಪ್ ನೇತೃತ್ವದ ಆಗಿನ ಅಮೆರಿಕನ್ ಆಡಳಿತ ಕೂಡ ಪೊಲಿಸ್ ಮೂಲಕ "ತನಿಖೆ"ಗಳನ್ನು ಏರ್ಪಡಿಸಲಿಲ್ಲ.

ಮೊದಲು ಗೃಹ ಸಚಿವರಾದ ಅಮಿತ್ ಶಾ ಹಾಕಿದ ಸರಕಾರದ ಅಧಿಕೃತ ಪ್ರತಿ–ಹ್ಯಾಶ್ ಟ್ಯಾಗ್ "India together"(ಭಾರತದ ಒಗ್ಗಟ್ಟು)ನ್ನು ಅನುಸರಿಸಿ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಅಧಿಕೃತ ಜಾಲತಾಣದಲ್ಲಿಯೂ ಅದನ್ನು ಹಾಕಲಾಯಿತು. ಯಾರ ವಿರುದ್ಧ ಒಗ್ಗಟ್ಟು? ಮೈಕೊರೆಯುವ ಚಳಿಯಲ್ಲಿ ತಮ್ಮ ಹಕ್ಕುಗಳಿಗಾಗಿ ಹೋರಾಡುತ್ತಿರುವವರು ಭಾರತೀಯರಲ್ಲವೇ? ಬಿಜೆಪಿ ಮತ್ತು ಆರೆಸ್ಸೆಸ್‌ನ ವಿದೇಶಿ ಸೆಲ್‌ಗಳು ಮತ್ತು ಮಿತ್ರ ಸಂಘಟನೆಗಳಿಗೆ *"Howdy Modi"* ಯಂತಹ ಕಾರ್ಯಕ್ರಮಗಳಿಗೆ ಟೂಲ್‌ಕಿಟ್‌ಗಳನ್ನು ಹಂಚಿಕೊಳ್ಳುವ ಹಕ್ಕಿದ್ದರೆ, ಅದೇ ರೀತಿ ವಿದೇಶಗಳಲ್ಲಿರುವ ಇತರ ಭಾರತೀಯ ಮೂಲದವರು ರೈತರ ಬೆಂಬಲಕ್ಕಾಗಿ "ಜೈಕಿಸಾನ್" ಸಂಘಟಿಸುವುದು ಹೇಗೆ ರಾಷ್ಟ್ರವಿರೋಧಿಯಾಗುತ್ತದೆ?


ಸಂಪೂರ್ಣ ಹರಿಯಾಣದಲ್ಲಿ ಎಲ್ಲಾ ರೀತಿಯ ಸಂವಹನಗಳನ್ನು ನಿಲ್ಲಿಸಲು ಅಂತರ್ಜಾಲವನ್ನು ಕತ್ತರಿಸಿದ್ದು ನಿಜವಲ್ಲವೇ? ದೆಹಲಿಯ ಗಡಿಗಳನ್ನು ದೊಡ್ಡ ದೊಡ್ಡ ಮೊಳೆಗಳಿಂದ, ಕಬ್ಬಿಣದ ಬ್ಯಾರಿಕೇಡ್‌ಗಳಿಂದ ಸಾವಿನ ಜಾಲಗಳಾಗಿ ಮತ್ತು ಚಿತ್ರಹಿಂಸಾ ಕೊಠಡಿಗಳಾಗಿ ಪರಿವರ್ತಿಸಿ ಸಾವಿರಾರು ರೈತರನ್ನು ತಮ್ಮ ಪ್ರತಿಭಟನಾ ಸ್ಥಳಗಳಲ್ಲಿ ಬಂಧಿಯಾಗುವಂತೆ ಮಾಡಿರುವುದು ಸತ್ಯವಲ್ಲವೇ? ಇಂತಹ ನಿಜಚಿತ್ರಗಳನ್ನು ಗೃಹ ಸಚಿವಾಲಯದ ಆದೇಶಗಳಿಗೆ ಬದ್ಧವಾಗಿರದ ವಾಹಿನಿಗಳು ಪ್ರಪಂಚದಾದ್ಯಂತ ತೋರಿಸುತ್ತಿವೆ. ಗೃಹ ಸಚಿವಾಲಯ ಇಂತಹ ಈ ಕಥೆಗಳನ್ನು ಭಾರತದಲ್ಲಾದರೆ ನ್ಯೂಸ್‌ರೂಂಗಳಲ್ಲೇ ಕೊಂದು ಬಿಡುತ್ತಿತ್ತು. ಈ ಚಿತ್ರಗಳನ್ನು ನೋಡುವ ವೀಕ್ಷಕರು ಖಂಡಿತವಾಗಿಯೂ ರೈತರ ಹೋರಾಟಗಳ ಸಂದರ್ಭದಲ್ಲಿ ಪ್ರಜಾಪ್ರಭುತ್ವ ಹಕ್ಕುಗಳ ಮೇಲಿನ ದಾಳಿಯ ಬಗ್ಗೆ ತಮ್ಮದೇ ಆದ ಅಭಿಪ್ರಾಯವನ್ನು ರೂಪಿಸಿಕೊಳ್ಳುತ್ತಾರೆ.

ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಮತ್ತೊಂದು ಹ್ಯಾಶ್‌ಟ್ಯಾಗ್ ಅಂದರೆ India Against Propaganda (ಅಪಪ್ರಚಾರದ ವಿರುದ್ಧ ಭಾರತ). ಇಲ್ಲಿ ಮತ್ತದೇ ಪ್ರಶ್ನೆ ಮೂಡುತ್ತದೆ. ಯಾರ ವಿರುದ್ಧ ಪ್ರಚಾರ? ಮೊದಲಿನಿಂದಲೂ ಹೋರಾಟದಲ್ಲಿರುವ ರೈತರನ್ನು ಖಲಿಸ್ತಾನಿಗಳು, ಪಾಕಿಸ್ತಾನದ ಮತ್ತು ಚೀನದ ಏಜೆಂಟರು, ಇವರೆಲ್ಲ ದೇಶದ್ರೋಹಿಗಳು, ಪ್ರತಿಪಕ್ಷಗಳ ಏಜೆಂಟರು ಅಥವ ಅವರಿಂದಾಗಿ ದಾರಿ ತಪ್ಪಿದವರು ಎಂದೆಲ್ಲ ಸರ್ಕಾರವೇ ಪ್ರಚಾರ ಮಾಡುತ್ತ ಬಂದಿದೆ. ನಿಜ ಹೇಳುವುದಾದರೆ, ಭಾರತವು "ಸುಳ್ಳನ್ನು ಸಾಕಷ್ಟು ದೊಡ್ಡದಾಗಿ ಹೇಳಿದರೆ ಮತ್ತು ಅದನ್ನು ಮತ್ತೆ–ಮತ್ತೆ ಹೇಳುತ್ತಲೇ ಇದ್ದರೆ ಅಂತಿಮವಾಗಿ ಜನರು ಅದನ್ನು ನಂಬುತ್ತಾರೆ" ಎನ್ನುವ ಗೊಬೆಲ್ಸ್ ತಂತ್ರವನ್ನು ನೆನಪಿಸುವ ಸರಕಾರದ ಅಪಪ್ರಚಾರಕ್ಕೆ ವಿರುದ್ಧವಾಗಿದೆ. ಯಾವ ಅಪಪ್ರಚಾರದ ವಿರುದ್ಧ ಭಾರತವು ಎದ್ದು ನಿಲ್ಲಬೇಕಾಗಿದೆಯೋ ಆ ಅಪಪ್ರಚಾರವನ್ನು ಮಾಡುತ್ತಿರುವವರು ರೈತರಲ್ಲ, ಅಥವ ಪ್ರಪಂಚದಾದ್ಯಂತ ಅವರಿಗೆ ಹೆಚ್ಚೆಚ್ಚು ಬೆಂಬಲ ನೀಡುತ್ತಿರುವವರೂ ಅಲ್ಲ.

ಕೆಲವರು ವಿವರಿಸುವಂತೆ ಸರಕಾರದ ಈ ಕ್ರಮಗಳು ಕೇವಲ "ಮಿತಿಮೀರಿದ ಪ್ರತಿಕ್ರಿಯೆಗಳು" ಅಲ್ಲ. ಯಾವುದೇ ರೀತಿಯ ಭಿನ್ನಾಭಿಪ್ರಾಯವನ್ನು ಅಥವ ಸರಕಾರ ಹಾಗೂ ಆಡಳಿತ ಪಕ್ಷಗಳ ಧೋರಣೆಗಳನ್ನು, ಪ್ರಕಟಣೆಗಳನ್ನು ಪ್ರಶ್ನಿಸುವುದನ್ನು ಕೂಡ ಸಹಿಸಲಾರದ ಈ ಸರಕಾರದ ಡಿಎನ್‌ಎಯಲ್ಲೇ ಆಳವಾಗಿ ಹುದುಗಿರುವ ಅಸಹಿಷ್ಣುತೆಯಿಂದಲೇ ಇಂತಹ ಅಮಾನವೀಯ ಕೃತ್ಯಗಳು ಹೊಮ್ಮುತ್ತವೆ. ಭಿನ್ನಾಭಿಪ್ರಾಯ ವ್ಯಕ್ತಪಡಿಸುವವರ ವಿರುದ್ಧ ಕ್ರಮ ಕೈಗೊಳ್ಳುತ್ತದೆ, ನಂತರ ಸೌಹಾರ್ದವನ್ನೇ ದುಷ್ಟತನವೆಂಬಂತೆ ಚಿತ್ರಿಸುವ ಅಷ್ಟೇ ಸರ್ವಾಧಿಕಾರಶಾಹಿಯಾದ ಪ್ರವೃತ್ತಿಯನ್ನು ತೋರುತ್ತದೆ. ಈಗ ಸರಕಾರವು ತನ್ನ ಈ ಪ್ರವೃತ್ತಿಯನ್ನು ದೇಶಿಯ ವಲಯದಿಂದ ಅಂತರಾಷ್ಟ್ರೀಯ ಅಖಾಡಕ್ಕೆ ವಿಸ್ತರಿಸುತ್ತಿದೆ.

ದೌರ್ಜನ್ಯ ಅಥವ ಅನ್ಯಾಯದಿಂದ ತತ್ತರಿಸಿದ ಸಾಮಾನ್ಯ ನಾಗರಿಕರು ಅನ್ಯಾಯಕ್ಕೊಳಗಾದವರೊಂದಿಗೆ ಸೌಹಾರ್ದವನ್ನು ತೋರಿಸಬೇಕೆಂಬ ಅಥವ ಅನ್ಯಾಯಕ್ಕೆ ಹೊಣೆಗಾರರಾದವರ ತಪ್ಪು ಕ್ರಿಯೆಗಳ ವಿರುದ್ಧ ಹೋರಾಟವನ್ನು ಬೆಂಬಲಿಸಬೇಕು ಎಂಬ ತಮ್ಮ ಪ್ರಜ್ಞೆಯ ಕರೆಯನ್ನು ವ್ಯಕ್ತಪಡಿಸಿದಾಗ ಒಂದು ಸಮಾಜದ ನೈತಿಕ ಬೆನ್ನುಮೂಳೆ ಖಂಡಿತವಾಗಿಯೂ ಬಲಗೊಳ್ಳುತ್ತದೆ. ನಾಝಿ ಆಳ್ವಿಕೆಯ ಒಂದು ಯಶೋಗಾಥೆಯೆಂದರೆ ಸಮುದಾಯಗಳ ನಡುವೆ, ವರ್ಷಾನುಗಟ್ಟಲೆ ಜೊತೆಯಲ್ಲೇ ಕೆಲಸ ಮಾಡಿದ ಸಹಯೋಗಿಗಳ ಮಧ್ಯೆ, ಸ್ನೇಹಿತರು


ಪುಟ 10 ನೋಡಿ



ಲಕ್ಷಾಂತರ ರೈತರ ಕೂಗು ಕೇಳುವುದಿಲ್ಲ–ಟ್ವಿಟರ್ ದನಿ ನಿದ್ದೆಗೆಡಿಸುತ್ತದೆ!
ವ್ಯಂಗ್ಯಚಿತ್ರ: ಸುಭಾನಿ, ಡೆಕ್ಕನ್ ಕ್ರಾನಿಕಲ್



"ಸಹಾಯ ಮಾಡಿ! ಸಹಾಯ ಮಾಡಿ!ಸಚಿನ್! ಅಕ್ಷಯ್! ಅಜಯ್! ಅನಿಲ್!
ವ್ಯಂಗ್ಯಚಿತ್ರ: ಸತೀಶ ಆಚಾರ್ಯ, ನ್ಯೂಸ್ ಸ್ಟ್ರಿಂಗ್



ವ್ಯಂಗ್ಯಚಿತ್ರ: ಪಿ. ಮಹಮ್ಮದ್

ಜಾಗತಿಕ ರಂಗಕ್ಕೆ ವಿಸ್ತರಿಸಿದ ಮೋದಿ ಸರಕಾರದ ಬೆದರಿಕೆ ತಂತ್ರ

ಪುಟ 9 ರಿಂದ


ಮತ್ತು ಕುಟುಂಬಗಳ ನಡುವೆ ಕೂಡ ಇರುವ ಸಹಜ ಸೌಹಾರ್ದವನ್ನು ಮುರಿಯಲು ಭಯವನ್ನು ಮತ್ತು ನಂತರ ಭಯೋತ್ಪಾದನೆಯನ್ನು ಹರಡಿಸಿದ್ದು. ಲಕ್ಷಾಂತರ ಜನಗಳು ನಾಝಿ ಆಡಳಿತದಲ್ಲಿ ತಮ್ಮ ಯಹೂದಿ ನೆರೆಹೊರೆಯವರನ್ನು ಯಾತನಾ ಶಿಬಿರಗಳಿಗೆ ಎಳೆದೊಯ್ಯುವಾಗ ಮೌನವಾಗಿದ್ದರು. ಬಹಶಃ ಸೌಹಾರ್ದತೆಗಳನ್ನು ಈ ರೀತಿಯಾಗಿ ಬುಡಮೇಲು ಮಾಡಿದ್ದನ್ನು ಮತ್ತು ಧ್ವಂಸಗೊಳಿಸಿದ್ದನ್ನು ಕಂಡಾಗ ಹುಟ್ಟಿದ ದಿಗಿಲಿನಿಂದಲೇ ಹಿಟ್ಲರನ ಯಾತನಾ ಶಿಬಿರಗಳಿಂದ ಬದುಕುಳಿದ ಲೂಥೆರನ್ ಪಾದ್ರಿ ಮಾರ್ಟಿನ್ ನಿಮೊಲ್ಲರ್‌ನ ಈ ಪ್ರಖ್ಯಾತ ಕವಿತೆ ಹೊಮ್ಮಿ ಬಂತು:

"ಮೊದಲು ಅವರು ಕಮ್ಯುನಿಷ್ಟರನ್ನು
ಹುಡುಕಿ ಬಂದರು, ನಾನು ಮಾತಾಡಲಿಲ್ಲ.
ಏಕೆಂದರೆ ನಾನು ಕಮ್ಯುನಿಸ್ಟನಾಗಿರಲಿಲ್ಲ
ಮತ್ತೆ ಅವರು ಸೋಶಲಿಸ್ಟರನ್ನು ಹುಡುಕಿಬಂದರು,
ನಾನು ಮಾತನಾಡಲಿಲ್ಲ
ಏಕೆಂದರೆ ನಾನು ಸೋಶಲಿಸ್ಟನಾಗಿರಲಿಲ್ಲ
ಮತ್ತೆ ಅವರು ಟ್ರೇಡ್ ಯೂನಿಯನ್‌ನವರನ್ನು
ಹುಡುಕಿ ಬಂದರು, ನಾನು ಮಾತಾಡಲಿಲ್ಲ
ಏಕೆಂದರೆ ನಾನು
ಟ್ರೇಡ್‌ಯೂನಿಯನ್‌ನವನು ಆಗಿರಲಿಲ್ಲ.
ಮತ್ತೆ ಅವರು ಯೆಹೂದ್ಯರನ್ನು ಹುಡುಕಿ
ಬಂದರು, ನಾನು ಮಾತಾಡಲಿಲ್ಲ
ಏಕೆಂದರೆ ನಾನು ಯೆಹೂದ್ಯನಾಗಿರಲಿಲ್ಲ
ಮತ್ತೆ ಅವರು ನನ್ನನ್ನು ಹುಡುಕಿ ಬಂದರು
ಆಗ ಯಾರೂ ಉಳಿದಿರಲಿಲ್ಲ,
ನನಗಾಗಿ ಮಾತನಾಡಲು"

ಇಂದು ಭಾರತದಲ್ಲಿ ಈ ಪಾಟಗಳು ಪ್ರಸ್ತುತವಾಗಿವೆ.

ಸೌಹಾರ್ದವೆಂದರೆ ಪೀಡಕರು, ಸರ್ವಾಧಿಕಾರಿಗಳು, ನಿರಂಕುಶಾಧಿಕಾರಿಗಳಿಗೆ ವಿಪರೀತ ಭಯ. ಭಾರತೀಯರೆಲ್ಲರ ಐಕ್ಯತೆಯನ್ನು ಖಾತ್ರಿಪಡಿಸುವ ಜನಾದೇಶ ಪಡೆದ ಸರಕಾರಗಳು ಆ ಐಕ್ಯತೆಯನ್ನೇ ಒಡೆಯಲು ಧರ್ಮ, ಜಾತಿ, ಭಾಷೆಗಳನ್ನು ಬಳಸಿ ದ್ವೇಷವನ್ನು ಹರಡುವುದನ್ನು ನಾವು ನೋಡಿದ್ದೇವೆ. ರೈತರ ಹೋರಾಟವು ಜಾತಿ, ಧರ್ಮಗಳನ್ನು ಮೀರಿದ ಒಂದು ಜಾತ್ಯತೀತ ಹೋರಾಟವಾಗಿದೆ. ಸಿಂಘು ಗಡಿಯಲ್ಲಿ ಬಹುಪಾಲು ಸಿಖ್ ಸಮುದಾಯಕ್ಕೆ ಸೇರಿದ ರೈತರ ಮೇಲೆ ಹಲ್ಲೆ ಮಾಡಿದ ಗೂಂಡಾಗಳಲ್ಲಿ ಕೆಲವರು 'ಜೈ ಶ್ರೀರಾಮ್' ಎಂದು ಘೋಷಣೆ ಕೂಗುತ್ತಾ ಒಂದು ಧಾರ್ಮಿಕ ಬಣ್ಣ ಕೊಡಲು ಪ್ರಯತ್ನಿಸಿದರು. ಅವರಲ್ಲಿ ಯಾರ ಮೇಲಾದರೂ ದಿಲ್ಲಿ ಪೋಲೀಸರು 'ಟೂಲ್‌ಕಿಟ್' ಪ್ರಕರಣದಲ್ಲಿ ದುರುಪಯೋಗಪಡಿಸಿಕೊಂಡ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 153 ಬಿ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಿಕೊಂಡಿದ್ದಾರೆಯೇ?

ಇಂದು ಎಲ್ಲಾ ವಿಭಾಗಗಳ ದುಡಿಯುವ ಜನರು ಸರ್ಕಾರದ ನೀತಿಗಳ ಒತ್ತಡವನ್ನು ಅನುಭವಿಸುತ್ತಿದ್ದಾರೆ. ಈ ನೀತಿಗಳು ಅವರ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿವೆ. ಇಂತಹವರ ಅಭಿಪ್ರಾಯಗಳನ್ನು ಕೇಳಿಯೂ ಇಲ್ಲ, ಹೇಳಿದಾಗ ಕೇಳಿಸಿಕೊಂಡಿದ್ದೂ ಇಲ್ಲ. ಹೊಸ ಕಾರ್ಮಿಕ ಸಂಹಿತೆಗಳನ್ನು ಮುಂದೊತ್ತಿದಾಗ ಕಾರ್ಮಿಕರೊಂದಿಗೆ ಹೀಗೇ ವರ್ತಿಸಲಾಯಿತು. ಅವರನ್ನು ನಿರ್ಲಕ್ಷಿಸಲಾಯಿತು. ಆದಿವಾಸಿಗಳೊಂದಿಗೆ ಕೂಡ ಹೊಸ ಗಣಿಗಾರಿಕೆ ಕಾಯ್ದೆಗಳನ್ನು ತರುವಾಗ ಹೀಗೇ ಆಯಿತು. ಅವರೊಡನೆ ಯಾವ ಸಮಾಲೋಚನೆಯನ್ನೂ ನಡೆಸದೇ ಅವರ ಅರಣ್ಯಗಳು ಮತ್ತು ಜಮೀನುಗಳನ್ನು ಕಸಿದುಕೊಳ್ಳಲಾಯಿತು, ಅವರ ಗ್ರಾಮಸಭೆಗಳ ಅಧಿಕಾರಗಳನ್ನು ವಂಚಿಸಲಾಯಿತು. ಇಂತಹ ಉದಾಹರಣೆಗಳು ಅನೇಕ. ಇತ್ತೀಚಿನ ಉದಾಹರಣೆ ಎಂದರೆ ರೈತರೊಡನೆ ಸಮಾಲೋಚನೆಗಳನ್ನು ನಡೆಸದೆ ಸಂಸತ್ತಿನಲ್ಲಿ ಕೃಷಿ ಕಾಯ್ದೆಗಳನ್ನು ಬಲವಂತದಿಂದ ಪಾಸು ಮಾಡಿಕೊಂಡದ್ದು. ಅಂಗವಿಕಲರ ಚಳುವಳಿಯ ಒಂದು ಘೋಷಣೆ



ಹೀಗಿದೆ–"ನಾವಿಲ್ಲದೆ ನಮ್ಮ ಬಗ್ಗೆ ಏನೂ ಸಲ್ಲ". ಭಾರತದ ಪ್ರಸ್ತುತ ಪರಿಸ್ಥಿತಿಯಲ್ಲಿ ಈ ಘೋಷಣೆ ಎಲ್ಲರಿಗೂ ಸೂಕ್ತವಾಗಿದೆ. ಆದ್ದರಿಂದಲೇ ರೈತರ ಧೀರೋದಾತ್ತ ಹೋರಾಟ ಒಂದು ಬಹು ವಿಸ್ತಾರವಾದ ಜನವಿಭಾಗದಲ್ಲಿ ಬಲವಾಗಿ ಅಣುರಣನಗೊಳ್ಳುತ್ತಿದೆ. ಏಕೆಂದರೆ ಸರಕಾರ ಯಾರ ಹೆಸರಲ್ಲಿ ಧೋರಣೆಗಳನ್ನು ರೂಪಿಸುತ್ತಿದೆಯೋ, ಅವುಗಳಿಂದ ಆ ವಿಭಾಗಗಳಿಗೇನೂ ಪ್ರಯೋಜನವಾಗುತ್ತಿಲ್ಲ, ಆರಿಸಿದ ಕೆಲವರಿಗಷ್ಟೇ ಅವುಗಳಿಂದ ಪ್ರಯೋಜನವಾಗುತ್ತಿದೆ ಎಂಬುದು ಸರ್ವಸಾಮಾನ್ಯ ಅನುಭವ. ಜನಸಾಮಾನ್ಯರಲ್ಲಿ ಬೆಳೆಯುತ್ತಿರುವ ಈ ಸೌಹಾರ್ದವನ್ನೇ ಸರಕಾರ ಮುರಿಯಲು ಪ್ರಯತ್ನಿಸುತ್ತಿರುವುದು. ಈಗ ಇದು ಅಂತರ್ರಾಷ್ಟ್ರೀಯ ವಲಯಕ್ಕೆ ವಿಸ್ತರಿಸಿರುವುದರಿಂದ, ಭಾರತದಲ್ಲಿ ಸಾಕಷ್ಟು ಯಶಸ್ವಿಯಾಗಿರುವ ತನ್ನ ಅದೇ ಹಳೆಯ ಬೆದರಿಕೆಯ ತಂತ್ರಗಳಿಂದ, ಹುಸಿ ರಾಷ್ಟ್ರವಾದದಿಂದ ಜನಗಳನ್ನು ಸುಮ್ಮನಾಗಿಸಬಹುದು, ಅವರು ರಕ್ಷಣಾತ್ಮಕವಾಗಿರುವಂತೆ ಮಾಡಬಹುದು ಮತ್ತು ಅವರ ಸೌಹಾರ್ದವನ್ನು ದುರ್ಬಲಗೊಳಿಸಬಹುದು ಎಂದು ಈ ಸರಕಾರ ಭಾವಿಸುತ್ತಿದೆ.

ಆದರೆ, ಇದು ಅಷ್ಟು ಸುಲಭವಲ್ಲ. ಏಕೆಂದರೆ ಈ ಸರಕಾರ ಊಹಿಸಲಾರದ ರೀತಿಗಳಲ್ಲಿ ರೈತರ ಹೋರಾಟದ ಸಾವಯವ ಬೆಳವಣಿಗೆ ಕಾಣಬರುತ್ತಿದೆ. ಮಹಿಳೆಯರ ಭಾಗವಹಿಸುವಿಕೆ ಹೆಚ್ಚುತ್ತಲೇ ಇರುವುದು, ಮನಮುಟ್ಟುವಂತಿರುವುದು ಈ ಹೋರಾಟದ ಶಕ್ತಿಯ ಒಂದು ಸೂಚಕ. ಹರಿಯಾಣದಾದ್ಯಂತ, ಮುಖ್ಯವಾಗಿ ಜನವರಿ 26ರ ನಂತರ, ಅಪಾರ ಸಂಖ್ಯೆಗಳಲ್ಲಿ ಜನರು ಸೇರುತ್ತಿರುವುದು ಹರಿಯಾಣದ ಮುಖ್ಯಮಂತ್ರಿಗಳಿಗೆ ಆಶ್ಚರ್ಯಕರವಾಗಿ ಕಾಣುತ್ತಿರಬಹುದಷ್ಟೇ ಅಲ್ಲ, ಒಂದು ದುಃಸ್ವಪ್ನವಾಗಿಯೂ ಕಾಡುತ್ತಿರಬಹುದು. ಏಕೆಂದರೆ 'ಈ ಹೋರಾಟದಲ್ಲಿ ನಮ್ಮ ರಾಜ್ಯದ ರೈತರೇನೂ ಇಲ್ಲ' ಎಂದು ಅವರು ಸಾರಿ ಬಹಳ ದಿನಗಳೇನೂ ಅಗಿಲ್ಲ. 'ಪಂಚಾಯತು'ಗಳ ನಂತರ 'ಪಂಚಾಯತು'ಗಳು ದಿಲ್ಲಿ ಗಡಿಗಳಲ್ಲಿ ಪ್ರತಿಭಟನೆಗಳಲ್ಲಿ ಸೇರಿಕೊಳ್ಳಿ, ಮತ್ತು ರೈತರ ಬೇಡಿಕೆಗಳನ್ನು ವಿರೋಧಿಸುವ ಎಲ್ಲ ಚುನಾಯಿತ ಪ್ರತಿನಿಧಿಗಳನ್ನು ಸಾಮಾಜಿಕವಾಗಿ ಬಹಿಷ್ಕರಿಸಿ ಎಂದು ಕರೆ ನೀಡುತ್ತಿರುವುದು ಅವರಿಗೇನೂ ಒಳ್ಳೆಯ ಸುದ್ದಿ ಅಲ್ಲ.

"ಸಾಗರದಾಚೆಗಿನ ಪಿತೂರಿ"ಯೊಂದಿದೆ ಎಂದು ಎಫ್.ಐ.ಆರ್. ದಾಖಲಿಸುವುದರಿಂದ, ಬೆದರಿಕೆಗಳನ್ನು ಹಾಕಿ ವಿಶ್ವದ ದೃಷ್ಟಿಯಲ್ಲಿ ಭಾರತದ ಹೆಸರುಗೆಡಿಸುವುದರಿಂದ, ಇದು ರೈತರ ಹೋರಾಟ, ರೈತರೇ ಮಾಡುತ್ತಿರುವ ಹೋರಾಟ, ಆದರೆ ರೈತರಿಗಾಗಿಯಷ್ಟೇ ಅಲ್ಲ ಎಂಬ ನೆಲದ ವಾಸ್ತವತೆಯನ್ನೇನೂ ಬದಲಿಸಲು ಸಾಧ್ಯವಿಲ್ಲ. ಈ ಹೋರಾಟ ಭಾರತದ ಎಲ್ಲರಿಗಾಗಿ ಮತ್ತು ಅದರ ಪ್ರಜಾಪ್ರಭುತ್ವಕ್ಕಾಗಿ. ■



ಶೈಕ್ಷಣಿಕ ಸಮಸ್ಯೆಗಳನ್ನು ಬಗೆಹರಿಸಲು ಒತ್ತಾಯಿಸಿ ಎಸ್‌ಎಫ್‌ಐ ಪ್ರತಿಭಟನೆ

ಶೈಕ್ಷಣಿಕ ಸಮಸ್ಯೆಗಳನ್ನು ಬಗೆಹರಿಸಲು ಸಂಬಂಧಿಸಿದಂತೆ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ತಾಲೂಕು ಸಮಿತಿಯು ಪ್ರತಿಭಟನೆ ಮಾಡಿ, ಶೈಕ್ಷಣಿಕ ವರ್ಷವೂ ಕಳೆದ ತಿಂಗಳಿಂದ ಪ್ರಾರಂಭವಾಗಿದ್ದು ಉತ್ತಮ ಗುಣಮಟ್ಟದ ಶಿಕ್ಷಣಕ್ಕಾಗಿ ಸಾವಿರಾರು ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶದಿಂದ ಕುಷ್ಟಗಿ ಪಟ್ಟಣಕ್ಕೆ ಮತ್ತು ಗಜೇಂದ್ರಗಡ, ಇಲಕಲ್ಲ, ಇತರ ಕಡೆ ಕೂಡ ತಮ್ಮ, ತಮ್ಮ ಶೈಕ್ಷಣಿಕ ದೃಷ್ಟಿಯಿಂದ ದಿನನಿತ್ಯ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಾರೆ. ಆದರೆ ತಾಲೂಕಿನಲ್ಲಿ ವಿದ್ಯಾರ್ಥಿಗಳಿಗೆ ಕಾಲೇಜಿನ ಸಮಯಕ್ಕೆ ಸರಿಯಾಗಿ ಬಸ್ಸುಗಳೇ ಇರದ ಕಾರಣ ಹಲವಾರು ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ, ದಿನನಿತ್ಯ ಬೆಳಿಗ್ಗೆಯಿಂದ ಬಸ್ಸಿಗೆ ಕಾಯುವುದು ಒಂದು ಕೆಲಸವಾಗಿ ಬಿಟ್ಟಿದೆ ಎಂದು ವಿದ್ಯಾರ್ಥಿಗಳು ನಮ್ಮ ಸಂಘಟನೆ ಮುಂದೆ ತಮ್ಮ ಅಳಲನ್ನು ತೋಡಿಕೊಂಡರು ಜೊತೆಗೆ ಹಲವಾರು ಸಮಸ್ಯೆಗಳನ್ನು ವ್ಯಕ್ತಪಡಿಸಿದ್ದರು.

ಗ್ರಾಮೀಣ ಪ್ರದೇಶದ ಬಹುತೇಕ ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ವಿದ್ಯಾಭ್ಯಾಸಕ್ಕಾಗಿ ಹಾಸ್ಟೆಲ್ ಗಳ ಮೇಲೆ ಅವಲಂಬಿತರಾಗಿರುತ್ತಾರೆ ಆದ್ದರಿಂದ ಹಾಸ್ಟೆಲ್ ಬೇಕೆಂದು ಅರ್ಜಿ ಹಾಕಿದ ಎಲ್ಲಾ ವಿದ್ಯಾರ್ಥಿಗಳಿಗೆ ಅಂದರೆ sc.st.obc ಅಲ್ಪಸಂಖ್ಯಾತ ವರ್ಗದ ಸಮುದಾಯದ ಎಲ್ಲಾ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ಅನುಕೂಲಕ್ಕಾಗಿ ಹಾಸ್ಟೆಲ್‌ಗಳನ್ನು ಕೊಡಬೇಕೆಂದು ಒತ್ತಾಯಿಸಿದೆ.

ಬಹುತೇಕ ಸರಕಾರಿ ಶಾಲಾ ಕಾಲೇಜುಗಳಲ್ಲಿ ಶುದ್ಧವಾದ ಕುಡಿಯುವ ನೀರು ಇಲ್ಲ, ಉಪನ್ಯಾಸಕರ ಕೊರತೆ, ಬಸ್ ಸಮಸ್ಯೆ ಹೀಗೆ ಹತ್ತು ಹಲವಾರು ಸಮಸ್ಯೆಗಳು ಇದ್ದು ಪ್ರಮುಖವಾಗಿ ಈ ಕೆಳಗಿನ ಬೇಡಿಕೆಗಳನ್ನು ಈಡೇರಿಸಬೇಕೆಂದು ಕುಷ್ಟಗಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಅಮರೇಗೌಡ ಬಯ್ಯಾಪುರ ರವರಿಗೆ ಮನವಿ ಸಲ್ಲಿಸಿದೆ.

ಬೇಡಿಕೆಗಳು

1) ವಸತಿ ನಿಲಯಕ್ಕೆ ಅರ್ಜಿ ಹಸಕಿದ ಎಲ್ಲಾ ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯ ಕಲ್ಪಿಸಿಕೊಡಬೇಕು.

2)ಸರಕಾರಿ ಪದವಿ ಪೂರ್ವ ಕಾಲೇಜ್ ಕುಷ್ಟಗಿಯಲ್ಲಿ ಉಪನ್ಯಾಸಕರ ಕೊರತೆ ಇದ್ದು, ಆದಷ್ಟು ಬೇಗನೆ ಉಪನ್ಯಾಸಕರನ್ನು ಭರ್ತಿ ಮಾಡಬೇಕು, ಆಂಗ್ಲಭಾಷೆ ನಮ್ಮ ಭಾಗದ ವಿದ್ಯಾರ್ಥಿಗಳಿಗೆ ಕಠಿಣದ ವಿಷಯವಾಗಿದ್ದು. ಇಲ್ಲಿ ಬರುವ ಎಲ್ಲಾ ವಿದ್ಯಾರ್ಥಿಗಳು ಗ್ರಾಮೀಣ ಭಾಗದ ವಿದ್ಯಾರ್ಥಿಗಳಾಗಿದ್ದು, ಇಂಗ್ಲಿಷ್ ವಿಷಯದ ಬೋಧಕರ ಅವಶ್ಯಕತೆಯಿದೆ, ಆದಷ್ಟು ತೀವ್ರಗತಿಯಲ್ಲಿ ವಿಷಯಗಳ ಬೋಧಕರನ್ನು ನೇಮಿಸಬೇಕು.

3) ಕುಷ್ಟಗಿ ನಗರಕ್ಕೆ ಸ್ನಾತಕೋತ್ತರ ಪದವಿ ಮಂಜೂರು ಮಾಡಿಸಬೇಕು, ಇಲ್ಲಿನ ಸಾವಿರಾರು ವಿದ್ಯಾರ್ಥಿಗಳು ಇದ್ದು, ಇಲ್ಲಿ ಯಾವುದೇ ಸ್ನಾತಕೋತ್ತರ ಪದವಿ ಕಾಲೇಜುಗಳು ಇಲ್ಲದೇ ಇರುವುದರಿಂದ ಅನೇಕ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯಲು ದೂರದ ಸ್ಥಳಗಳಿಗೆ ಹೋಗಬೇಕಾಗಿದೆ, ಹಲವಾರು ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯುವುದರಿಂದ ವಂಚಿತರಾಗಿದ್ದಾರೆ. ಬೇರೊಂದು ಜಿಲ್ಲೆಗೆ ಹೋದರೆ ಅಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ, ಆದಕಾರಣ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಬಹಳ ತೊಂದರೆ ಆಗಿದೆ, ಮುಂದಿನ ವರ್ಷದಿಂದ ಸ್ನಾತಕೋತ್ತರ ಪದವಿ ಆರಂಭ ಮಾಡಿಸಬೇಕಾಗಿ ತಮ್ಮಲ್ಲಿ ವಿನಂತಿ.

4) ಕುಷ್ಟಗಿಯ ಸರಕಾರಿ ಪದವಿಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಶುದ್ಧವಾದ ಕುಡಿಯುವ ನೀರಿನ ಸಮಸ್ಯೆ ಇದೆ, ಆದಷ್ಟು ಬೇಗನೆ ಸಮಸ್ಯೆಯನ್ನು ಪರಿಹರಿಸಬೇಕು.

5) ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಥಮ ವರ್ಷದ ವಿದ್ಯಾರ್ಥಿಗಳು ಸುಮಾರು 300 ವಿದ್ಯಾರ್ಥಿಗಳು ದಾಖಲಾತಿ ಆಗಿದ್ದು,300 ವಿದ್ಯಾರ್ಥಿಗಳನ್ನು ಒಂದೇ ತರಗತಿ ಕೊಠಡಿಯಲ್ಲಿ ಕೂಡಿಸಿ ಬೋಧನೆ ಮಾಡುತ್ತಿದ್ದಾರೆ. ಆದಷ್ಟು ಬೇಗನೆ ಮೂರು ತರಗತಿ ಗಳಾಗಿ ವಿಂಗಡಿಸಬೇಕು.

6) ವಿವಿಧ ಗ್ರಾಮಗಳಿಂದ ಬರತಕ್ಕಂತಹ ವಿದ್ಯಾರ್ಥಿಗಳಿಗೆ ಬಸ್ ಸೌಲಭ್ಯ ಒದಗಿಸುವ ಕುರಿತು.

೦) ಅಡವಿಭಾವಿ ಇಲ್ಲಿಂದ ಬರತಕ್ಕಂತಹ ವಿದ್ಯಾರ್ಥಿಗಳು, ಸುಮಾರು ನಾಲ್ಕು ಕಿಲೋಮೀಟರುಗಳ ನಡೆದು ಬರಬೇಕಾಗಿದೆ. ಆದಕಾರಣ ತಾವುಗಳು ದಯಮಾಡಿ ಬೆಳಗ್ಗೆ 8:00 ಮಧ್ಯಾಹ್ನ 2:00 ಗಂಟೆಗೆ ಬಸ್ ಕಲ್ಪಿಸಬೇಕು.

ಃ) ಹುಲಿಯಾಪುರ ಮತ್ತು ನೀರಲೂಟಿ ಗ್ರಾಮದ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ 8:30 ಹುಲಿಯಾಪುರ ದಿಂದ ನೀರಲೂಟಿ ಮಾರ್ಗವಾಗಿ ಬಸ್ ಬಿಡಬೇಕಾಗಿ ತಮ್ಮಲ್ಲಿ ವಿನಂತಿ. ಹುಲಿಯಾಪುರ ದಿಂದ ಬೆಳಗ್ಗೆ ಬಸ್ ಇದ್ದು. ತಡವಾಗಿ ಆರಂಭವಾಗುವ ಕಾಲೇಜು ಮತ್ತು ಹೈಸ್ಕೂಲ್ ವಿದ್ಯಾರ್ಥಿಗಳಿಗೆ ಸಮಸ್ಯೆಯಾಗಿದೆ, ಆದಕಾರಣ ತಾವುಗಳು 8:30ಕ್ಕೆ ಬಸ್ ವ್ಯವಸ್ಥೆ ಮಾಡಬೇಕು.

ಅ) ಲಿಂಗದಹಳ್ಳಿ ಗ್ರಾಮಕ್ಕೆ ಮಧ್ಯಾಹ್ನ 2:00 ಗಂಟೆಗೆ ಬಸ್ ವ್ಯವಸ್ಥೆ ಕಲ್ಪಿಸಿಕೊಡಬೇಕು.

ಆ) ಹಲವಾರು ಹಳ್ಳಿಗಳಿಂದ ಬಸ್ಸುಗಳು ತುಂಬಿ ಬಾಗಿಲಲ್ಲಿ ನಿಂತು ಜೋತಾಡುತ್ತ ಬರುತ್ತಿರುತ್ತಾರೆ. ಅಂತ ಎಲ್ಲಾ ಹಳ್ಳಿಗಳಿಗೆ ಹೆಚ್ಚುವರಿ ಬಸ್ ಕಲ್ಪಿಸಿಕೊಡಬೇಕು. ■

ಮೊದಲ ಅಖಿಲ ಭಾರತ ಕಾರ್ಮಿಕ ಸಮ್ಮೇಳನ



ಲಾಲಾ ಲಜಪತ್ ರಾಯ್ ಅವರು ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದರು. ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ "ಮಿಲಿಟರಿಸಂ ಮತ್ತು ಸಾಮ್ರಾಜ್ಯಶಾಹಿ ಬಂಡವಾಳಶಾಹಿಯ ಅವಳಿ ಮಕ್ಕಳು; ಅವು ಮೂರರಲ್ಲಿ ಒಂದು ಮತ್ತು ಮೂರೂ ಒಂದು. ಅವುಗಳ ನೆರಳು, ಅವುಗಳ ಹಣ್ಣು ಮತ್ತು ತೊಗಟೆ ಎಲ್ಲವೂ ವಿಷಕಾರಿ. ಇತ್ತೀಚೆಗೆ ಮಾತ್ರ ಪ್ರತಿವಿಷವನ್ನು ಕಂಡುಹಿಡಿಯಲಾಗಿದೆ, ಆ ಪ್ರತಿವಿಷವು ಸಂಘಟಿತ ಕಾರ್ಮಿಕ ವಿಭಾಗವಾಗಿದೆ. ಬಂಡವಾಳಶಾಹಿಯ ವಿರುದ್ಧ ಕಾರ್ಮಿಕ ವರ್ಗದ ಸಂಯೋಜನೆಯು ಯಾವುದೇ ನಿರ್ದಿಷ್ಟ ದೇಶಕ್ಕೆ ವಿಶಿಷ್ಟವಾಗಿಲ್ಲ, ವಿಶ್ವ ಬಂಡವಾಳಶಾಹಿ ವ್ಯವಸ್ಥೆಯನ್ನು ಎದುರಿಸಲು ಕಾರ್ಮಿಕ ವರ್ಗವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಂಘಟಿಸಬೇಕಾಗಿದೆ" ಎಂದು ಹೇಳಿದ್ದು ಗಮನಾರ್ಹವಾಗಿತ್ತು.

ಮೂಲ ಲೇಖಕರು: **ಸುಕೋಮಲ್ ಸೇನ್** ಸಂಗ್ರಹ-ಅನುವಾದ: ಸಿ.ಆರ್.ಶಾನಭಾಗ

ಆಗಸ್ಟ್ 22, 1920 ಅನ್ನು ಮೂಲತಃ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ನ ಮೊದಲ ಅಧಿವೇಶನವನ್ನು ಪ್ರಾರಂಭಿಸುವ ದಿನಾಂಕವೆಂದು ನಿಗದಿಪಡಿಸಲಾಗಿತ್ತು. ಏತನ್ಮಧ್ಯೆ ತಿಲಕ್ ಅವರ ನಿಧನ ಮತ್ತು ಇತರ ಅನಿವಾರ್ಯತೆಗಳ ಕಾರಣ ಅಧಿವೇಶನವನ್ನು 1920 ರ ಅಕ್ಟೋಬರ್ 31 ರಿಂದ ನವೆಂಬರ್ 2 ಕ್ಕೆ ಮುಂದೂಡಲಾಯಿತು..

ಅಂತರರಾಷ್ಟ್ರೀಯ ಸೌಹಾರ್ದತೆಯ ಕಡೆಗೆ

ಭಾರತದ ಮೊದಲ ಕಾರ್ಮಿಕ ಸಂಘಟನೆಯ ಸಮ್ಮೇಳನ 1920 ಅಕ್ಟೋಬರ್ 31 ರ ಭಾನುವಾರ ಮುಂಬಯಿಯ ಎಂಪೈರ್ ಥಿಯೇಟರ್‌ನಲ್ಲಿ ಬಹಳ ಉತ್ಸಾಹದ ದೃಶ್ಯಗಳ ನಡುವೆ ತನ್ನ ಅಧಿವೇಶನವನ್ನು ಪ್ರಾರಂಭಿಸಿತು. ರಂಗಮಂದಿರದಲ್ಲಿ ಪ್ರತಿನಿಧಿಗಳು ಮತ್ತು ವೀಕ್ಷಕರು ಅದರ ಗರಿಷ್ಠ ಸಾಮರ್ಥ್ಯಕ್ಕೆ ಮೀರಿ ಸೇರಿದ್ದರು. ದೇಶದ ವಿವಿಧ ಭಾಗಗಳಿಂದ ಬಂದ ದೊಡ್ಡ ಸಂಖ್ಯೆಯ ಪ್ರತಿನಿಧಿಗಳು ಭಾರತದ ಎಲ್ಲಾ ಕಾರ್ಮಿಕ ವಿಭಾಗಗಳನ್ನು ಪ್ರಾಯೋಗಿಕವಾಗಿ ಪ್ರತಿನಿಧಿಸುತ್ತಿದ್ದರು. ಮುಂಬಯಿಯ ವಿವಿಧ ಕಾರ್ಮಿಕ ಸಂಘಗಳ ಸದಸ್ಯರ ಹಾಜರಾತಿ ಖಂಡಿತವಾಗಿಯೂ ದೊಡ್ಡದಾಗಿತ್ತು, ಆದರೆ ದೇಶದ ಇತರ ಭಾಗಗಳಲ್ಲಿನ ಕಾರ್ಮಿಕ ಪ್ರತಿನಿಧಿಗಳು ಸಹ ಉತ್ತಮ ಸಂಖ್ಯೆಯಲ್ಲಿದ್ದರು. ಮತ್ತು ಜನ ಸಾಮಾನ್ಯರು ಸಹ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು, ಸಂದರ್ಶಕರಿಗೆ ಕಾಯ್ದಿರಿಸಲಾಗಿದ್ದ ಸ್ಥಳ ಸಂಪೂರ್ಣವಾಗಿ ತುಂಬಿತ್ತು. ವೇದಿಕೆಯು ಸ್ವಾಗತ ಸಮಿತಿಯ ಸದಸ್ಯರು ಮತ್ತು ಇತರ ಪ್ರಸಿದ್ಧ ನಾಗರಿಕರೊಂದಿಗೆ ಸಮನಾಗಿ ತುಂಬಿತ್ತು.

ಅಧಿವೇಶನದ ಅಧ್ಯಕ್ಷರಾದ ಲಾಲಾ ಲಜಪತ್ ರಾಯ್ ಅವರು ಆಗಮಿಸಿದಾಗ ಅಪಾರ ಕರಡತಾನಗಳೊಂದಿಗೆ ಗೌರವ ವ್ಯಕ್ತಪಡಿಸಲಾಯಿತು. ಮತ್ತು ಕರ್ನಲ್ ಜೆ. ಸಿ. ವೆಡ್ಜ್‌ವುಡ್ ಮತ್ತು ಶ್ರೀ ಜೆ. ಬ್ಯಾಪ್ಟಿಸ್ಟಾ ಅವರನ್ನು ಸಹ ಸೌಹಾರ್ದಯುತವಾಗಿ ಬರಮಾಡಿಕೊಳ್ಳಲಾಯಿತು.

ಕಾರ್ಮಿಕ ಗೀತೆಗಳನ್ನು ಹಾಡುವ ಮೂಲಕ ನಡಾವಳಿಗಳನ್ನು ಪ್ರಾರಂಭಿಸಲಾಯಿತು, ನಂತರ ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ಜೋಸೆಫ್ ಬ್ಯಾಪ್ಟಿಸ್ಟಾ. ಪ್ರತಿನಿಧಿಗಳನ್ನು ಸ್ವಾಗತಿಸುವ ಭಾಷಣ ಮಾಡಿದರು. ಸಭೆಯನ್ನು ಉದ್ದೇಶಿಸಿ ಭಾಷಣ ಮಾಡಲು ಎದ್ದಾಗ ಅವರಿಗೆ ಅತ್ಯಂತ ಉತ್ಸಾಹಭರಿತ ಸ್ವಾಗತ ನೀಡಲಾಯಿತು, ಮತ್ತು ಅವರ ಭಾಷಣವು ಮತ್ತೆ-ಮತ್ತೆ ಕರಡತಾನವನ್ನು ಪಡೆಯಿತು. ಬ್ಯಾಪ್ಟಿಸ್ಟಾ ತಮ್ಮ ಭಾಷಣದಲ್ಲಿ, ಭಾರತದ ಕಾರ್ಮಿಕರ ಗುಲಾಮರಂತಹ ಸ್ಥಿತಿಯತ್ತ ಗಮನ ಸೆಳೆದರು. ಬಂಡವಾಳಶಾಹಿ ಸಮಾಜದಲ್ಲಿ ವೇತನ ಗುಲಾಮಗಿರಿಯೇ ನಿಯಮವಾಗಿದ್ದು, ಕಾರ್ಮಿಕರು ತಮ್ಮ ಶ್ರಮ-ಶಕ್ತಿಯನ್ನು ಹೊರತುಪಡಿಸಿ ಬೇರೇನನ್ನೂ ಹೊಂದಿಲ್ಲ, ಮತ್ತು ಅದನ್ನು ಅವರು ಬಂಡವಾಳಶಾಹಿಗಳಿಗೆ ಮಾರಾಟ ಮಾಡಲು ಒತ್ತಾಯಿಸಲಾಗುತ್ತದೆ. ಬಂಡವಾಳಶಾಹಿಗಳು ಆ ಶ್ರಮ-ಶಕ್ತಿಯ ಗರಿಷ್ಠ ಶೋಷಣೆಯಿಂದ ತಮ್ಮ ಲಾಭವನ್ನು ಹೆಚ್ಚಿಸಿಕೊಳ್ಳುತ್ತಾರೆ ಎಂದು ಮಾರ್ಕ್ಸ್ ವಿವರಿಸಿದ ರೀತಿಯಲ್ಲಿ ಸಾಮಾಜಿಕ ವಿಜ್ಞಾನದ ಈ ಮೂಲಭೂತ ಸತ್ಯವನ್ನು ವಿವರಿಸಲು ಬ್ಯಾಪ್ಟಿಸ್ಟಾಗೆ ಸಾಧ್ಯವಾಗಲಿಲ್ಲ, ಆದರೆ ಬಂಡವಾಳಶಾಹಿಗಳ ಸಂಪತ್ತಿನ ಮೂಲವು ಕಾರ್ಮಿಕರ ಶ್ರಮ-ಶಕ್ತಿಯ ಶೋಷಣೆಯಾಗಿದೆ ಎಂದು ಅರಿತುಕೊಳ್ಳಲು ಅವರ ಅನುಭವವು ಅವರಿಗೆ ಸಹಾಯಕವಾಯಿತು


ಲಾಲಾ ಲಜಪತ್ ರಾಯ್ ಅವರು ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದರು. ಕೇವಲ ಕಾಂಗ್ರೆಸ್ ನಾಯಕರಾಗಿ ಮಾತ್ರವಲ್ಲ, ರಾಷ್ಟ್ರೀಯ ಚಳವಳಿಯಲ್ಲಿ ಅವರ ದೃಢವಾದ ಪಾತ್ರ, ಕಾರ್ಮಿಕರ ಮತ್ತು ಇತರ ತುಳಿತಕ್ಕೊಳಗಾದ ಜನರ ಬಗ್ಗೆ ಅವರ ಸಹಾನುಭೂತಿ ಮತ್ತು ಅವರ ಸಾರ್ವತ್ರಿಕ ಜನಪ್ರಿಯತೆಯು ಭಾರತದ ಕಾರ್ಮಿಕರ ಈ ಮೊದಲ ರಾಷ್ಟ್ರಮಟ್ಟದ ಸಮ್ಮೇಳನದ ಅಧ್ಯಕ್ಷರಾಗುವ ಈ ಅಪರೂಪದ ಗೌರವಕ್ಕೆ ಅವರಿಗೆ ಅರ್ಹತೆ ತಂದುಕೊಟ್ಟಿತು. ಬಿ.ಪಿ.ವಾಡಿಯಾ ಸೂಚನೆಯನ್ನು, ಡಿ. ಚಮನ್ ಲಾಲ್, ಎನ್.ಎಂ.ಜೋಶಿ ಮತ್ತು ಒಬ್ಬ ಕಾರ್ಮಿಕ-ಪ್ರತಿನಿಧಿ ಅವರಿಂದ ಅನುಮೋದಿಸಲ್ಪಟ್ಟು ಪ್ರಚಂಡ ಕರಡತಾನಗಳ ಗೌರವದ ಮಧ್ಯೆ ಅವರು ಅಧ್ಯಕ್ಷೀಯ ಗಾದಿಯನ್ನು ಅಲಂಕರಿಸಿದರು.

ಅವರ ಅಧ್ಯಕ್ಷೀಯ ಭಾಷಣದ ಪ್ರಾರಂಭವು ವಿಶಿಷ್ಟವಾಗಿತ್ತು: ಅಕ್ಟೋಬರ್ ಕ್ರಾಂತಿಯಿಂದ ಪ್ರಾರಂಭವಾದ ಹೊಸ ಯುಗದ ನಿಜವಾದ ಆಗಮನದ ಮತ್ತು ವಿಶ್ವದ ಮೊದಲ ಕಾರ್ಮಿಕರ ರಾಜ್ಯದ ಜನನವು ಲಾಲಾಜಿ ಅವರ ಭಾಷಣದಲ್ಲಿ ಯಾವುದೇ ಪ್ರತಿಬಿಂಬವನ್ನು ಕಾಣಲಿಲ್ಲ, ಆದರೆ ಹಳೆಯ ಯುಗ ಕಣ್ಮರೆಯಾಗುವ ಮತ್ತು ಅದಕ್ಕೆ ಪರ್ಯಾಯವಾಗಿ ವಿಶ್ವಾದ್ಯಂತ ಕಾರ್ಮಿಕರ ಜಾಗೃತಿ ಮತ್ತು ಅದರ ಮಧ್ಯೆ ಭಾರತದ ಕಾರ್ಮಿಕರ ಸಂಘಟನಾತ್ಮಕ ಬಲವರ್ಧನೆಯ ಹೊಸ ಯುಗದ ಪ್ರಕ್ರಿಯೆಯನ್ನು ಅರಿತುಕೊಳ್ಳಲು ಅವರಿಗೆ ಸಾಧ್ಯವಾಗಿತ್ತು. ಮತ್ತು. ಸಂಘಟಿತ ಕಾರ್ಮಿಕ ವರ್ಗವು ಈ ವಿನಾಶಕಾರಿ ಬಂಡವಾಳಶಾಹಿಗೆ ನಿಜವಾದ ಪ್ರತಿವಿಷವಾಗಿದೆ ಎಂಬ ಅರಿವು ಸಹ ಅವರಿಗಿತ್ತು. ಅವರು ತಮ್ಮ ಭಾಷಣದಲ್ಲಿ ಹೀಗೆ ಹೇಳಿದರು: "ಮಿಲಿಟರಿಸಂ ಮತ್ತು ಸಾಮ್ರಾಜ್ಯಶಾಹಿ ಬಂಡವಾಳಶಾಹಿಯ ಅವಳಿ ಮಕ್ಕಳು; ಅವು ಮೂರರಲ್ಲಿ ಒಂದು ಮತ್ತು ಮೂರೂ ಒಂದು. ಅವುಗಳ ನೆರಳು, ಅವುಗಳ ಹಣ್ಣು ಮತ್ತು ತೊಗಟೆ ಎಲ್ಲವೂ ವಿಷಕಾರಿ. ಇತ್ತೀಚೆಗೆ ಮಾತ್ರ ಪ್ರತಿವಿಷವನ್ನು ಕಂಡುಹಿಡಿಯಲಾಗಿದೆ, ಆ ಪ್ರತಿವಿಷವು ಸಂಘಟಿತ ಕಾರ್ಮಿಕ ವಿಭಾಗವಾಗಿದೆ. ಬಂಡವಾಳಶಾಹಿಯ ವಿರುದ್ಧ ಕಾರ್ಮಿಕ ವರ್ಗದ ಸಂಯೋಜನೆಯು ಯಾವುದೇ ನಿರ್ದಿಷ್ಟ ದೇಶಕ್ಕೆ ವಿಶಿಷ್ಟವಾಗಿಲ್ಲ ಮತ್ತು ವಿಶ್ವ ಬಂಡವಾಳಶಾಹಿ ವ್ಯವಸ್ಥೆಯನ್ನು ಎದುರಿಸಲು ಕಾರ್ಮಿಕ ವರ್ಗವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಂಘಟಿಸಬೇಕಾಗಿದೆ."

ಲಾಲಾ ಲಜಪತ್ ರಾಯ್ — ಬಿ.ಪಿ. ವಾಡಿಯ — ಶಾಪುರ್ಜಿ ಸಕ್ಲತ್‌ವಾಲ







ಕಾರ್ಮಿಕರ ಅಂತರರಾಷ್ಟ್ರೀಯ ಬಲವರ್ಧನೆಯನ್ನು ಅವರು ಸ್ವಾಗತಿಸುತ್ತಾ ಹೇಳಿದರು: "ಯುರೋಪ್ ಮತ್ತು ಅಮೆರಿಕದ ಕಾರ್ಮಿಕರು ಈಗ ಕಾರ್ಮಿಕರ ಪ್ರಶ್ನೆಯು ಪ್ರಪಂಚದಾದ್ಯಂತ ಒಂದೇ ಆಗಿರುವುದನ್ನು ಕಂಡುಹಿಡಿದಿದ್ದಾರೆ ಮತ್ತು ಏಷ್ಯಾದ ಕಾರ್ಮಿಕರನ್ನು ಸಂಘಟಿಸುವವರೆಗೂ ಅವರಿಗೆ ಯಾವುದೇ ಮೋಕ್ಷವಿಲ್ಲ, ಅವರು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಂಯೋಜನೆಗೊಳ್ಳಬೇಕು.. .. .. ಯುರೋಪಿನಲ್ಲಿನ ಕಾರ್ಮಿಕರು ತಮ್ಮ ಯಜಮಾನರು, ಮಾಲಿಕರಿಗೆ ವಿರುದ್ಧವಾಗಿ ಸ್ಥಾನಗಳನ್ನು ತಿರುಗಿಸುವ ಬೆದರಿಕೆ ಹಾಕುತ್ತಾರೆ ಮತ್ತು ಅವರ ಚಳವಳಿಯ ಯಶಸ್ಸು ಏಷ್ಯಾದ ಕಾರ್ಮಿಕರೊಂದಿಗೆ ಯುರೋಪಿಯನ್ ಕಾರ್ಮಿಕರ ನಿಕಟ ಒಡನಾಟವನ್ನು ಬಯಸುತ್ತದೆ ಎಂದು ಅವರು ಗುರುತಿಸುತ್ತಾರೆ. "

ಮಾರ್ಕ್ಸ್‌ವಾದೀ ರೀತಿಯಲ್ಲಿ ಅಲ್ಲದಿದ್ದರೂ, ಕಾರ್ಮಿಕರ ವರ್ಗ-ಪ್ರಜ್ಞೆ ಮತ್ತು ರಾಜಕೀಯ ಹಕ್ಕನ್ನು ಸಾಧಿಸುವುದುರ ಪ್ರಾಮುಖ್ಯತೆಯನ್ನು ಅವರು ಅರಿತುಕೊಂಡರು ಮತ್ತು ರಷ್ಯಾದ ಶ್ರಮಜೀವಿಗಳ ಸರ್ವಾಧಿಕಾರದಲ್ಲಿ ಅವರು ಕಾರ್ಮಿಕರ ರಾಜಕೀಯ ಶಕ್ತಿಯ ಅತ್ಯುನ್ನತ ಅಭಿವ್ಯಕ್ತಿಯನ್ನು ಕಂಡರು. ಆದ್ದರಿಂದ ಅವರು, "ಕಾರ್ಮಿಕರ ಹಿತಾಸಕ್ತಿಗಳು ಪ್ರಪಂಚದಾದ್ಯಂತ ಒಂದೇ ಆಗಿರುವುದು ನಿಜವಾಗಿದ್ದರೂ, ಪ್ರತಿ ದೇಶದಲ್ಲಿನ ಕಾರ್ಮಿಕ ಶಕ್ತಿಯು ಸ್ಥಳೀಯ ಮತ್ತು ರಾಷ್ಟ್ರೀಯ ಸನ್ನಿವೇಶಗಳಿಂದ ಸೀಮಿತವಾಗಿದೆ ಎಂಬುದು ಅಷ್ಟೇ ಸತ್ಯ. ಯುರೋಪಿನಲ್ಲಿನ ಕಾರ್ಮಿಕನು ಆದೇಶಿಸುವ ಸ್ಥಿತಿಯಲ್ಲಿದ್ದಾನೆ. ಯುರೋಪಿಯನ್ ಕೆಲಸಗಾರರು ತಮ್ಮ ಹಕ್ಕಿನ ಜಾರಿಗಾಗಿ ಮತ್ತು ಪರಿಸ್ಥಿತಿಯ ಸುಧಾರಣೆಗಾಗಿ, ಶಾಸನಬದ್ಧ ಅಧಿಕಾರ ಮತ್ತು ಮತ ಚಲಾವಣೆಯ ಅಧಿಕಾರವಿರುವ ಆಸ್ತಿವಂತ ವ್ಯಕ್ತಿಗಳ ರಾಜಕೀಯ ಕ್ರಿಯೆಯ ಮೇಲೆ ಅವಲಂಬಿಸಿರುವುದು ಅಸಂಬದ್ಧ ಮತ್ತು ಅಸ್ವಾಭಾವಿಕವಾಗಿದೆ ಎಂದು ಕಂಡುಕೊಂಡಿದ್ದಾರೆ. ಹಿತಾಸಕ್ತಿಗಳನ್ನು ರಕ್ಷಿಸುವ ಸಲುವಾಗಿ ತನ್ನ ಮತ್ತು ತನ್ನ ವರ್ಗದ ಕೆಲಸಗಾರರಿಗೆ ಮತಚಲಾವಣೆಯ ಹಕ್ಕು ಇರಬೇಕು ಮತ್ತು ಅದನ್ನು ತಮ್ಮ ವರ್ಗದ ಮನುಷ್ಯನಿಗೆ ಅಥವಾ ತಮ್ಮ ಹಿತಾಸಕ್ತಿಗಳಿಗೆ ವಾಗ್ದಾನ ಮಾಡಿದ ವ್ಯಕ್ತಿಗೆ ನೀಡಬೇಕು. ಆದ್ದರಿಂದ ಯುರೋಪಿನ ಪ್ರತಿಯೊಬ್ಬ ಕೆಲಸಗಾರನು ರಾಜಕೀಯ ಘಟಕವಾಗಿದ್ದಾರೆ. ಇದಕ್ಕಿಂತ ಹೆಚ್ಚಾಗಿ, ಯುರೋಪ್ ಕಾರ್ಮಿಕನು ನೇರ ಕ್ರಿಯೆಯಲ್ಲಿ ಮತ್ತೊಂದು ಆಯುಧವನ್ನು ಕಂಡುಹಿಡಿದಿದ್ದಾನೆ. ಅವರಿಗಿಂತ ಮೇಲ್ಮಟ್ಟದಲ್ಲಿ ರಷ್ಯಾದ ಕೆಲಸಗಾರರು ಬರುತ್ತಾರೆ, ಅವರು ಶ್ರಮಜೀವಿಗಳ ಸರ್ವಾಧಿಕಾರವನ್ನು ಸ್ಥಾಪಿಸುವ ಗುರಿಯನ್ನು ಹೊಂದಿದ್ದಾರೆ" ಎಂದು ಪ್ರತಿಪಾದಿಸಿದರು.

"ಐಕ್ಯತೆ ಸಾಧಿಸುವ ನಿಟ್ಟಿನಲ್ಲಿಯ ನಮ್ಮ ಪ್ರಯತ್ನಗಳನ್ನು ಹತ್ತಿಕ್ಕಲು ಮತ್ತು ನಮ್ಮನ್ನು ಒಗ್ಗೂಡದೇ, ಅಸಂಘಟಿತವಾಗಿ ಮತ್ತು ವಿಶ್ವ ವ್ಯವಹಾರಗಳೊಂದಿಗೆ ಸಂಪರ್ಕವಿಲ್ಲದೇ ಇರಿಸಿಕೊಳ್ಳಲು, ಸರ್ಕಾರ ತನ್ನ ಅಡಿಯಲ್ಲಿರುವ ಸೈನಿಕಬಲವನ್ನು ಒಳಗೊಂಡಂತೆ ಎಲ್ಲಾ ಶಕ್ತಿಗಳನ್ನು ಬಳಸಲು ಹಿಂಜರಿಯುವುದಿಲ್ಲ" ಎಂದು ಎಚ್ಚರಿಸಿದರು. ಕಾರ್ಮಿಕರ ಹಲವಾರು ಮುಷ್ಕರ-ಕ್ರಮಗಳನ್ನು ನಿಭಾಯಿಸುವಲ್ಲಿ ಮತ್ತು ಸೋವಿಯತ್ ರಷ್ಯಾ ಮತ್ತು ಡೈಲಿ ಹೆರಾಲ್ಡ್ ಆಫ್ ಲಂಡನ್ ಪತ್ರಿಕೆಗಳ ಆಮದನ್ನು ನಿಷೇಧಿಸುವಲ್ಲಿ ಸರ್ಕಾರದ ದಮನಕಾರಿ ಕ್ರಮಗಳ ನಿದರ್ಶನಗಳನ್ನು ಅವರು ಉಲ್ಲೇಖಿಸಿದರು.. 1920 ರಷ್ಟು ಹಿಂದೆಯೇ ಅಂದರೆ ಸೋವಿಯತ್ ರಷ್ಯ ಹುಟ್ಟಿದ ಮೂರು ವರ್ಷಗಳಲ್ಲಿ ಈ ಮೊದಲ ಸಮಾಜವಾದಿ ರಾಜ್ಯದ ವಿರುದ್ಧ ಸಾಮ್ರಾಜ್ಯಶಾಹಿ ಪ್ರಚಾರದ ಆಧಾರವಾಗಿರುವ ನಿಂದೆಮಾಡುವ ಸುಳ್ಳುಗಳನ್ನು ಗ್ರಹಿಸುವಲ್ಲಿ ಅವರು ವಿಫಲರಾಗಲಿಲ್ಲ ಎಂಬುದು ಅತ್ಯಂತ ಗಮನಾರ್ಹ ಸಂಗತಿ. ದೃಷ್ಟಿಯಲ್ಲಿ ಅಸ್ಪಷ್ಟತೆಯಿದ್ದರೂ, ವರ್ಗ-ವಿಭಜಿತ ಸಮಾಜದಲ್ಲಿ ಸತ್ಯವು-ಒಂದು ಬಂಡವಾಳಶಾಹಿಗಳ ದೃಷ್ಟಿಯಲ್ಲಿ, ಇನ್ನೊಂದು ಕಾರ್ಮಿಕ ವರ್ಗದ ದೃಷ್ಟಿಯಲ್ಲಿ ಹೀಗೆ ಎರಡು ರೀತಿಗಳಲ್ಲಿ ಸಾಪೇಕ್ಷವಾಗಿವೆ ಎನ್ನುವುದನ್ನು ಸಹ ಅವರು ಅರ್ಥಮಾಡಿಕೊಂಡಿದ್ದರು. ಛೀಮಾರಿ ಹಾಕುತ್ತಾ ಅವರು ಹೀಗೆ ಅವರು ಹೇಳಿದರು : "ಆಂಗ್ಲೋ-ಇಂಡಿಯನ್ ಪತ್ರಿಕೆಗಳು ಸೋವಿಯತ್ ರಷ್ಯಾದ ಬಗ್ಗೆ ಸ್ಥೂಲವಾದ ಸುಳ್ಳುಗಳನ್ನು ಪ್ರಸಾರ ಮಾಡುವಲ್ಲಿ ನಿರತರಾಗಿದ್ದರೆ, ಭಾರತದ ಜನರು ಕಥೆಯ ಇನ್ನೊಂದು ಬದಿಯನ್ನು ತಿಳಿದುಕೊಳ್ಳದಂತೆ ತಡೆಯಲು ಭಾರತ ಸರ್ಕಾರ ಹೆಜ್ಜೆ ಹಾಕುತ್ತದೆ. ಯುರೋಪಿನಲ್ಲಿ ಸತ್ಯವು ಎರಡು ರೀತಿಯದ್ದಾಗಿದೆ: (1) ಶ್ರೀ ವಿನ್‌ಸ್ಟನ್ ಚರ್ಚಿಲ್ ಅವರಂತಹ ಪುರುಷರು ಪ್ರತಿನಿಧಿಸುವ ಮತ್ತು ಲಂಡನ್ ಟೈಮ್ಸ್ ಮತ್ತು ಮಾರ್ನಿಂಗ್ ಪೋಸ್ಟ್ ನಂತಹ ಪತ್ರಿಕೆಗಳು ಪ್ರಚಾರಮಾಡುವ ಬಂಡವಾಳಶಾಹಿ ಮತ್ತು ಸರ್ಕಾರಿ ಸತ್ಯ ಮತ್ತು (2) ಜಸ್ಟೀಸ್, ಡೈಲಿ ಹೆರಾಲ್ಡ್ ಮತ್ತು ಸೋವಿಯತ್ ರಷ್ಯಾ ಪ್ರಕಾರದ ಕಾರ್ಮಿಕ ಮಾಧ್ಯಮಗಳಿಂದ ಪ್ರತಿನಿಧಿಸಲ್ಪಡುವ ಸಮಾಜವಾದಿ ಮತ್ತು ಶ್ರಮಜೀವಿಗಳ ಸತ್ಯ "ಎಂದು ಅವರು ಮುಚ್ಚುಮರೆಯಿಲ್ಲದೆ ಘೋಷಿಸಿದರು. "ವಿಶ್ವದ ಸಮಾಜವಾದಿ ಮತ್ತು ಕಾರ್ಮಿಕ ಚಿಂತನೆಗೆ ಭಾರತದ ಜನರ ಪ್ರವೇಶವನ್ನು ತಡೆಯುವಲ್ಲಿ ಭಾರತ ಸರಕಾರದ ಕ್ರಮವು ಅದರ ಯಾವುದೇ ದಮನಕಾರಿ ಕ್ರಮಕ್ಕೆ ಕನಿಷ್ಠ ಸಮರ್ಥನೆಯನ್ನು ಕೂಡ ನೀಡುವದಿಲ್ಲ ಮತ್ತು ಅದನ್ನು ಹಿಂಜರಿಯದೇ ಖಂಡಿಸಬೇಕು" ಎಂದು ಅವರು ಹೇಳಿದಾಗ ಕರಡತಾನಗಳು ಮುಗಿಲು ಮುಟ್ಟಿದವು.

ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿ ಶೋಷಣೆಯ ವಿರುದ್ಧ ಅವರ ಪ್ರಜ್ಞೆ, ಕಾರ್ಮಿಕ ವರ್ಗದ ಹಿತಾಸಕ್ತಿಗಳ ಬಗೆಗಿನ ಕಾಳಜಿ ಮತ್ತು ರಷ್ಯಾದಲ್ಲಿ ಶ್ರಮಜೀವಿ ಸರ್ವಾಧಿಕಾರದ ಬಗ್ಗೆ ಅವರ ಗೌರವಯುತ ವರ್ತನೆ ಇದ್ದರೂ, ಲಾಲಾ ಲಜಪತ್ ರಾಯ್ ಭಾರತದ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಹೋರಾಡುವಂತೆ ಕಾರ್ಮಿಕರಿಗೆ ಕರೆ ನೀಡುವಲ್ಲಿ ಸಂಪೂರ್ಣ ವಿಫಲರಾದರು. ಈ ಪ್ರಚಂಡ ಸ್ವ-ವೈರುಧ್ಯವು ಲಾಲಾಜಿಯವರದು ಮಾತ್ರವಲ್ಲ, ಅದು ಒಟ್ಟಾರೆಯಾಗಿ ರಾಷ್ಟ್ರೀಯ ಕಾಂಗ್ರೆಸ್ಸಿನದ್ದಾಗಿತ್ತು. ಎಐಟಿಯುಸಿ ಅಧಿವೇಶನದಲ್ಲಿ ಲಾಲಾ ಲಜಪತ್ ರಾಯ್ ಅವರ ಭಾಷಣವು ಹೆಚ್ಚಿನ ಮಟ್ಟದ ಪ್ರಜ್ಞೆ ಮತ್ತು ವಿಶಾಲ ದೃಷ್ಟಿಕೋನವನ್ನು ಸಮರ್ಥಿಸಿತು. ಆದರೆ ಅಧ್ಯಕ್ಷೀಯ ಭಾಷಣ ಮಾತ್ರವಲ್ಲ, ಇತರ ನಾಯಕರ ಭಾಷಣಗಳು ಸ್ವರಾಜ್ಯದ ಬೇಡಿಕೆಯನ್ನು ಪ್ರಸ್ತಾಪಿಸುವುದನ್ನು ತಪ್ಪಿಸಿದವು ಮತ್ತು ಸ್ಥಾಪಕ ಪಿತಾಮಹರ ಈ ದೃಷ್ಟಿಕೋನಕ್ಕೆ ಅನುಗುಣವಾಗಿ, ಭಾರತದ ಕಾರ್ಮಿಕರ ಈ ಮೊದಲ ಸಮ್ಮೇಳನವು ಸ್ವರಾಜ್ಯದ ಬಗ್ಗೆ ಒತ್ತಾಯಿಸುವ ಪುಟ 14 ನೋಡಿ

“ಮತೀಯ ದ್ವೇಷ ಹರಡಿಸುವ ‘ಟೂಲ್‌ಕಿಟ್’ಗಳ ತಯಾರಕರನ್ನು ಬಂಧಿಸಿ” – ದಿಲ್ಲಿ ಪೋಲಿಸ್ ಆಯುಕ್ತರಿಗೆ ಬೃಂದಾ ಕಾರಟ್ ಆಗ್ರಹ

ದೇಶದ ಗೃಹಮಂತ್ರಿಗಳ ನೇರ ಹತೋಟಿಯಲ್ಲಿರುವ ದಿಲ್ಲಿ ಪೋಲೀಸ್‌ನ ಮೂಗಿನ ಕೆಳಗೇ ಬಿಜೆಪಿ–ಆರೆಸ್ಸೆಸ್ ಮುಖಂಡ ಕಪಿಲ್ ಮಿಶ್ರ ಟೆಲಿಗ್ರಾಂ ಸಾಮಾಜಿಕ ಮಾಧ್ಯಮ ಬಳಸಿ ಕೋಮು ದ್ವೇಷವನ್ನು ಹರಡಿಸುವ ದೇಶದ್ರೋಹೀ ಕೆಲಸವನ್ನು ಮಾಡುತ್ತಿದ್ದಾರೆ ಎಂಬುದನ್ನು ಒಂದು ವೆಬ್ ಪತ್ರಿಕೆಯ ತನಿಖೆ ಬಯಲಿಗೆ ತಂದಿದೆ. ರೈತರ ಪ್ರತಿಭಟನೆಗಳನ್ನು ಬೆಂಬಲಿಸಿರುವ ಒಬ್ಬ ಬಾಲಕಿಯನ್ನು ದೇಶದ್ರೋಹದ ಆರೋಪದ ಮೇಲೆ ಬೆಂಗಳೂರಿನಿಂದ ಬಂಧಿಸಿಕೊಂಡು ಹೋಗಿರುವ ದಿಲ್ಲಿ ಪೋಲೀಸ್ ಏಕೆ ಸುಮ್ಮನಿದೆ? ತಕ್ಷಣವೇ ಈ ಬಿಜೆಪಿ ಮುಖಂಡರನ್ನು ಬಂಧಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯೆ ಬೃಂದಾ ಕಾರಟ್ ಹಾಗೂ ದಿಲ್ಲಿ ರಾಜ್ಯ ಕಾರ್ಯದರ್ಶಿ ಕೆ.ಎಂ.ತಿವಾರಿ ದಿಲ್ಲಿಯ ಪೋಲಿಸ್ ಆಯುಕ್ತ ಎಸ್. ಎನ್.ಶ್ರೀವಾಸ್ತವ ಅವರನ್ನು ಆಗ್ರಹಿಸಿದ್ದಾರೆ.

‘ನ್ಯೂಸ್‌ಲಾಂಡ್ರಿ’ ವೆಬ್ ಸುದ್ದಿ ತಾಣ ಫೆಬ್ರುವರಿ 15ರಂದು **‘ದ್ವೇಷ ಕಾರ್ಖಾನೆ: ಕಪಿಲ್ ಮಿಶ್ರರ ಹಿಂದೂ ಇಕೊ ಸಿಸ್ಟಮ್ ಒಳಗೆ’** ಎಂಬ ಶಿರೋನಾಮೆಯಲ್ಲಿ ಪ್ರಕಟವಾಗಿರುವ ತನಿಖಾ ವರದಿ ಕೋಮುವಾದಿ ದ್ವೇಷ ತಯಾರಿಕಾ ಟೂಲ್‌ಕಿಟ್ ಎಂದು ವರ್ಣಿಸಬಹುದಾದ ಒಂದು ಕೃತ್ಯದ ಸಮಗ್ರ ಚಿತ್ರಣವನ್ನು ಕೊಟ್ಟಿದೆ.

‘ಹಿಂದೂ ಇಕೋಸಿಸ್ಟಮ್’ ಎಂಬ ಈ ಸಾಮಾಜಿಕ ಮಾಧ್ಯಮ ಗುಂಪಿನ ಒಡೆಯ, ನಿರ್ಮಾಪಕ ಮತ್ತು ಕಮಾಂಡರ್ ‘ಗೋಲಿ ಮಾರೊ’ ‘ಖ್ಯಾತಿ’ಯ ಬಿಜೆಪಿ ಮುಖಂಡ ಕಪಿಲ್ ಮಿಶ್ರ. ಇದರಲ್ಲಿ 20,000 ಸದಸ್ಯರಿದ್ದಾರಂತೆ. ‘ನ್ಯೂಸ್ ಲಾಂಡ್ರಿ’ಯ ಮೇಘನಾದ್ ಎಸ್ ಮತ್ತು ಶಾಂಭವಿ ಠಾಕುರ್ ಈ ಆನ್‌ಲೈನ್ ಜಾಲವನ್ನು ಪ್ರವೇಶಿಸಿ ಅದು ಹೇಗೆ ನವಂಬರ್ 2020ರಿಂದಲೇ ವಿವಿಧ ಟೂಲ್ ಕಿಟ್’ಗಳನ್ನು ಬಳಸಿ ಪ್ರಚಾರ ಸಾಮಗ್ರಿಗಳನ್ನು, ವಿಷಭರಿತ ಕಥನಗಳನ್ನು ಸೃಷ್ಟಿಸಿ ಸಾಮಾಜಿಕ ಮಾಧ್ಯಮಗಳ ವೇದಿಕೆಗಳಲ್ಲಿ ಹಿಂದುತ್ವದ ಹೆಸರಲ್ಲಿ ಮತೀಯ ದ್ವೇಷ ಮತ್ತು ಮತಾಂಧತೆಯನ್ನು ಗುಪ್ತವಾಗಿ ಮತ್ತು ವ್ಯವಸ್ಥಿತವಾಗಿ ಹರಡುತ್ತಿದೆ ಎಂಬುದನ್ನು ಕಂಡಿದ್ದಾರೆ. ಇದಕ್ಕೆ ‘ತಾಂಡವ’ ಚಲನಚಿತ್ರಕ್ಕೆ ವಿರೋಧ, ಜನವರಿ26ರ ಕೇಂಪುಕೋಟೆ ಘಟನೆ ಮತ್ತು ರಿಹಾನ್ನ, ಮಿಯ ಖಲೀಪಾ, ಗ್ರೆಟಾ ಥಿನ್‌ಬರ್ಗ್ ಟ್ವೀಟ್‌ಗಳ ಸಂದರ್ಭಗಳಲ್ಲಿ ಇದು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಯ ಬಿಟ್ಟ ಅಪಪ್ರಚಾರಗಳ ಉದಾಹರಣೆಗಳನ್ನು ಈ ತನಿಖಾ ವರದಿಯಲ್ಲಿ ಕೊಡಲಾಗಿದೆ.

ಈ ವರದಿಯನ್ನು ಕುರಿತಂತೆ ಬೃಂದಾ ಕಾರಟ್ ಹಾಗೂ ಕೆ.ಎಂ. ತಿವಾರಿಯವರು ದಿಲ್ಲಿ ಪೋಲಿಸ್ ಆಯುಕ್ತರಿಗೆ ಪತ್ರ ಬರೆದಿದ್ದಾರೆ.

“”ಗೃಹ ಮಂತ್ರಾಲಯ ಮತ್ತು ದಿಲ್ಲಿ ಪೋಲೀಸ್‌ನ ಮೂಗಿನ ಕೆಳಗೇ ಕೋಮುವಾದಿ ದ್ವೇಷ ತಯಾರಿಸುವ ಒಬ್ಬ ಸರಣಿ ಅಪರಾಧಿ, ಕಪಿಲ್ ಮಿಶ್ರ ಇದ್ದಾರೆ. ಆತ ನಿರ್ಮಿಸುತ್ತಿರುವ ಮತ್ತು ಸಂದೇಶಿಸುತ್ತಿರುವ ಟೂಲ್‌ಕಿಟ್‌ಗಳು ಧರ್ಮದ ಆಧಾರದಲ್ಲಿ ದೇಶದ ನಾಗರಿಕರ ಒಂದು ವಿಭಾಗದ ವಿರುದ್ಧ ದ್ವೇಷ ಮತ್ತು ಶತ್ರುತ್ವದ ಭಾವನೆಯನ್ನು ಪ್ರಚೋದಿಸುತ್ತಿವೆ. ಆತನಿಗೆ ಆರೆಸ್ಸೆಸ್‌ನ ನಿಕಟ ಸಂಪರ್ಕವಿದೆ. ಆರೆಸ್ಸೆಸ್ ಸಾಹಿತ್ಯವನ್ನು ಈ ಸಾಮಾಜಿಕ ಮಾಧ್ಯಮದಲ್ಲಿ ಪ್ರೋತ್ಸಾಹಿಸುತ್ತಿರುವುದನ್ನು ಕಾಣಬಹುದಾಗಿದೆ. ಬಹುಶಃ ದಿಲ್ಲಿ ಪೋಲೀಸ್ ತನ್ನ ಕಾರ್ಯಾಚರಣೆಗಳಲ್ಲಿ ಇದನ್ನು ಸೇರಿಸದಿರಲು ಇದೇ ಕಾರಣವಿರಬಹುದೇ?” ಎಂದು ಈ ಪತ್ರ ದಿಲ್ಲಿ ಪೋಲೀಸ್ ಆಯುಕ್ತರ ಮುಂದೆ ಪ್ರಶ್ನೆಯಿಟ್ಟಿದೆ.



ರೈತರ ಹೋರಾಟಕ್ಕೆ ಬೆಂಬಲ ಸೂಚಿಸುವವರಿಗೆ ಟೂಲ್‌ಕಿಟ್ ಹಂಚಿದ್ದಾರೆಂದು ಕೋಳ, ದ್ವೇಷ ಮತ್ತು ಹಿಂಸಾಚಾರ ಹರಡುವವರ ಸಾಧನಗಳಿಗೆ ಪೂರ್ಣ ಅವಕಾಶ **ವ್ಯಂಗ್ಯಚಿತ್ರ: ಸಾತ್ವಿಕ್ ಗಡೆ, ದಿ ಹಿಂದು**

“ಗೃಹ ಮಂತ್ರಾಲಯದ ಅಡಿಯಿರುವ ದಿಲ್ಲಿ ಪೋಲೀಸ್ ರೈತರ ಪ್ರತಿಭಟನೆಗಳನ್ನು ಬೆಂಬಲಿಸುವ ಟೂಲ್‌ಕಿಟ್ ವಿರುದ್ಧ ವಿಶೇಷವಾಗಿ ಮುತುವರ್ಜಿ ವಹಿಸುತ್ತಿದೆ. ನೀವು ಹದಿ ಹರೆಯದ ಜಾಗತಿಕವಾಗಿ ಮಾನ್ಯತೆ ಪಡೆದಿರುವ ಗ್ರೆಟಾ ಟ್ವೀಟ್ ನಂತರ ರೈತರನ್ನು ಬೆಂಬಲಿಸುವ ‘ಟೂಲ್‌ಕಿಟ್ ರಾಜದ್ರೋಹದಿಂದ ಕೂಡಿದೆ, ಮತ್ತು ಸೆಕ್ಷನ್ 153ಎ ಅಡಿಯಲ್ಲಿ ‘ಗುಂಪುಗಳ ನಡುವೆ ವೈರತ್ವ ಸೃಷ್ಟಿಸುತ್ತದೆ ಎಂಬ ಆಧಾರದಲ್ಲಿ ಎಫ್..ಐ.ಆರ್. ದಾಖಲಿಸಿದ್ದೀರಿ. ಒಂದು ಅಭೂತಪೂರ್ವ ಕಾರ್ಯಾಚರಣೆಯಲ್ಲಿ ನಿಮ್ಮ ಪೋಲೀಸರನ್ನು ಬೆಂಗಳೂರಿಗೆ ಕಳಿಸಿ ಒಬ್ಬ 21 ವರ್ಷದ ಪರಿಸರವಾದಿ ದಿಶಾ ರವಿಯನ್ನು ಬಂಧಿಸಿ ಜೈಲಿಗೆ ಕಳಿಸಿದ್ದೀರಿ. ರೈತರಿಗೆ ಸೌಹಾರ್ದವನ್ನು ವ್ಯಕ್ತಪಡಿಸುತ್ತಿರುವ ಯುವಜನರನ್ನು ಹೆದರಿಸುವ, ಬೆದರಿಸುವ ಈ ಆಕ್ರೋಶಕಾರೀ ಮತ್ತು ಖಂಡನಾರ್ಹ ಕ್ರಮಗಳು ನಾಗರಿಕ ಸ್ವಾತಂತ್ರ್ಯಗಳು ಮತ್ತು ಪ್ರಜಾಪ್ರಭುತ್ವ ಹಕ್ಕುಗಳ ಅವಹೇಳನವಾಗಿದೆ .ಅವರು ಬಳಸುವ ಟೂಲ್‌ಕಿಟ್ ಗಳಲ್ಲಿ ರಾಜದ್ರೋಹವೆನ್ನಬಹುದಾದ ಏನನ್ನೂ ಬಳಸಿಲ್ಲ, ವೈರತ್ವ ಉಂಟುಮಾಡುತ್ತವೆ ಎಂಬ ಆರೋಪಕ್ಕೆ ತದ್ವಿರುದ್ಧವಾಗಿ ಈ ಟೂಲ್‌ಕಿಟ್‌ಗಳು ಐಕ್ಯತೆಗೆ ಕರೆ ನೀಡುತ್ತವೆ” ಎನ್ನುತ್ತ ಬೃಂದಾ ಕಾರಟ್ ಮತ್ತು ಕೆ.ಎಂ.ತಿವಾರಿಯವರು ದಿಲ್ಲಿ ಪೋಲಿಸ್ ಆಯುಕ್ತರಿಗೆ ಬರೆದ ಈ ಪತ್ರದಲ್ಲಿ ಕಪಿಲ್‌ಮಿಶ್ರರನ್ನು ವಿವಿಧ ಗುಂಪುಗಳ ನಡುವೆ ವೈರತ್ವ ಹರಡುವುದಕ್ಕಾಗಿ ಬಂಧಿಸಬೇಕು, ಅವರ ಕೃತ್ಯಗಳು ರಾಷ್ಟ್ರವಿರೋಧಿಯಾಗಿವೆಯಾದ್ದರಿಂದ ಸೂಕ್ತ ಕಲಮುಗಳ ಅಡಿಯಲ್ಲಿ ಅವರ ವಿರುದ್ಧ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.



ಬಿಜೆಪಿ ಮಾಜಿ ಮಂತ್ರಿಯ ಎದುರು ಪತ್ರಕರ್ತೆಯ ಹೋರಾಟಕ್ಕೆ ಗೆಲುವು

ತನ್ನ ಮೇಲೆ ಲೈಂಗಿಕ ಕಿರುಕುಳದ ಆಪಾದನೆ ಹಾಕಿದ್ದ ಪತ್ರಕರ್ತೆಯ ವಿರುದ್ಧ ಮಾಜಿ ಕೇಂದ್ರ ಮಂತ್ರಿ ಎಂ.ಜೆ. ಅಕ್ಬರ್ ಹಾಕಿದ್ದ ಮಾನನಷ್ಟ ಮೊಕದ್ದಮೆಯ ತೀರ್ಪು ಎರಡು ವರ್ಷಗಳ ವಿಚಾರಣೆಯ ನಂತರ ಆತನ ವಿರುದ್ಧವೇ ಹೋಗಿದೆ. ಆತನಿಗೆ ನಷ್ಟವಾಗುವಷ್ಟು ಉನ್ನತವಾದ ಮಾನವೇನೂ ಇರಲಿಲ್ಲ ಎಂದು ಪರೋಕ್ಷವಾಗಿ ಹೇಳಿದಂತಾಗಿದೆ.

ಮಹಿಳೆಯರನ್ನು ಲೈಂಗಿಕ ನಿಂದನೆ–ಕಿರುಕುಳಗಳ ವಿರುದ್ಧ ದನಿ ಎತ್ತಿದ್ದಕ್ಕೆ ಮಾನನಷ್ಟದ ಕ್ರಿಮಿನಲ್ ದೂರಿನ ನೆವದಲ್ಲಿ ಶಿಕ್ಷಿಸಲು ಸಾಧ್ಯವಿಲ್ಲ, ತಾನು ಆರಿಸಿದ ಯಾವುದೇ ವೇದಿಕೆಯಲ್ಲಿ, ದಶಕಗಳ ನಂತರವೂ ತನ್ನ ದೂರನ್ನು ಕೊಡುವ ಹಕ್ಕು ಮಹಿಳೆಗೆ ಇದೆ ಎಂದು ದಿಲ್ಲಿಯ ಅಡಿಶನಲ್ ಚೀಫ್ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಫೆಬ್ರುವರಿ 17ರಂದು ತೀರ್ಪಿತ್ತಿದ್ದಾರೆ.

ಪ್ರಿಯಾ ರಮಣಿಯವರನ್ನು ಎಂ ಜೆ ಅಕ್ಬರ್ ಹಾಕಿದ ಮಾನನಷ್ಟದ ಆರೋಪದಿಂದ ಖುಲಾಸೆ ಮಾಡಿರುವ ಈ ತೀರ್ಪು ಲೈಂಗಿಕ ಕಿರುಕುಳದ ವಿರುದ್ಧ ಮಹಿಳೆಯರ # ಮಿಟೂ ಆಂದೋಲನಕ್ಕೆ ಸಿಕ್ಕಿರುವ ಮೊದಲ ವಿಜಯ ಎಂದು ಹಿರಿಯ ವಕೀಲರಾದ ಇಂದಿರಾ ಜೈಸಿಂಗ್ ಹೇಳಿದ್ದಾರೆ.


ಒಬ್ಬ ಬಲಿಷ್ಟ ಬಿಜೆಪಿ ಮಂತ್ರಿಯ ವಿರುದ್ಧ ಬಂದಿರುವ ಈ ತೀರ್ಪು ಮಹಿಳೆಯರಿಗೆ ಸುರಕ್ಷಿತವಾಗಿ ಕೆಲಸ ಮಾಡಲು ಮತ್ತು ಯಾವುದೇ ಕಿರುಕುಳದ ಭಯವಿಲ್ಲದೆ ತಮ್ಮ ಸಾಮರ್ಥ್ಯಗಳನ್ನು ಈಡೇರಿಸಿಕೊಳ್ಳಲು ಸಾಧ್ಯವಾಗುವಂತೆ ಸಮಾಜದ ನಡಾವಳಿಯನ್ನು ಉತ್ತಮಪಡಿಸುವತ್ತ ಸಾಗುವಂತೆ ಮಾಡಬೇಕು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಟಿಪ್ಪಣಿ ಮಾಡಿದ್ದಾರೆ.




ಹೌದು, ಇದೇ(ನೆಟ್ಟಗಿರುವ ಬೆನ್ನುಮೂಳೆ)ನಿಮಗೆ ಬೇಕಾಗಿರುವ ಏಕೈಕ ಟೂಲ್‌ಕಿಟ್
ವ್ಯಂಗ್ಯಚಿತ್ರ: ಸಮದೀಪ್ ಅದ್ವರ್ಯು, ಟೈಂಸ್ ಆಫ್ ಇಂಡಿಯ

ಟೂಲ್‌ಕಿಟ್ ಕಾಂಡ


ಪ್ರಧಾನ ಮಂತ್ರಿಗಳ ‘ಆಂದೋಲನ ಜೀವಿ’ ಮಾತಿನ ನಂತರ ಗೃಹಮಂತ್ರಿ ಅಮಿತ್ ಷಾರವರ ನೇರ ಹತೋಟಿಯಲ್ಲಿರುವ ದಿಲ್ಲಿ ಪೋಲಿಸ್ ಹುಟ್ಟುಹಾಕಿದ ‘ಟೂಲ್‌ಕಿಟ್’ ಎಲ್ಲ ವ್ಯಂಗ್ಯಚಿತ್ರಕಾರರ ವ್ಯಂಗ್ಯಕ್ಕೆ ಗುರಿಯಾಗಿದೆ. ಅವುಗಳಲ್ಲಿ ಕೆಲವು ಇಲ್ಲಿವೆ:



ಸರಕಾರದ ಟೂಲ್‌ಕಿಟ್
ವ್ಯಂಗ್ಯಚಿತ್ರ: ದಿನೇಶ್ ಕುಕ್ಕುಜಡ್ಕ



ಟೂಲ್‌ಕಿಟ್‌ನಿಂದ ಬೇಟಿ ಬಚಾವ್
ವ್ಯಂಗ್ಯಚಿತ್ರ: ಪಂಜು ಗಂಗೊಳ್ಳಿ



ಪ್ರತಿಭಟನಾಕಾರರ ಟೂಲ್‌ಕಿಟ್ ವ್ಯಂಗ್ಯಚಿತ್ರ: ಸಜಿತ್‌ಕುಮಾರ್, ಡೆಕ್ಕನ್ ಹೆರಾಲ್ಡ್



ಈಗ ಸುರಕ್ಷಿತ, ಸಾರ್!
ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

ಮಂತ್ರಗಳಿಗೆ ಮಾವಿನಕಾಯಿ ಉದುರುವುದಿಲ್ಲ



ಮಂತ್ರಗಳ ಬಲದಿಂದಲೇ ಅರ್ಥವ್ಯವಸ್ಥೆಯನ್ನು ಅದರ ಮೊದಲಿನ ಆರೋಗ್ಯದ ಸ್ಥಿತಿಗೆ ಮರಳಿಸಬಹುದು ಎಂದು ಬಿಜೆಪಿ ನಂಬಿದೆ. ಆದರೆ ಜಿಡಿಪಿಯು ಬಜೆಟ್ ನಿರೀಕ್ಷಿಸುವಂತೆ ವಾಸ್ತವವಾಗಿ ಶೇ. 10.5ರಷ್ಟು ಏರಿಕೆಯಾದರೂ ಸಹ, ಅಷ್ಟು ಬೃಹತ್ ಪ್ರಮಾಣದ ಉತ್ಪಾದನೆಯನ್ನು ಕೊಳ್ಳಲು ಸಾಕಾಗುವಷ್ಟು ಬೇಡಿಕೆ ಅರ್ಥವ್ಯವಸ್ಥೆಯಲ್ಲಿಲ್ಲ. ಅಂದರೆ, ಉತ್ಪಾದನೆಯ ಪ್ರಮಾಣವು ದೊಡ್ಡದಿರುವುದಿಲ್ಲ. ಇದು ಜನರ ಬಳಕೆಯ ಮಟ್ಟ ಇಳಿದಿದೆ ಎಂಬುದನ್ನು ತಿಳಿಸುತ್ತದೆ. ಇಂತಹ ಸನ್ನಿವೇಶದಲ್ಲಿ, ಭಾರತದ ಅರ್ಥವ್ಯವಸ್ಥೆಯಲ್ಲಿ V-ಆಕಾರದ ಚೇತರಿಕೆ ಸಂಭವಿಸುತ್ತದೆ ಎಂದು ನಂಬಲು ಕಾರಣಗಳೇ ಇಲ್ಲ. ಆದರೂ ಸಹ, ಈ ಬಜೆಟ್ ಅರ್ಥವ್ಯವಸ್ಥೆಯನ್ನು ಪುನಶ್ಚೇತನಗೊಳಿಸುವ ಪ್ರಯತ್ನ ಮಾಡುತ್ತದೆ ಎಂದು ಅನೇಕರು ಹೇಳುತ್ತಿರುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಬಜೆಟ್ ಭಾಷಣವನ್ನು ಹೊಗಳುವ ಸಂದರ್ಭಗಳಲ್ಲಿ ಅನಿವಾರ್ಯವಾಗಿ ಚಿಮ್ಮುವ ವಾಕ್ಚಾತುರ್ಯದ ಮಿಂಚಿನಲ್ಲಿ ಮತ್ತು ಶಬ್ದಗಳ ದುರ್ನಾತದಲ್ಲಿ ಒಟ್ಟಾರೆ ಅರ್ಥವ್ಯವಸ್ಥೆಯ ಚಿತ್ರಣವೇ ಕಾಣೆಯಾಗುತ್ತದೆ.

ಪ್ರೊ.ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

"ಮಂತ್ರಿಸಿ ಒಬ್ಬ ಮನುಷ್ಯನನ್ನು ಕೊಲ್ಲಬಹುದು. ಆದರೆ, ಮಂತ್ರದ ಜೊತೆಗೆ ಸ್ವಲ್ಪ ವಿಷವನ್ನೂ ಕೊಡಬೇಕಾಗುತ್ತದೆ" ಎಂಬುದಾಗಿ ವೋಲ್ಟೇರ್, ಮಾಟ-ಮಂತ್ರಗಳ ಬಗ್ಗೆ ಲೇವಡಿ ಮಾಡಿದ್ದರು. ವೋಲ್ಟೇರ್ ಅಂತೂ ಒಬ್ಬ ವಿಚಾರವಾದಿಯಾಗಿದ್ದರು; ಆದರೆ ಬಿಜೆಪಿ ಸರ್ಕಾರ ಅಲ್ಲವಲ್ಲ. ಮಂತ್ರಗಳ ಬಲದಿಂದಲೇ ಅರ್ಥವ್ಯವಸ್ಥೆಯನ್ನು ಅದರ ಮೊದಲಿನ ಆರೋಗ್ಯದ ಸ್ಥಿತಿಗೆ ಮರಳಿಸಬಹುದು ಎಂದು ಬಿಜೆಪಿ ನಂಬಿದೆ. ವಿತ್ತ ಸಚಿವರ ನಂಬಿಕೆಯೂ ಇಂಥಹದ್ದೇ. ನಿರ್ಮಲಾ ಸೀತಾರಾಮನ್ ಕೆಲವು ದಿನಗಳ ಹಿಂದೆ ಮಂಡಿಸಿದ 2021-22ರ ಬಜೆಟ್ ಭಾಷಣದಲ್ಲಿ ತಮ್ಮ ಬಜೆಟ್ ಪ್ರಸ್ತಾವನೆಗಳು ಭಾರತದ ಆರ್ಥಿಕತೆಗೆ ಹೊಸ ಚೈತನ್ಯ ತುಂಬುತ್ತವೆ ಎಂದು ಹೇಳಿದ್ದಾರೆ.

ಭಾರತೀಯ ರಿಸರ್ವ್ ಬ್ಯಾಂಕ್ ವರದಿಯ ಪ್ರಕಾರ, ಭಾರತದ ಅರ್ಥವ್ಯವಸ್ಥೆಯು 2020-21ರ ಆರ್ಥಿಕ ವರ್ಷದಲ್ಲಿ, ಅದರ ಹಿಂದಿನ ವರ್ಷಕ್ಕೆ ಹೋಲಿಸಿದರೆ, ಶೇ.7.7ರಷ್ಟು ಕುಸಿತ ಕಂಡಿದೆ ಮತ್ತು 2020-21 ಆರ್ಥಿಕ ವರ್ಷಕ್ಕೆ ಹೋಲಿಸಿದರೆ, 2021-22ರಲ್ಲಿ ಶೇ.10.5ರಷ್ಟು ವೃದ್ಧಿಸಲಿದೆ. ಆದರೆ, ಸರ್ಕಾರದ ಆರ್ಥಿಕ ಸಮೀಕ್ಷೆಯ ಪ್ರಕಾರ 2021-22ರ ಜಿಡಿಪಿಯು ತುಸು ಹೆಚ್ಚಿನ ಶೇ.11 ದರದಲ್ಲಿ ಬೆಳೆಯಲಿದೆ ಎಂದು ಹೇಳಿದೆ. ಈ ಎರಡು ವರದಿಗಳ ನಡುವಿನ ವ್ಯತ್ಯಾಸವನ್ನು ಅಲಕ್ಷಿಸಿ, ಬೆಳವಣಿಗೆಯು ಶೇ.11 ದರದಲ್ಲೇ ಇರಲಿದೆ ಎಂದೇ ಊಹಿಸಿಕೊಂಡು ಈ ಕೆಳಗಿನ ವಾದವನ್ನು ಮಂಡಿಸಲಾಗಿದೆ.

2021-22ರ ಜಿಡಿಪಿಯು ಸುಮಾರು 2019-20ರಲ್ಲಿದ್ದಷ್ಟೇ ಮಟ್ಟಕ್ಕೆ ಮರಳಲಿದೆ ಎಂಬ ಆಶಾಭಾವನೆಯನ್ನು ಆಧರಿಸಿ, ಸರ್ಕಾರದ ವಕ್ತಾರರು ಒಂದು V-ಆಕಾರದ ಚೇತರಿಕೆಯ ಬಗ್ಗೆ ಮಾತನಾಡುತ್ತಿದ್ದಾರೆ. ಅಂದರೆ, ಅರ್ಥವ್ಯವಸ್ಥೆಯು ಕೊಳ್ಳಕ್ಕೆ ಬೀಳುವುದಕ್ಕೆ ಮುಂಚೆ ಜಿಡಿಪಿಯು ಬೆಳವಣಿಗೆಯ ದರವು ಯಾವ ಮಟ್ಟದಲ್ಲಿತ್ತೋ, ತುಸು ಹೆಚ್ಚು ಕಡಿಮೆ, ಅದೇ ಮಟ್ಟಕ್ಕೆ ಏರಲಿದೆ.

ದೇಶದ ಆಂತರಿಕ ಒಟ್ಟು ಉತ್ಪನ್ನ ಅಥವಾ ಜಿಡಿಪಿಯನ್ನು ಸರಳವಾಗಿ ವಿವರಿಸುವುದಾದರೆ, ದೇಶದ ಒಟ್ಟು ಬಳಕೆ (ಬ) ಮತ್ತು ಹೂಡಿಕೆ (ಹೂ) ಮತ್ತು ಸರ್ಕಾರದ ವೆಚ್ಚಗಳು (ಸ) ಮತ್ತು ನಿವ್ವಳ ರಫ್ತು (ರ-ಆ)ಇವುಗಳ ಒಟ್ಟು ಮೊತ್ತವೇ ಜಿಡಿಪಿ. ಅದು ಬಿದ್ದಿರುವ ಕೊಳ್ಳದ ತಳದಿಂದ, 2021-22ರಲ್ಲಿ ಶೇ.10.5 ದರದಲ್ಲಿ ಮೇಲೇರುತ್ತದೆ ಎಂದಾದರೆ, ಜಿಡಿಪಿಯು (ಬ+ಹೂ+ ಸ+ರ-ಆ)) 2020-21ರ ಮಟ್ಟಕ್ಕಿಂತ ಶೇ.10.5 ರಷ್ಟು ಹೆಚ್ಚಬೇಕಾಗುತ್ತದೆ.

ಮುಂದಿನ ವರ್ಷ ರಫ್ತುಗಳು ಹೆಚ್ಚುತ್ತವೆಯೋ ಇಲ್ಲವೋ ಎಂಬುದನ್ನು ನಿಖರವಾಗಿ ಈಗಲೇ ಹೇಳಲು ಯಾರಿಗೂ ಸಾಧ್ಯವಿಲ್ಲ. ಮತ್ತು, V ಆಕಾರದ ಚೇತರಿಕೆಯ ಬಗ್ಗೆ ಸರ್ಕಾರದ ಹೇಳಿಕೆಯು ರಫ್ತುಗಳು ಉನ್ನತವಾಗಿರುತ್ತವೆ ಎಂಬ ಊಹೆಯನ್ನು ಆಧರಿಸಿಲ್ಲ ಎಂಬುದೇನೋ ಸರಿಯೇ. ಆದ್ದರಿಂದ, ರಫ್ತುಗಳನ್ನು ನಮ್ಮ ಲೆಕ್ಕಾಚಾರದಿಂದ ಹೊರಗಿಟ್ಟು, ಬಜೆಟ್‌ನಲ್ಲಿ ಘೋಷಿಸಿದ ನೀತಿಗಳು ಮತ್ತು ಉಪ ಕ್ರಮಗಳು ಬಳಕೆಯನ್ನು(ಬ), ಹೂಡಿಕೆಯನ್ನು(ಹೂ) ಮತ್ತು ಸರ್ಕಾರದ ವೆಚ್ಚಗಳನ್ನು (ಸ) ನಿಜಕ್ಕೂ ಸುಮಾರು ಶೇ10 ರಷ್ಟನ್ನಾದರೂ ಹೆಚ್ಚಿಸುತ್ತವೆಯೇ ಎಂಬುದನ್ನು ನೋಡೋಣ.

2020-21ನೇ ಸಾಲಿನಲ್ಲಿದ್ದ 34.503 ಲಕ್ಷ ಕೋಟಿ ರೂಗಳಷ್ಟಿದ್ದ (ಪರಿಷ್ಕೃತ ಅಂದಾಜು) ಸರ್ಕಾರದ ಒಟ್ಟು ವೆಚ್ಚವು 2021-22ರ ಸಾಲಿನಲ್ಲಿ 34.832 ಲಕ್ಷ ಕೋಟಿ ರೂಗಳಿಗೆ ಏರಿಕೆಯಾಗುವ ನಿರೀಕ್ಷೆ ಇದೆ. ಅಂದರೆ, ಹಣದ ಲೆಕ್ಕದಲ್ಲಿ 1% ಏರಿಕೆಯಾಗಿದ್ದರೂ ಸಹ, ಬೆಲೆ ಏರಿಕೆ (ಹಣದುಬ್ಬರ) ಪರಿಗಣನೆಯ ಲೆಕ್ಕಾಚಾರದಲ್ಲಿ ಸರ್ಕಾರದ ಖರ್ಚುಗಳು ಕಡಿಮೆಯಾಗಿರುತ್ತವೆ. ಮುಂಬರುವ ವರ್ಷದ ಸರ್ಕಾರಿ ವೆಚ್ಚಗಳಲ್ಲಿ ಯಾವ ಯಾವ ಹೊಸ ಖರ್ಚುಗಳು ಸೇರ್ಪಡೆಯಾಗುತ್ತವೆ ಎಂಬುದು ಕೊರೊನಾ ಪೀಡಿತ ವರ್ಷಕ್ಕಿಂತ ಭಿನ್ನವಾಗಿರಬಹುದು. ಆದರೆ, ಸ್ಥೂಲ-ಆರ್ಥಿಕ ಪರಿಭಾಷೆಯಲ್ಲಿ, ಅಂದರೆ, ಅರ್ಥವ್ಯವಸ್ಥೆಯ ಬೇಡಿಕೆ ಪಾರ್ಶ್ವದ ಒಂದು ಮಹತ್ವದ ಅಂಶವಾಗಿರುವ ಸರ್ಕಾರಿ ವೆಚ್ಚಗಳು ಕೊರೊನಾ ಪೀಡಿತ ವರ್ಷದ ಖರ್ಚುಗಳಿಗೆ ಹೋಲಿಸಿದರೆ, 2021-22ರ ಸಾಲಿನಲ್ಲಿ ಕಡಿಮೆಯೇ ಇರುತ್ತವೆ.

ಬಹಳ ಧಾರಾಳವಾಗಿ ಹೇಳುವುದಾದರೆ, ಬಳಕೆಯು(ಬ), ಹೆಚ್ಚೆಂದರೆ, ಜಿಡಿಪಿಯು ಬೆಳೆದ ಪ್ರಮಾಣದಷ್ಟೇ ಹೆಚ್ಚಬಹುದು. ಸ್ವಲ್ಪ ಕಠೋರವಾಗಿ ಹೇಳುವುದಾದರೆ, ಮುಂಬರುವ ವರ್ಷದಲ್ಲಿ, ಬಳಕೆಯು ಅಷ್ಟು ಮಟ್ಟಿಗೂ ಹೆಚ್ಚುವ ಸಂಭವವಿಲ್ಲ. ಬಳಕೆಯ ಬೆಳವಣಿಗೆಯು ಜಿಡಿಪಿಯ ಬೆಳವಣಿಗೆಗಿಂತ ಕಡಿಮೆ ಇರಲಿದೆ ಎಂದು ಹೇಳಲು ಕಾರಣಗಳಿವೆ. ಹೀಗಾಗಲು ಕಾರಣವೇನೆಂದರೆ, ಬಹಳ ಮಂದಿ ದುಡಿಯುವ ಜನರು ತಮ್ಮ ಉಪಭೋಗದ ಮಟ್ಟವನ್ನು (ಜೀವನ ಮಟ್ಟವನ್ನು) ಕಾಪಾಡಿಕೊಳ್ಳುವ ಸಲುವಾಗಿ ಸಾಲ ಮಾಡಿದ್ದರು. ಇದ್ದಕ್ಕಿದ್ದಂತೆಯೇ ಘೋಷಣೆ ಮಾಡಿದ ಲಾಕ್‌ಡೌನ್ ಕಾರಣದಿಂದಾಗಿ, ದುಡಿಯುವ ಜನರ ಆದಾಯದ ಮೂಲವೇ ಹಠಾತ್ತಾಗಿ ಬಂದ್ ಆಯಿತು ಮತ್ತು ವರಮಾನಗಳು ಹಠಾತ್ತಾಗಿ ನಿಂತು ಹೋದವು. ಈಗ ದುಡಿಯುವ ಜನರಿಗೆ ಹೆಚ್ಚು ಆದಾಯ ಬರುತ್ತಿದ್ದರೂ ಸಹ, ಹಳೆಯ ಸಾಲವನ್ನು ತೀರಿಸಬೇಕಾದ ಅನಿವಾರ್ಯ ಕಾರಣದಿಂದ, ಅವರು ಖರ್ಚು ಮಾಡುವಾಗ ಕೈ ಬಿಗಿಹಿಡಿಯುತ್ತಾರೆ. ಆದ್ದರಿಂದ, ಜಿಡಿಪಿಯ ಪ್ರತಿ 1ಶೇ. ಹೆಚ್ಚಳದೊಂದಿಗೆ ಬಳಕೆಯ ಶೇಕಡಾವಾರು ಹೆಚ್ಚಳದ ಪ್ರಮಾಣವು 1ಶೇ.ಕ್ಕಿಂತ ಕಡಿಮೆಯೇ ಆಗಲಿದೆ. ಅಂದರೆ, ನೈಜ ಅರ್ಥದಲ್ಲಿ, ಜಿಡಿಪಿಯು ಭಾವಿಸಿಕೊಂಡ ರೀತಿಯಲ್ಲೇ 10.5% ವೃದ್ಧಿಸಿದರೂ ಸಹ, ಬಳಕೆಯ ಹೆಚ್ಚಳವು 10.5%ಗಿಂತಲೂ ಕಡಿಮೆಯೇ ಇರಲಿದೆ.

ಇನ್ನು ಉಳಿದದ್ದು ಹೂಡಿಕೆ. ಖಾಸಗಿ ವಲಯದ ಹೂಡಿಕೆ ಮತ್ತು ಬಜೆಟ್ ಹೊರಗಿನ ಸಾರ್ವಜನಿಕ ವಲಯದ ಉದ್ಯಮಗಳು ಮಾಡುವ ಹೂಡಿಕೆಗಳ ಬಗ್ಗೆ ಗಮನ ಹರಿಸೋಣ. ಸಾಂಕ್ರಾಮಿಕದ ಅವಧಿಯಲ್ಲಿ (ವರ್ಷದಲ್ಲಿ) ಹಠಾತ್ತನೆ ಸ್ಥಗಿತಗೊಳಿಸಬೇಕಾಗಿ ಬಂದ ಅನೇಕ ಯೋಜನೆಗಳ ಕಾಮಗಾರಿಗಳು ಲಾಕ್‌ಡೌನ್ ತೆರವಿನ ನಂತರ ಅರ್ಧಂಬರ್ಧಗೊಂಡಿದ್ದ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಹೂಡಿಕೆ ಬಾಬ್ತು ವೆಚ್ಚಗಳು ಆತುರಾತುರವಾಗಿ ಹೆಚ್ಚಿದವು. 2021-22 ಹಣಕಾಸು ವರ್ಷದಲ್ಲಿ ಕೈಗೊಳ್ಳಬಹುದಾದ ಹೂಡಿಕೆಯ ವೆಚ್ಚಗಳು ಕಳೆದ/ಹಿಂದಿನ ವರ್ಷ ತೆಗೆದುಕೊಂಡ ಹೂಡಿಕೆಯ ನಿರ್ಧಾರಗಳ ಮೇಲೆ ನಿಂತಿರುತ್ತವೆ. ಅಂದರೆ, ಅಪೂರ್ಣ ಯೋಜನೆಗಳ ಬಾಬ್ತು ವೆಚ್ಚಗಳನ್ನು ಬದಿಗೆ ತೆಗೆದಿಟ್ಟು, ಉಳಿದ ಹಣ ಎಷ್ಟು ಎಂಬುದರ ಮೇಲೆ ನಿರ್ಧರಿಸಲ್ಪಡುತ್ತದೆ. ಆದರೆ, ಕಳೆದ ವರ್ಷವು ಕೊರೊನಾ ಪೀಡಿತ ವರ್ಷವಾಗಿತ್ತು. ಹಾಗಾಗಿ, ಉತ್ಪತ್ತಿಯು ಕುಗ್ಗಿತ್ತು. ಆ ಪರಿಸ್ಥಿತಿಯಿಂದ ಹೊರಬಂದು ಮುಂದಕ್ಕೆ ನೋಡುವುದಾದರೆ, ಮುಂದಿನ ವರ್ಷ, ಅಂದರೆ 2021-22ರಲ್ಲಿ, ಕೊರೊನಾ-ಪೂರ್ವದ ಉತ್ಪಾದನೆಯ ಮಟ್ಟ ತಲುಪುವುದೇ ಗುರಿಯಾಗಿತ್ತು. ಆ ಮಟ್ಟದ ಉತ್ಪಾದನಾ ಸಾಮರ್ಥ್ಯವು ಈಗಾಗಲೇ ದೇಶದಲ್ಲಿದೆ. ಹೊಸ ಹೂಡಿಕೆಯನ್ನು ಕೈಗೊಳ್ಳುವ ನಿರ್ಧಾರವು 2020-21 ವರ್ಷದಲ್ಲೇ ಕುಂಠಿತಗೊಂಡಿತ್ತು. ಆದ್ದರಿಂದ, 2021-22ರ ಆದಾಯ ಮತ್ತು ಹೂಡಿಕೆಯ ಅನುಪಾತವು 2020-21ರಲ್ಲಿ ಇದ್ದುದಕ್ಕಿಂತ ಕಡಿಮೆಯೇ ಆಗುತ್ತದೆ.

ನಾವು ನಿಖರವಾಗಿ ಅಂದಾಜು ಮಾಡಲು ಸಾಧ್ಯವಾಗದಂತಹ ಭವಿಷ್ಯದ ರಫ್ತುಗಳನ್ನು ಬದಿಗಿಟ್ಟು ನೋಡಿದರೆ, ಜಿಡಿಪಿಯು ಒಟ್ಟಾರೆಯಾಗಿ ಶೇ.10.5ರಷ್ಟು ಏರಿಕೆಯಾದರೂ ಸಹ, ಅದರ ಪ್ರತಿಯೊಂದು ಅಂಗಾಂಶದ ಏರಿಕೆಯು ಶೇ.10.5ಕ್ಕಿಂತ ಕಡಿಮೆ ಇರುತ್ತದೆ ಎಂಬುದನ್ನು ಗ್ರಹಿಸಬಹುದು. ಅಂದರೆ, ಜಿಡಿಪಿಯು ವಾಸ್ತವವಾಗಿ ಶೇ. 10.5ರಷ್ಟು ಏರಿಕೆಯಾದರೂ ಸಹ, ಅಷ್ಟು ಬೃಹತ್ ಪ್ರಮಾಣದ ಉತ್ಪಾದನೆಯನ್ನು ಕೊಳ್ಳಲು ಸಾಕಾಗುವಷ್ಟು ಬೇಡಿಕೆಯೂ ಅರ್ಥವ್ಯವಸ್ಥೆಯಲ್ಲಿಲ್ಲ. ಇದರ ಅರ್ಥವೇನೆಂದರೆ, ಉತ್ಪಾದನೆಯ ಪ್ರಮಾಣವು ದೊಡ್ಡದಿರುವುದಿಲ್ಲ.


ಇಂತಿಷ್ಟು ಆಗಲೇಬೇಕು ಎಂದು ಭಾವಿಸಿಕೊಂಡಿದ್ದ ಮಟ್ಟಕ್ಕಿಂತ ಕೆಳಗಿನ ಉತ್ಪಾದನೆಯು, ಜನರ ಬಳಕೆಯ ಮಟ್ಟ ಇಳಿದಿದೆ ಎಂಬುದನ್ನು ತಿಳಿಸುತ್ತದೆ. ಜೊತೆಗೆ, ಬೆಳವಣಿಗೆ ದರದ ಆರಂಭಿಕ ಇಳಿಕೆಯು ಗುಣಕದ ಪರಿಣಾಮವನ್ನು ಹೊಂದಿರುತ್ತದೆ.

ಇಂತಹ ಸನ್ನಿವೇಶದಲ್ಲಿ, ಭಾರತದ ಅರ್ಥವ್ಯವಸ್ಥೆಯಲ್ಲಿ V-ಆಕಾರದ ಚೇತರಿಕೆ ಸಂಭವಿಸುತ್ತದೆ ಎಂದು ನಂಬಲು ಕಾರಣಗಳೇ ಇಲ್ಲ. ಅರ್ಥವ್ಯವಸ್ಥೆಯು ಚೇತರಿಸಿಕೊಳ್ಳುವಂತಹ ಅವಕಾಶಗಳನ್ನು ಬಜೆಟ್ ಕಲ್ಪಿಸಲಿಲ್ಲ. ಶೇ.10.5ರ ಆರ್ಥಿಕ ಬೆಳವಣಿಗೆಯನ್ನು ಸಾಧಿಸಬೇಕಾದರೆ, ಸರ್ಕಾರದ ಖರ್ಚು-ವೆಚ್ಚಗಳನ್ನು ಕೊನೆಯ ಪಕ್ಷ ಶೇ.10.5ರಷ್ಟನ್ನಾದರೂ ಏರಿಸಲೇಬೇಕಾಗುತ್ತಿತ್ತು. ಆದರೆ, ಬಜೆಟ್‌ನಲ್ಲಿ ಸರ್ಕಾರದ ಖರ್ಚು-ವೆಚ್ಚಗಳ ಹೆಚ್ಚಳದ ಮಾತೇ ಇಲ್ಲ. ಪ್ರತಿಯಾಗಿ, ಬಜೆಟ್ ಸರ್ಕಾರದ ಒಟ್ಟು ಖರ್ಚು-ವೆಚ್ಚಗಳನ್ನು ನೈಜ ಅರ್ಥದಲ್ಲಿ ಕುಗ್ಗಿಸಿದೆ.

ಇಷ್ಟೇ ಅಲ್ಲದೆ, ಗಮನಿಸಲೇಬೇಕಾದ ಇನ್ನೂ ಒಂದು ಅಂಶವಿದೆ. ವಿತ್ತೀಯ ಕೊರತೆಯ ಪ್ರಮಾಣವನ್ನು 2020-21 ಸಾಲಿನಲ್ಲಿದ್ದ ಶೇ.9.5ರಿಂದ 2021-22 ಸಾಲಿನಲ್ಲಿ ಶೇ.6.8ಕ್ಕೆ ಇಳಿಸಲಾಗಿದೆ. ಇದೊಂದು ಚಮತ್ಕಾರವೇ. ಏಕೆಂದರೆ, ಸರಕಾರಿ ವೆಚ್ಚಗಳಲ್ಲಿ ಯಾವುದೇ ಹೆಚ್ಚಳ/ಬದಲಾವಣೆ ಇಲ್ಲದಿದ್ದರೂ, ಜಿಡಿಪಿಯು ಶೇ.10.5ರಷ್ಟು ಹೆಚ್ಚಳವಾಗುವ ನಿರೀಕ್ಷೆ ಮೇಲೆ ತೆರಿಗೆ ಆದಾಯವೂ ಹೆಚ್ಚುತ್ತದೆ ಎಂದು ನಿರೀಕ್ಷಿಸಲಾಗಿದೆ. ಆದರೆ, ಒಂದು ವೇಳೆ ಜಿಡಿಪಿಯ ಬೆಳವಣಿಗೆಯು ಬಜೆಟ್‌ನಲ್ಲಿ ಅಂದಾಜು ಮಾಡಿದ್ದಕ್ಕಿಂತಲೂ ಕಡಿಮೆಯಾದರೆ, ಆಗ, ಬಜೆಟ್‌ನಲ್ಲಿ ಹೇಳಿದ್ದಷ್ಟೂ ವೆಚ್ಚಗಳನ್ನು ಮಾಡಲಾಗಿದೆ ಎಂದುಕೊಂಡರೂ ಸಹ, ವಿತ್ತೀಯ ಕೊರತೆಯ ಗಾತ್ರವು ಬಜೆಟ್‌ನಲ್ಲಿ ತೋರಿಸಿದ್ದಕ್ಕಿಂತಲೂ ದೊಡ್ಡದಾಗಿರುತ್ತದೆ. ಈ ಪರಿಸ್ಥಿತಿಯನ್ನು ನಿಭಾಯಿಸುವ ಸಲುವಾಗಿ ಸರ್ಕಾರವು ತನ್ನ ವೆಚ್ಚಗಳನ್ನು ಕಡಿತಗೊಳಿಸಿದರೆ, ಜಿಡಿಪಿಯ ಬೆಳವಣಿಗೆಯ ದರವು ಇನ್ನೂ ಕೆಳಗಿಳಿಯಲಿದೆ.

ಈ ಎಲ್ಲ ಅಂಶಗಳಿಂದ ತಿಳಿದುಬರುವುದು ಏನೆಂದರೆ, ಈ ಬಜೆಟ್ ಭಾರತದ ಅರ್ಥವ್ಯವಸ್ಥೆಯ ಚೇತರಿಕೆಗೆ ಒಂದು ಸಾಧನವಾಗುವುದಿಲ್ಲ. ಕಳೆದ ಹಲವು ವರ್ಷಗಳಿಂದ ಭಾರತದ ಅರ್ಥವ್ಯವಸ್ಥೆಯನ್ನು ಬಾಧಿಸುತ್ತಿರುವ ನಿರುದ್ಯೋಗವು, ಅದರಲ್ಲೂ ವಿಶೇಷವಾಗಿ ಸಾಂಕ್ರಾಮಿಕದ ವರ್ಷದಲ್ಲಿ ತೀವ್ರವಾಗಿ ಬಾಧಿಸಿದ ನಿರುದ್ಯೋಗವು ಒಂದು ತೀವ್ರ ಸಮಸ್ಯೆಯಾಗಿಯೇ ಮುಂದುವರೆಯುತ್ತದೆ. ಬಜೆಟ್ ಹೊಂದಿರುವ ದೃಷ್ಟಿಯ ಪ್ರಕಾರವಾಗಿ ಅರ್ಥವ್ಯವಸ್ಥೆಯು ಚೇತರಿಸಿಕೊಂಡರೂ ಸಹ, ನಿರುದ್ಯೋಗ ಸಮಸ್ಯೆಯು ಇನ್ನೂ ತೀವ್ರವಾಗಿಯೇ ಇರುತ್ತದೆ. ಏಕೆಂದರೆ, ಬೇರೆ ಬೇರೆ ವಲಯಗಳಲ್ಲಿ ಕಾಣುವ ಬೆಳವಣಿಗೆಯು ಕಿರು ಉತ್ಪಾದನಾ ವಲಯಗಳಲ್ಲಿ ಇರುವುದೇ ಇಲ್ಲ. ಏಕೆಂದರೆ, ಕೊರೊನಾ ಸಂಬಂಧಿತ ಲಾಕ್‌ಡೌನ್ ಕಾರಣದಿಂದಾಗಿ ಈ ವಲಯವು ನೆಲಸಮವಾಯಿತು. ಅದಕ್ಕೂ ಮೊದಲೇ ಮೋದಿ ಸರಕಾರವು ಜಾರಿಗೆ ತಂದ ನೋಟು ರದ್ದತಿಯ ಕಾರಣದಿಂದ ಈ ವಲಯವು ನೆಲ ಕಚ್ಚಿತ್ತು. ಲಾಕ್‌ಡೌನ್, ಈ ವಲಯವನ್ನು ನಾಶಪಡಿಸಿತು. ಹಾಗಾಗಿ, ಈ ವಲಯವು ಚೇತರಿಕೆಯ ಮಾರ್ಗವಾಗಿ ದೊರೆಯುವ ಲಾಭವನ್ನು ಪಡೆಯಲಾಗದ ಸ್ಥಿತಿಯಲ್ಲಿದೆ. ಈ ವಲಯದಲ್ಲಿ ಬೇರೆ ಬೇರೆ ವಲಯಗಳಿಗಿಂತ ಹೆಚ್ಚು ಉದ್ಯೋಗಗಳು ಇರುವುದರಿಂದ, ಮತ್ತು ಈ ವಲಯವು ಕಾರ್ಯಪ್ರವೃತ್ತವಾಗಲು ಸಾಧ್ಯವಾಗದ ಕಾರಣದಿಂದ, ಮತ್ತು, ಚೇತರಿಕೆಯ ಇಡೀ ಪ್ರಕ್ರಿಯೆಯೇ ಕುಂಠಿತವಾಗಿ ಸಾಗುತ್ತಿರುವುದರಿಂದ, ನಿರುದ್ಯೋಗವು ಒಂದು ತೀವ್ರ ಸಮಸ್ಯೆಯಾಗಿಯೇ ಮುಂದುವರೆಯುತ್ತಿದೆ.

ಇದೊಂದು ಸಂಪ್ರದಾಶರಣ ಬಜೆಟ್. ದೇಶದ ಅಗತ್ಯ ಏನಿತ್ತೋ ಅದಕ್ಕೆ ವಿರುದ್ಧವಾಗಿದೆ, ಈ ಬಜೆಟ್. ಆದರೂ ಸಹ, ಈ ಬಜೆಟ್ ಅರ್ಥವ್ಯವಸ್ಥೆಯನ್ನು ಪುನಶ್ಚೇತನಗೊಳಿಸುವ ಪ್ರಯತ್ನ ಮಾಡುತ್ತದೆ ಎಂದು ಅನೇಕರು ಹೇಳುತ್ತಿರುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಬಜೆಟ್ ಭಾಷಣವನ್ನು ಹೊಗಳುವ ಸಂದರ್ಭಗಳಲ್ಲಿ ಅನಿವಾರ್ಯವಾಗಿ ಚಿಮ್ಮುವ ವಾಕ್ಚಾತುರ್ಯದ ಮಿಂಚಿನಲ್ಲಿ ಮತ್ತು ಶಬ್ದಗಳ ದುರ್ನಾತದಲ್ಲಿ ಒಟ್ಟಾರೆ ಅರ್ಥವ್ಯವಸ್ಥೆಯ ಚಿತ್ರಣವೇ ಕಾಣೆಯಾಗುತ್ತದೆ.



ಮೂರು ಘಟ್ಟಗಳ 'ಪ್ರಯೋಗ'ಗಳ ನಂತರ ಕೊನೆಗೂ ಲಸಿಕೆ ಬಂತೆ! ಮೂರು ಬಜೆಟ್‌ಗಳ ನಂತರ ನಾಲ್ಕನೇ ಬಜೆಟ್‌ನಿಂದ ಚೇತರಿಕೆ?

ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಂಸ್ ಆಫ್ ಇಂಡಿಯ

ಕೆಫೋನ್ ಮೊದಲ ಘಟ್ಟ ಜಾರಿ

ಡಿಜಿಟಲ್ ಕಂದರವನ್ನು ಮುಚ್ಚುವ ಒಂದು ಕ್ರಾಂತಿಕಾರಿ ಹೆಜ್ಜೆ



ಬಡತನದ ರೇಖೆಯ ಕೆಳಗಿರುವ ಕುಟುಂಬಗಳಿಗೆ ಉಚಿತವಾಗಿ ಇಂಟರ್ನೆಟ್ ಸಂಪರ್ಕಗಳನ್ನು ಒದಗಿಸುವ ಕೇರಳ ಫೈಬರ್ ಆಪ್ಟಿಕ್ ನೆಟ್‌ವರ್ಕ್ (ಕೆಫೋನ್) ಪರಿಯೋಜನೆ ವಾಸ್ತವಗೊಂಡಿದೆ ಎಂದು ಏಳು ಜಿಲ್ಲೆಗಳಲ್ಲಿ ಅದರ ಮೊದಲ ಘಟ್ಟವನ್ನು ಫೆಬ್ರುವರಿ 16 ರಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಆರಂಭಿಸುತ್ತ ಹೇಳಿದರು.

ಇದು ಇಂಟರ್ನೆಟ್ ಬಳಸುವ ಶಾಲೆಗಳು, ಆಸ್ಪತ್ರೆಗಳು, ಕಚೇರಿಗಳು ಮತ್ತು ಮನೆಗಳನ್ನು ಸಂಪರ್ಕಿಸಲು ಕೂಡ ನೆರವಾಗುತ್ತದೆ.

ಇದು ರಾಜ್ಯದಲ್ಲಿ ಡಿಜಿಟಲ್ ಕಂದರವನ್ನು ಮುಚ್ಚುವ ಒಂದು ಕ್ರಾಂತಿಕಾರಿ ಹೆಜ್ಜೆ, ಎಲ್ಲ ಮನೆಗಳು ಮತ್ತು ಕಚೇರಿಗಳನ್ನು ಆಪ್ಟಿಕ್ ಫೈಬರ್ ಮೂಲಕ ಜೋಡಿಸಿ ಅಭಿವೃದ್ಧಿಯನ್ನು ಮೇಲಿನ ಹಂತಕ್ಕೆ ಒಯ್ಯುತ್ತದೆ ಎಂದು ವಿಜಯನ್ ಹೇಳಿದರು.

ಉತ್ತಮ ಗುಣಮಟ್ಟದ ಅಂತರ್ಜಾಲ ಸಂಪರ್ಕವನ್ನು ಬಡವರಿಗೆ ಉಚಿತವಾಗಿ ಮತ್ತು ಇತರರಿಗೆ ಕೈಗೆಟಕುವ ಬೆಲೆಗಳಲ್ಲಿ ಒದಗಿಸುವುದು ಈ ಪರಿಯೋಜನೆಯ ಉದ್ದೇಶ.

ಕೇರಳ ಅಂತರ್ಜಾಲ ಲಭ್ಯತೆ ಒಂದು ಮೂಲ ಮಾನವ ಹಕ್ಕು ಎಂದು ಘೋಷಿಸಿರುವ ಮೊದಲ ರಾಜ್ಯವಾಗಿದೆ.

ಕೆಫೋನ್ ಪರಿಯೋಜನೆಯ ಮೂಲಕ ಸುಮಾರು 30 ಸಾವಿರ ಸಂಸ್ಥೆಗಳಿಗೆ 20ಲಕ್ಷ ಕುಟುಂಬಗಳಿಗೆ ಉನ್ನತ ವೇಗದ,ವಿಶ್ವಾಸಾರ್ಹ ಹಾಗೂ ಮೇಲ್ದರ್ಜೆಗೆ ಏರಿಸಬಹುದಾದ ಒಂದು ಬೃಹತ್ ಮೂಲರಚನಾ ಪರಿಯೋಜನೆಯಾಗಿದೆ. ಕೇರಳ ವಿದ್ಯುಚ್ಛಕ್ತಿ ಮಂಡಳಿಯ (ಕೆಎಸ್‌ಇಬಿ)ಪ್ರಸರಣ ಮತ್ತು ವಿತರಣ ಸೌಕರ್ಯವನ್ನು ಇದು ಬಳಸಿದೆ. ಕೆಎಸ್‌ಇಬಿ ಮತ್ತು ಕೇರಳ ರಾಜ್ಯ ಮಾಹಿತಿ ತಂತ್ರಜ್ಞಾನ ಮೂಲರಚನೆ ನಿಯಮಿತ(ಕೆಎಸ್‌ಐಟಿಐಎಲ್) ಕೆಫೋನ್‌ನಲ್ಲಿ ತಲಾ 50& ಪಾಲು ಹೊಂದಿವೆ.

ಇದನ್ನು ಜಾರಿಗೊಳಿಸುವ ಮೂಲಕ ಕೇರಳ ಒಂದು ಜ್ಞಾನ ಅರ್ಥವ್ಯವಸ್ಥೆಯಾಗಿ ಮತ್ತು ಮಾಹಿತಿ ತಂತ್ರಜ್ಞಾನದ ಹಂದರವಾಗಿ ಬೆಳೆಯಲು ಬುನಾದಿ ಹಾಕಿದಂತಾಗಿದೆ.

ಕಳೆದ ತಿಂಗಳು ಸಲ್ಲಿಸಿದ ಬಜೆಟಿನಲ್ಲಿ ರಾಜ್ಯ ಹಣಕಾಸುಮಂತ್ರಿ ಡಾ.ಥಾಮಸ್ ಐಸಾಕ್ ಅವರು ಒಂದು ಜ್ಞಾನ ಸಮಾಜವನ್ನು ನಿರ್ಮಿಸುವ ಮಾತಾಡಿದ್ದರು. ಇದರ ಮುಮದಿನ ಹೆಜ್ಜೆಯಾಗಿ ಲ್ಯಾಪ್‌ಟಾಪ್ ವಿತರಣೆಯ ಕಾರ್ಯಕ್ರಮದ ಬಗ್ಗೆ ಪ್ರಸ್ತಾಪ ಮಾಡಿದ್ದರು. ಮೀನುಗಾರರು, ಪರಿಶಿಷ್ಟ ಜಾತಿಗಳು, ಬುಡಕಟ್ಟು ಸಮುದಾಯಗಳು ಮತ್ತು ಅಂತ್ಯೋದಯ ಕುಟುಂಬಗಳ ಮಕ್ಕಳಿಗೆ ಅರ್ಧ ವೆಚ್ಚದಲ್ಲಿ ಇವನ್ನು ಒದಗಿಸಲಾಗುವುದು. ಇತರ ಬಿಪಿಎಲ್ ಕಟುಂಬಗಳಿಗೆ 25% ಸಬ್ಸಿಡಿ ಒದಗಿಸಲಾಗುವುದು ಎಂದು ಎಲ್‌ಡಿಎಫ್ ಸರಕಾರ ಹೇಳಿದೆ. ವಿವಿಧ ಇಲಾಖೆಗಳು ಮತ್ತು ಸ್ಥಳೀಯ ಸಂಸ್ಥೆಗಳು ಇದರ ವೆಚ್ಚವನ್ನು ಭರಿಸುತ್ತವೆ. ಕುಡುಂಬಶ್ರೀಯ ಕೇರಳ ರಾಜ್ಯ ಹಣಕಾಸು ಉದ್ದಿಮೆಗಳಮೈಕ್ರೊ ಚಿಟ್‌ಫಮಡ್ ಮೂಲಕವೂ ಅಂತಜಾಲ ಸಂಪರ್ಕ ಮತ್ತು ಲ್ಯಾಪ್‌ಟಾಪ್‌ಗಳನ್ನು ಒದಗಿಸಲಾಗುವುದು.

ಖಾಸಗಿಯವರು ಈಪರಿಯೋಜನೆಯ ವಿರುದ್ಧಪಿತೂರಿ ನಡೆಸಬಹುದು ಎಂದು ತಿಳದು ಬಂದಿತ್ತು. ಚಿನ್ನ ಕಳ್ಳಸಾಗಾಣಿಕೆಯ ಪ್ರಕರಣದ ತನಿಖೆ ನಡೆಸುವಾಗ ಕೆಪೋನ್ ಗೂ ಅದಕ್ಕೂ ಸಂಬಂಧ ಕಲ್ಪಿಸುವ ಪ್ರಯತ್ನ ನಡೆಯಿತು. ಏಕೆಂದರೆ ಕೆಫೋನ್ ಕೈಗೆಟಕುವ ದರಗಳಲ್ಲಿ ಕೇರಳದ ಪ್ರತಿಯೊಬ್ಬ ನಾಗರಿಕರಿಗೆ ಅಂತರ್ಜಾಲ ಸೌಲಭ್ಯ ಒದಗಿಸುವ ವಚನ ನೀಡಿತ್ತು. ಇದು ಖಾಸಗಿಯವರನ್ನು ಕುಪಿತಗೊಳಿಸಿತ್ತು.

ಮೊದಲ ಅಖಿಲ ಭಾರತ ಕಾರ್ಮಿಕ ಸಮ್ಮೇಳನ

ಪುಟ 11 ರಿಂದ

ಯಾವುದೇ ನಿರ್ಣಯವನ್ನು ಅಂಗೀಕರಿಸದಿದ್ದುದು ಅತ್ಯಂತ ದುರದೃಷ್ಟಕರ.

ಅಧ್ಯಕ್ಷೀಯ ಭಾಷಣವು ಮುಕ್ತಾಯಗೊಂಡ ನಂತರ, ದಿವಾನ್ ಚಮನ್ ಲಾಲ್ ಅವರು ಗ್ರೇಟ್ ಬ್ರಿಟನ್‌ನ ವಿವಿಧ ಕಾರ್ಮಿಕ ಸಂಸ್ಥೆಗಳಿಂದ ಬಂದ ಅಭಿನಂದನಾ ಪತ್ರಗಳು ಮತ್ತು ಟೆಲಿಗ್ರಾಫಿಕ್ ಸಂದೇಶಗಳನ್ನು ಓದಿದರು. ಡೈಲಿ ಹೆರಾಲ್ಡ್ ಸಂಪಾದಕ ಜಾರ್ಜ್ ಲ್ಯಾನ್ಸ್‌ಬರಿ ಅಧಿವೇಶನದ ಉದ್ದೇಶದ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸಿ ಸಂದೇಶ ಕಳುಹಿಸಿದ್ದರು. ಸಾರಿಗೆ ಕಾರ್ಮಿಕರ ಒಕ್ಕೂಟ, 300,000 ಕಾರ್ಮಿಕರನ್ನು ಪ್ರತಿನಿಧಿಸುವ ಐರಿಶ್ ಟ್ರೇಡ್ ಯೂನಿಯನ್ ಕಾಂಗ್ರೆಸ್, ಐರಿಶ್ ಮಹಿಳಾ ಕಾರ್ಮಿಕರ ಸಂಘ ಮತ್ತು ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡ್‌ನ ಇತರ ಕಾರ್ಮಿಕ ಸಂಘಗಳಿಂದ ಇದೇ ರೀತಿಯ ಸಂದೇಶಗಳು ಬಂದಿದ್ದವು. ಈ ಸಂದೇಶಗಳು ವರ್ಕರ್ಸ್ ವೆಲ್ಫೇರ್ ಲೀಗ್ ಫಾರ್ ಇಂಡಿಯಾ ಮೂಲಕ ಬಂದಿವೆ ಮತ್ತು ಸಕ್ಲತವಾಲಾ ಅವರ ಚಟುವಟಿಕೆಗಳ ಪರಿಣಾಮವಾಗಿ ಬಂದಿವೆ ಎಂದು ಚಮನ್ ಲಾಲ್ ಹೇಳಿದರು.

ಕರ್ನಲ್ ವೆಡ್ಜ್‌ವುಡ್ ಅವರು ಬ್ರಿಟಿಷ್ ಲೇಬರ್ ಪಾರ್ಟಿಯ ಸೌಹಾರ್ದ ಪ್ರತಿನಿಧಿಯಾಗಿ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಸಮ್ಮೇಳನವು ಅವರಿಗೆ ಅದ್ಭುತವಾದ ಗೌರವವನ್ನು ನೀಡಿತು, ಅದಕ್ಕೆ ಪ್ರತಿಯಾಗಿ ಅವರು ತಮ್ಮದೇ ಆದ ರೀತಿಯಲ್ಲಿ, ಭಾರತದ ಕಾರ್ಮಿಕರೊಂದಿಗೆ ಸೌಹಾರ್ದವನ್ನು ಅಭಿವ್ಯಕ್ತಗೊಳಿಸಿದರು.

ಅಭಿನಂದನಾ ಸಂದೇಶಗಳನ್ನು ಕೇಳಿದ ನಂತರ ಅಧಿವೇಶನ ಬ್ರಿಟಿಷ್ ಟ್ರೇಡ್ ಯೂನಿಯನ್ ಕಾಂಗ್ರೆಸ್ ಮತ್ತು ಐರಿಶ್ ಟ್ರೇಡ್ ಯೂನಿಯನ್ ಕಾಂಗ್ರೆಸ್‌ಗೆ ಸೌಹಾರ್ದ ಶುಭಾಶಯಗಳನ್ನು ತಿಳಿಸುವ ನಿರ್ಣಯವನ್ನು ಅಂಗೀಕರಿಸಿತು.

ಸಮ್ಮೇಳನದಲ್ಲಿ ಕಾರ್ಮಿಕರ ವಿವಿಧ ಸಮಸ್ಯೆಗಳ ಕುರಿತು ಚರ್ಚಿಸಲಾಯಿತು. ವಾಷಿಂಗ್ಟನ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಕಾರ್ಮಿಕ ಸಮ್ಮೇಳನವು ಭಾರತವನ್ನು ಹೊರತುಪಡಿಸಿ ಎಲ್ಲಾ ರಾಷ್ಟ್ರಗಳಿಗೆ ಎಂಟು ಗಂಟೆಗಳ ದಿನವನ್ನು ಶಿಫಾರಸು ಮಾಡಿತ್ತು. ಈ ಪ್ರಶ್ನೆಯನ್ನು ಅಧಿವೇಶನ ಸ್ಥಾಯಿ ಸಮಿತಿಯ ಪರಿಗಣನೆಗೆ ಒಪ್ಪಿಸಲು ಉದ್ದೇಶಿಸಿತು. ನಿರುದ್ಯೋಗದ ಪ್ರಶ್ನೆಯನ್ನು ಚರ್ಚಿಸುವಾಗ ಸಮ್ಮೇಳನವು ಯುರೋಪ್ ಮತ್ತು ಇತರ ದೇಶಗಳಲ್ಲಿನ ಆಯಾ ಸರ್ಕಾರಗಳಿಗೆ ನಿರುದ್ಯೋಗಿಗಳಿಗೆ ಪರಿಹಾರ ನೀಡುವಂತೆ ಅಂತಾರಾಷ್ಟ್ರೀಯ ಕಾರ್ಮಿಕ ಸಮ್ಮೇಳನವು ಶಿಫಾರಸು ಮಾಡಿದೆ, ಆದರೆ ಅಂತಹ ಯಾವುದೇ ಶಿಫಾರಸುಗಳನ್ನು ಭಾರತ ಸರ್ಕಾರಕ್ಕೆ ನೀಡಲಿಲ್ಲ. ಬಾಲ ಕಾರ್ಮಿಕ ಪದ್ಧತಿಗೆ ಕನಿಷ್ಠ ವಯಸ್ಸು ಭಾರತಕ್ಕೆ ಹನ್ನೆರಡು ಎಂದು ಶಿಫಾರಸು ಮಾಡಿದರೆ, ಇತರ ದೇಶಗಳಿಗೆ ಇದನ್ನು ಹದಿನಾಲ್ಕು ಎಂದು ನಿಗದಿಪಡಿಸಿತು, ಎನ್ನುವುದನ್ನು ಗಮನಸಿತು.

ಪಾಶ್ಚಿಮಾತ್ಯ ದೇಶಗಳಲ್ಲಿನ ಕಾರ್ಮಿಕರಿಗೆ ಹೋಲಿಸಿದಂತೆ ಭಾರತದ ಕಾರ್ಮಿಕರ ಬಗೆಗಿನ ತಾರತಮ್ಯದ ಈ ಕ್ರಮವನ್ನು ಸಮ್ಮೇಳನ ಖಂಡಿಸಿತು ಮತ್ತು ಸ್ಥಾಯಿ ಸಮಿತಿಯ ಪರಿಗಣನೆಗೆ ಈ ಕೆಳಗಿನ ವಿಷಯಗಳನ್ನು ಉಲ್ಲೇಖಿಸಲು ನಿರ್ಧರಿಸಿತು, ಭಾರತದ ಕಾರ್ಮಿಕರ ಕುಂದುಕೊರತೆಗಳ ಬಗ್ಗೆ ಸಮಗ್ರ ಜ್ಞಾಪಕ ಪತ್ರವನ್ನು (1) ಮುಷ್ಕರಗಳಿಂದ ಉಂಟಾಗುವ ಮತ್ತು ಅದರ ಪರಿಣಾಮವಾಗಿ ಉಂಟಾಗುವ ವಿಕಲಾಂಗತೆಗಳು, (2) ಗ್ರಾಚ್ಯುಟಿ ಮತ್ತು ಭವಿಷ್ಯ ನಿಧಿ ಮತ್ತು ಇತರ ಸವಲತ್ತುಗಳನ್ನು ಸ್ಥಾಪಿಸುವುದು ಮತ್ತು ಮುಟ್ಟುಗೋಲು ಹಾಕಿಕೊಳ್ಳುವುದು, (3) ಮುಷ್ಕರ ಸಮಯದಲ್ಲಿ ಮಿಲಿಟರಿ, ಸಶಸ್ತ್ರ ಪೊಲೀಸ್, ಬಾಯ್–ಸ್ಕೌಟ್ಸ್ ಮತ್ತು ಪಠಾಣ್ ಗೂಂಡಾಗಳ ಬಳಕೆ, (4) ದೈಹಿಕ ಶಿಕ್ಷೆ (5) ಕಲ್ಲಿದ್ದಲು ಗಣಿಗಳಲ್ಲಿನ ಕಾರ್ಮಿಕರ ಸ್ಥಿತಿ ಮತ್ತು (6) ವೇತನವನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಮುಂತಾದವುಗಳ ಕುರಿತು ವಿಶೇಷ ಉಲ್ಲೇಖದೊಂದಿಗೆ ಸಿದ್ಧಪಡಿಸಲು ಸ್ಥಾಯಿ ಸಮಿತಿಗೆ ವಹಿಸಲಾಯಿತು.

ಸಾಗರೋತ್ತರ ಭಾರತದ ಕಾರ್ಮಿಕರ ಮೇಲಿನ ದಬ್ಬಾಳಿಕೆಯ ವಿರುದ್ಧ ಸಮ್ಮೇಳನ ಒಂದು ನಿರ್ಣಯವನ್ನು ಅಂಗೀಕರಿಸಿತು. ಈ ಗೊತ್ತುವಳಿ ಫಿಜಿಯಲ್ಲಿ ಭಾರತದ ಕಾರ್ಮಿಕರು, ಪುರುಷರು ಮತ್ತು ಮಹಿಳೆಯರೊಂದಿನ ಕ್ರೂರ ವರ್ತನೆಯನ್ನು ಪ್ರತಿಭಟಿಸಿ ಮತ್ತು ಸಂಪೂರ್ಣ ಸ್ವತಂತ್ರ ವಿಚಾರಣೆ ನಡೆಸಬೇಕೆಂದು ಮತ್ತು ತಮ್ಮ ತಾಯಿನಾಡಿಗೆ ಮರಳಲು ಬಯಸುವವರಿಗೆ ಸರಿಯಾದ ಸೌಲಭ್ಯಗಳನ್ನು ಒದಗಿಸಬೇಕೆಂದು ಪ್ರಸ್ತಾಪಿಸಿತು. ಮತ್ತೊಂದು ನಿರ್ಣಯವು 'ಭಾರತದ ಕಲ್ಲಿದ್ದಲು–ಗಣಿಕ್ಷೇತ್ರಗಳಲ್ಲಿ ಚಾಲ್ತಿಯಲ್ಲಿರುವ ಕಾರ್ಮಿಕ ಪರಿಸ್ಥಿತಿಗಳ ವಿರುದ್ಧದ ಪ್ರತಿಭಟನೆಗಳನ್ನು ದಾಖಲಿಸಿತು, ಮತ್ತು ಅಂತಹ ಭಯಾನಕ ಪರಿಸ್ಥಿತಿಗಳನ್ನು ತೆಗೆದುಹಾಕಲು ಸರ್ಕಾರ ಮತ್ತು ಕಲ್ಲಿದ್ದಲು ಮಾಲೀಕರು ತಕ್ಷಣದ ಕ್ರಮಗಳನ್ನು ತೆಗೆದುಕೊಳ್ಳುವಂತೆ ಕರೆ ನೀಡಿತು.

ಈ ಅಧಿವೇಶನ ಸಮಯದಲ್ಲಿ, ಭಾರತದ ಕಾರ್ಮಿಕರಿಗೆ ಮತಚಲಾವಣೆಯ ಹಕ್ಕು ಇದ್ದಿಲ್ಲ. ಕಾರ್ಮಿಕರಿಗೆ ಮತಚಲಾವಣೆಯ ಹಕ್ಕನ್ನು ಕೋರಿ ನಿರ್ಣಯವನ್ನು ಅಂಗೀಕರಿಸಲಾಯಿತು, ದೇಶದ ಶಾಸಕಾಂಗ ಮಂಡಳಿಗಳಿಗೆ ಚುನಾವಣೆಯ ಮೂಲಕ, ವಿವಿಧ ಚೇಂಬರ್ಸ್ ಆಫ್ ಕಾಮರ್ಸ್ ಮತ್ತು ಮಿಲ್ ಮಾಲಿಕರ ಮತ್ತು ಪ್ಲಾಂಟರ್ಸ್ ಅಸೋಸಿಯೇಷನ್ ಗಳಿಗಿರುವಂತೆ, ಅದೇ ತತ್ವಗಳ ಮೇಲೆ ವಿಶೇಷ ಪ್ರಾತಿನಿಧ್ಯವನ್ನು ಹೊಂದುವ ಕಾರ್ಮಿಕರ ಹಕ್ಕನ್ನು ಗುರುತಿಸಲು ಕಾನೂನನ್ನು ಬದಲಾಯಿಸಬೇಕು ಎಂದು ಅಧಿವೇಶನ ಅಭಿಪ್ರಾಯಪಟ್ಟಿತು.

ಪ್ರತ್ಯೇಕ ನಿರ್ಣಯಗಳಲ್ಲಿ ಅಧಿವೇಶನ ಮಹಿಳಾ ಕಾರ್ಮಿಕರಿಗೆ ಕೆಲವು ಸೌಲಭ್ಯಗಳನ್ನು ಒದಗಿಸಬೇಕು ಎಂದು ಒತ್ತಾಯಿಸಿತು. ಕಾರ್ಮಿಕರ ವಿರುದ್ಧ ಕೈಗೊಂಡ ಶಿಸ್ತು ಮತ್ತು ದಂಡನಾತ್ಮಕ ಕ್ರಮಗಳಿಂದ ಉಂಟಾಗುವ ಸಮಸ್ಯೆಗಳೂ ಅಧಿವೇಶನದಲ್ಲಿ ಚರ್ಚೆಗೆ ಬಂದವು.

ಅಂತರರಾಷ್ಟ್ರೀಯ ಕಾರ್ಮಿಕ ಸಮ್ಮೇಳನಕ್ಕೆ ಪ್ರಾತಿನಿಧ್ಯ ಕುರಿತಂತೆ ನಿರ್ಣಯವನ್ನು ಎಲ್.ಆರ್. ಟೈರ್ಸಿ ಮಂಡಿಸಿದರು. ನಿರ್ಣಯವು ಹೀಗೆ ಹೇಳಿತು : "ಮುಂದಿನ ವರ್ಷ ಜಿನೇವಾದಲ್ಲಿ ಲೀಗ್ ಆಫ್ ನೇಶನ್ಸ್ ಒಡಂಬಡಿಕೆ ಅಡಿಯಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಕಾರ್ಮಿಕ ಸಮ್ಮೇಳನದಲ್ಲಿ ಭಾರತದ ಕಾರ್ಮಿಕರನ್ನು ಪ್ರತಿನಿಧಿಸಲು ಈ ಅಧಿವೇಶನ ಈ ಕೆಳಗಿನ ಮಹನೀಯರನ್ನು ನಾಮನಿರ್ದೇಶನ ಮಾಡುತ್ತದೆ: (1) ಪ್ರಾತಿನಿಧಿಕ ಪ್ರತಿನಿಧಿ: ಲಾಲಾ ಲಜಪತ್ ರಾಯ್, ಅಧ್ಯಕ್ಷ, ಟ್ರೇಡ್ ಯೂನಿಯನ್ ಕಾಂಗ್ರೆಸ್, (2) ಸಲಹೆಗಾರರು: ಬಿ.ಪಿ.ವಾಡಿಯಾ ಮತ್ತು ಡಿ.ಚಮನ್ ಲಾಲ್, ಮತ್ತು ಕೃಷಿ ಹಿತಾಸಕ್ತಿಗಳನ್ನು ಪ್ರತಿನಿಧಿಸಲು ಸಲಹೆಗಾರರ ಹೆಸರನ್ನು ಸೇರಿಸಲು ಅಧ್ಯಕ್ಷರಿಗೆ ಅಧಿಕಾರ ನೀಡಲಾಗುತ್ತದೆ, ಇತ್ಯಾದಿ. ಇದಲ್ಲದೆ; ಈ ಅಧಿವೇಶನ ಎನ್.ಎಂ. ಜೋಶಿಯನ್ನು ಲೀಗ್ ಒಡಂಬಡಿಕೆಯಡಿಯಲ್ಲಿ ರಚಿಸಿದ ವಿಚಾರಣಾ ಆಯೋಗದ ಸಮಿತಿಗೆ ನಾಮನಿರ್ದೇಶನ ಮಾಡುತ್ತದೆ.."

ಅಧಿವೇಶನ ಮತ್ತೊಂದು ನಿರ್ಣಯದ ಮೂಲಕ ಇ.ಜಿ. ಹಾರ್ನಿಮನ್‌ರವರು ಕಾರ್ಮಿಕರ ಕುರಿತು ಮಾಡಿದ ಅಮೂಲ್ಯ ಸೇವೆಗಳ ಬಗ್ಗೆ ಆಳವಾದ ಗೌರವವನ್ನು ಮತ್ತು ಕೃತಜ್ಞತೆಯನ್ನು ವ್ಯಕ್ತಪಡಿಸಿತು. ಮತ್ತು ಅವರ ಸ್ವಾತಂತ್ರ್ಯದ ಮೇಲೆ ಹೇರಿದ ಅನ್ಯಾಯದ ಮತ್ತು ಅನಿಯಂತ್ರಿತ ತಡೆಯನ್ನು ಖಂಡಿಸಿತು ಮತ್ತು ಅದನ್ನು ತಕ್ಷಣ ತೆಗೆದುಹಾಕುವಂತೆ ಒತ್ತಾಯಿಸಿತು

ಅಧಿವೇಶನ ಮತ್ತೊಂದು ನಿರ್ಣಯವನ್ನು ಅಂಗೀಕರಿಸಿ ಲಂಡನ್‌ನ ಕಾರ್ಮಿಕರ ವೆಲ್ಫೇರ್ ಲೀಗ್ ಮತ್ತು ಶಾಪುರ್ಜಿ ಸಕ್ಲತವಾಲಾ ಭಾರತದ ಕಾರ್ಮಿಕರ ಪರವಾಗಿ ಮಾಡಿದ ಕಾರ್ಯದ ಬಗ್ಗೆ ಕೃತಜ್ಞತೆಯನ್ನು ದಾಖಲಿಸಿತು. ಮತ್ತು ಭಾರತದ ಕಾರ್ಮಿಕರ ಹಿತಾಸಕ್ತಿಗಳ ಬಗ್ಗೆ ಇಂಗ್ಲೆಂಡ್‌ನಲ್ಲಿ ಪ್ರಾತಿನಿಧ್ಯಕ್ಕಾಗಿ ಹೆಚ್ಚು ಸಹಕಾರ ನೀಡುವ ಉದ್ದೇಶದಿಂದ ಲೀಗ್‌ನೊಂದಿಗೆ ಸಂವಹನ ನಡೆಸಲು ಸ್ಥಾಯಿ ಸಮಿತಿಗೆ ಅಧಿಕಾರ ನೀಡಿತು.

ಮತ್ತೊಂದು ನಿರ್ಣಯದ ಮೂಲಕ ಅಧಿವೇಶನ ಲಂಡನ್‌ನ 'ಡೈಲಿ ಹೆರಾಲ್ಡ್' ಅನ್ನು ನಿಷೇಧಿಸುವ ಸರ್ಕಾರದ ಕ್ರಮದ ವಿರುದ್ಧ ದೃಢವಾದ ಪ್ರತಿಭಟನೆಯನ್ನು ದಾಖಲಿಸಿತು.

ಅಧಿವೇಶನ ಮುಕ್ತಾಯದ ನಂತರ, ಬ್ಯಾಪ್ಟಿಸ್ಟಾ ನೇತೃತ್ವದ ನಿಯೋಗ ಮುಂಬಯಿ ರಾಜ್ಯಪಾಲರನ್ನು ಭೇಟಿಯಾಗಿ ಅವರಿಗೆ ಜ್ಞಾಪಕ ಪತ್ರವನ್ನು ಸಲ್ಲಿಸಿತು.

ಪದಾಧಿಕಾರಿಗಳು ಮತ್ತು ಸ್ಥಾಯಿ ಸಮಿತಿಯ ಚುನಾವಣೆ

ಮುಂದಿನ ವರ್ಷ ಎಐಟಿಯುಸಿಯ ಚಟುವಟಿಕೆಗಳನ್ನು ನಡೆಸಲು ಅಧಿವೇಶನ ಸ್ಥಾಯಿ ಸಮಿತಿಯನ್ನು ಆಯ್ಕೆ ಮಾಡಿತು. ಲಾಲಾ ಲಜಪತ್ ರಾಯ್ ಮತ್ತು ಜೋಸೆಫ್ ಬ್ಯಾಪ್ಟಿಸ್ಟಾ ಕ್ರಮವಾಗಿ ಎಐಟಿಯುಸಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿ ಆಯ್ಕೆಯಾದರು. ಈ ಸ್ಥಾಯಿ ಸಮಿತಿಯ ಮೊದಲ ಸಭೆ 1920 ರ ನವೆಂಬರ್ 2 ರಂದು ಮತ್ತು ಎರಡನೇ ಸಭೆ 5 ಏಪ್ರಿಲ್ 1921 ರಂದು ನಡೆಯಿತು. ಎರಡನೇ ಸಭೆಯು ದಿವಾನ್ ಚಮನ್ ಲಾಲ್ ಅವರನ್ನು ಎಐಟಿಯುಸಿಯ ಮೊದಲ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆ ಮಾಡಿತು ಮತ್ತು ಅವರಿಗೆ ರೂ. 500. ಮಾಸಿಕ ವೇತನವನ್ನು ನಿಗದಿಮಾಡಿತು.

ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ಕಾರ್ಮಿಕರಿಗೆ ಪ್ರಣಾಳಿಕೆ ಹೊರಡಿಸಿತು. ಭಾರತದ ಕಾರ್ಮಿಕರನ್ನು ಉದ್ದೇಶಿಸಿ ಈ ಮೊದಲ ಪ್ರಣಾಳಿಕೆಯು ಕಾರ್ಮಿಕರಿಗೆ ಯಾವುದೇ ಕ್ರಾಂತಿಕಾರಿ ಕರೆಯನ್ನು ಒಳಗೊಂಡಿರಲಿಲ್ಲ.

ವಿವಿಧ ವರ್ಗದ ಕಾರ್ಮಿಕರ ಯೂನಿಯನ್ ಗಳು ಎಐಟಿಯುಸಿಗೆ ಸಂಯೋಜನೆ ಹೊಂದಿದ್ದವು ಅಥವಾ ಸಹಾನುಭೂತಿ ಹೊಂದಿದ್ದವು. ಎಂದು ತಿಳಿದುಬರುತ್ತದೆ. ಸರ್ಕಾರಿ ನೌಕರರ ಸಂಘಗಳು ಸಹ ಸಂಯೋಜನೆ ಹೊಂದಿದ್ದವು ಅಥವಾ ಅದರೊಂದಿಗೆ ಮೈತ್ರಿ ಮಾಡಿಕೊಂಡಿದ್ದವು. ಸಹಜವಾಗಿ, ಅನೇಕ ಯೂನಿಯನ್ ಗಳು ಆರಂಭದಲ್ಲಿ ದೂರ ಉಳಿದಿದ್ದವು, ಆದರೆ ತರುವಾಯ ಹತ್ತಿರ ಬಂದು ಎಐಟಿಯುಸಿಗೆ ಸಂಯೋಜನೆ ಹೊಂದಿದವು.









ಮ್ಯಾನ್ಮಾರ್: ಮಿಲಿಟರಿ ದಮನದ ವಿರುದ್ಧ ಜನತೆಯ ಆಕ್ರೋಶ

ಕಳೆದ ಎರಡು ವಾರಗಳಲ್ಲಿ ಜನರ ವ್ಯಾಪಕ ಪ್ರತಿಭಟನಾ ಪ್ರದರ್ಶನಗಳಿಂದ, ಮ್ಯಾನ್ಮಾರ್ ಮಿಲಿಟರಿ ಸರಕಾರವು ಯಾವುದೇ ಜನವಿಭಾಗದ ಬೆಂಬಲವಿಲ್ಲದೆ ಒಂಟಿಯಾಗಿದೆ ಎಂಬುದು ಸ್ಪಷ್ಟವಾಗಿದೆ. ನೂರಾರು ಜನರನ್ನು ಬಂಧಿಸಲಾಗಿದೆ. ಪ್ರದರ್ಶನಗಳ ಮೇಲೆ ಲಾಠಿಚಾರ್ಜ್, ಜಲಫಿರಂಗಿ ದಾಳಿ, ಗೋಳಿಬಾರು ಮಾಡಲಾಗುತ್ತಿದೆ. ಇವೆಲ್ಲದಕ್ಕೆ ಬೆದರದೆ ಮ್ಯಾನ್ಮಾರ್ ಜನ ಮಿಲಿಟರಿ ಸರಕಾರದ ವಿರುದ್ಧ ಶಾಂತಿಯುತ ಪ್ರತಿಭಟನೆಗಳನ್ನು ನಡೆಸುತ್ತಿದ್ದಾರೆ. ಮಿಲಿಟರಿ ಸರಕಾರದ ಈ ಕ್ರೂರ ದಮನ ಕ್ರಮಗಳಿಗೆ ಮಣಿಯದೆ ಸರಕಾರಿ ನೌಕರರು, ರೈಲ್ವೇ, ಆರೋಗ್ಯ, ವಿದ್ಯುತ್ ಕ್ಷೇತ್ರದ ಉದ್ಯೋಗಿಗಳು ಭಾರೀ ಸಂಖ್ಯೆಯಲ್ಲಿ ಸಾಮೂಹಿಕ ಪ್ರತಿಭಟನೆಗಳಲ್ಲಿ ಭಾಗವಹಿಸಿದ್ದು, ಈ ಕ್ಷೇತ್ರಗಳ ಉದ್ಯೋಗಿಗಳು ತಿರುಗಿ ಬಿದ್ದರೆ ಮಿಲಿಟರಿಗೆ ಸರಕಾರ ನಡೆಸುವುದೇ ಕಷ್ಟವಾಗಬಹುದು.

****

ಮ್ಯಾನ್ಮಾರ್ (ಬರ್ಮಾ) ನಲ್ಲಿ ಇತ್ತೀಚೆಗೆ ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ಸರಕಾರವನ್ನು ಉರುಳಿಸಿ ಮಿಲಿಟರಿ ಅಧಿಕಾರ ಕಸಿದುಕೊಂಡಿದ್ದರ ವಿರುದ್ಧ ಜನ ದಂಗೆ ಎದ್ದಿದ್ದಾರೆ. ಪ್ರಜಾಸತ್ತೆಯ ಕ್ರೂರ ದಮನವನ್ನು ಬಲವಾಗಿ ವಿರೋಧಿಸಿ, ಕಳೆದ ಹಲವು ದಿನಗಳಿಂದ ಸಮಾಜದ ಹೆಚ್ಚು ಕಡಿಮೆ ಎಲ್ಲ ಜನವಿಭಾಗಗಳು ಬೀದಿಗಿಳಿದಿದ್ದಾರೆ. ನವೆಂಬರ್ 2020 ರಲ್ಲಿ ನಡೆದ ಚುನಾವಣೆಗಳ ನಂತರ ಹೊಸ ಪಾರ್ಲಿಮೆಂಟಿನ ಸಭೆ ಆರಂಭವಾಗಬೇಕಿದ್ದ ಫೆಬ್ರುವರಿ 1 ರಂದು ತತ್ಮದಾವ್ (ಮ್ಯಾನ್ಮಾರ್ ಮಿಲಿಟರಿ) ಕ್ಷಿಪ್ರದಂಗೆ ನಡೆಸಿ ಅಧಿಕಾರ ಕಸಿದುಕೊಂಡಿತು. ಚುನಾವಣೆಯಲ್ಲಿ ಅಂಗ್ ಸಾನ್ ಸುಕಿ ಅವರ ನಾಯತ್ವದ ನೇಶನಲ್ ಲೀಗ್ ಫಾರ್ ಡೆಮೊಕ್ರಸಿ (ಎನ್.ಎಲ್.ಡಿ) ಭಾರೀ ಬಹುಮತದಿಂದ ಮರು ಆಯ್ಕೆಯಾಗಿತ್ತು. ಚುನಾವಣಾ ಫಲಿತಾಂಶಗಳು ಕಾನೂನುಬಾಹಿರ ಎಂದು ಘೋಷಿಸಿದ ಮಿಲಿಟರಿ ಅಧ್ಯಕ್ಷ ವಿನ್ ಮಿಂಟ್ ಮತ್ತು ಸ್ಟೇಟ್ ಕೌನ್ಸಲರ್ (ಪ್ರಧಾನಿಯಂತಹ ಹುದ್ದೆ) ಅಂಗ್ ಸಾನ್ ಸುಕಿ ಅವರನ್ನು ಮತ್ತು ಹಲವಾರು ಎನ್.ಎಲ್.ಡಿ ನಾಯಕರು ಮತ್ತು ಕಾರ್ಯಕರ್ತರುಗಳನ್ನು ಬಂಧಿಸಿದೆ.

ಮಿಲಿಟರಿ ಕ್ಷಿಪ್ರದಂಗೆಯಾಗಲಿ, ಸರಕಾರಗಳಾಗಲಿ ಮ್ಯಾನ್ಮಾರ್ ಗೆ ಹೊಸದಲ್ಲ. 1962ರಲ್ಲಿ ಜನರಲ್ ನೇವಿನ್ ನಾಯಕತ್ವದಲ್ಲಿ ಅಧಿಕಾರ ಕಸಿದುಕೊಂಡ ನಂತರ ಹಲವು ದಶಕಗಳ ಕಾಲ ಮಿಲಿಟರಿ ಆಡಳಿತ ನಡೆಸಿದೆ. ಪ್ರಜಾಪ್ರಭುತ್ವಕ್ಕಾಗಿ ನಡೆದ ಚಳುವಳಿ 1981ರಲ್ಲಿ ಸಫಲವಾದರೂ, ಮತ್ತೆ ಅದನ್ನು ಮಿಲಿಟರಿ ದಮನಿಸಿತು. ಅದರ ನಾಯಕಿ ಅಂಗ್ ಸಾನ್ ಸುಕಿ ಅವರನ್ನು 16 ವರ್ಷಗಳ ಕಾಲ ಗೃಹ ಬಂಧನದಲ್ಲಿರಿಸಿತು.

ಹಲವು ದಶಕಗಳ ದೀರ್ಘ ಕಷ್ಟಕರ ಹೋರಾಟದ ನಂತರ ಮಿಲಿಟರಿ ಕೆಲವು ಅಧಿಕಾರಗಳನ್ನು ಬಿಟ್ಟುಕೊಟ್ಟು 2008ರಲ್ಲಿ ರಚಿಸಿದ ಸಂವಿಧಾನದ ಪ್ರಕಾರ ಒಂದು ಹೈಬ್ರಿಡ್ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಜಾರಿಗೆ ತಂದಿತು. ಈ ಹೈಬ್ರಿಡ್ ವ್ಯವಸ್ಥೆಯಲ್ಲಿ ಮಿಲಿಟರಿ ಪ್ರಮುಖ ಅಧಿಕಾರಗಳನ್ನು ತಾನೇ ಇಟ್ಟುಕೊಂಡಿತ್ತು. ಪಾರ್ಲಿಮೆಂಟಿನ ಎರಡೂ ಸದನಗಳಲ್ಲಿ ಕಾಲು ಭಾಗದ ಸೀಟುಗಳನ್ನು ಮಿಲಿಟರಿ ನಾಮನಿರ್ದೇಶನಕ್ಕೆ ಮೀಸಲಾಗಿಟ್ಟಿತು. ರಕ್ಷಣೆ ಮತ್ತು ಗೃಹ ಮಂತ್ರಿ ಹುದ್ದೆ ಹಾಗೂ ಇತರ ನಿರ್ಣಾಯಕ ಹುದ್ದೆಗಳು ಮಿಲಿಟರಿಯವರಿಗೆ ಸೀಮಿತವಾಗಿದ್ದವು.

2015ರಲ್ಲಿ ಮೊದಲ ಬಾರಿಗೆ ಎನ್.ಎಲ್.ಡಿ ಪಾರ್ಲಿಮೆಂಟ್ ಚುನಾವಣೆಯಲ್ಲಿ ಸ್ಪರ್ಧಿಸಿ, ಎರಡೂ ಸದನಗಳಲ್ಲಿ ಶೇ. 80ರಷ್ಟು (ಮಿಲಿಟರಿಗೆ ಮೀಸಲಾಗಿರದವು) ಸೀಟುಗಳನ್ನು ಗೆದ್ದುಕೊಂಡಿತು. ಸು ಕಿ ಅವರು ಪತಿ ವಿದೇಶಿ ನಾಗರಿಕರಾದ್ದರಿಂದ ಅವರು ಸಂವಿಧಾನದ ಪ್ರಕಾರ ಸರಕಾರದ ಮುಖ್ಯಸ್ಥರಾಗುವುದು ಅಸಾಧ್ಯವಾದ್ದರಿಂದ, ಅವರನ್ನು ಸ್ಟೇಟ್ ಕೌನ್ಸಲರ್ (ಪ್ರಧಾನಿಗೆ ಸಮನಾದ ಹುದ್ದೆ) ಆಗಿ ನೇಮಿಸಲಾಯಿತು.

ನವೆಂಬರ್ 2020ರಲ್ಲಿ ನಡೆದ ಚುನಾವಣೆಯಲ್ಲಿ ಎನ್.ಎಲ್.ಡಿ ಕೆಳಸದನ (ಪ್ರತಿನಿಧಿ ಸಭೆ) ದಲ್ಲಿ 310ರಲ್ಲಿ 258 ಮತ್ತು ಮೇಲ್ಸದನ (ರಾಷ್ಟ್ರೀಯತೆಗಳ ಸಭೆ) ದಲ್ಲಿ 168ರಲ್ಲಿ 138 ಸೀಟುಗಳನ್ನು ಗೆದ್ದು, ತನ್ನ ಸ್ಥಾನವನ್ನು ಇನ್ನಷ್ಟು ಉತ್ತಮ ಪಡಿಸಿಕೊಂಡಿತು. ಮಿಲಿಟರಿ ಬೆಂಬಲದ ಯು.ಎಸ್.ಡಿ.ಪಿ ಪಕ್ಷ ಕೆಳಸದನದಲ್ಲಿ ಕೇವಲ 26 ಸೀಟು ಮತ್ತು ಶೇ. 5.9 ಮತ ಗಳಿಸಿತು.

ಈ ಫಲಿತಾಂಶದಿಂದ ಹತಾಶವಾದ ಮಿಲಿಟರಿ, ಚುನಾವಣೆಯಲ್ಲಿ ತೀವ್ರ ಅಕ್ರಮಗಳು ನಡೆದಿವೆ ಎಂದು ಆಪಾದಿಸಿತು. ಅದರ ಬೆನ್ನಲ್ಲೇ ಕ್ಷಿಪ್ರದಂಗೆ ನಡೆಯಿತು. ಸಂವಿಧಾನದಲ್ಲಿ ಇರುವ ಅಂಶವನ್ನು ಬಳಸಿಕೊಂಡು ಒಂದು ವರ್ಷದ ತುರ್ತು ಪರಿಸ್ಥಿತಿಯನ್ನು ಘೋಷಿಸಿತು. ಒಂದು ವರ್ಷದ ನಂತರ ಚುನಾವಣೆ ನಡೆಸಲಾಗುವುದು. ಅಲ್ಲಿಯವರೆಗೆ ಮಿಲಿಟರಿ ಮುಖ್ಯಸ್ಥ ಜನರಲ್ ಮಿನ್ ಔಂಗ್ ಹ್ಲಿಯಂಗ್ ಸರಕಾರದ ಮುಖ್ಯಸ್ಥರಾಗಿ ಆಡಳಿತ ನಡೆಸುತ್ತಾರೆ ಎಂದು ಮಿಲಿಟರಿ ಘೋಷಿಸಿತು.

ಈ ಮಿಲಿಟರಿ ಕ್ಷಿಪ್ರದಂಗೆ ಯಾತಕ್ಕಾಗಿ ? ಉನ್ನತ ಮಿಲಿಟರಿ ಅಧಿಕಾರಿಗಳು ದೇಶದ ವ್ಯಾಪಾರಿ ಹಿತಾಸಕ್ತಿಗಳ ಮತ್ತು ಬಾಲಬಡುಕರ ಜಾಲವನ್ನು ದಶಕಗಳಿಂದ ಕಟ್ಟಿದ್ದಾರೆ. ಮರಮಟ್ಟು, ರತ್ನಗಳು ಮತ್ತು ಗಣಿ ಸಂಪನ್ಮೂಲಗಳ ಲಾಭದಾಯಕ ಕ್ಷೇತ್ರಗಳಲ್ಲಿ ಹಾಲಿ ಮತ್ತು ಮಾಜಿ ಮಿಲಿಟರಿ ಉನ್ನತ ಅಧಿಕಾರಿಗಳ ಕಂಪನಿಗಳು ಅವ್ಯಾಹತವಾಗಿ ಲೂಟಿ ಹೊಡೆಯುತ್ತಿವೆ.

ಈ ಚುನಾವಣೆಯ ಹೊತ್ತಿಗೆ ತಾವು ಬೆಂಬಲಿಸಿದ ಯು.ಎಸ್.ಡಿ.ಪಿ ಪಕ್ಷ ಬಲಗಳಿಸಿಕೊಂಡು ಎನ್.ಎಲ್.ಡಿ ಮತ್ತು ಸು ಕಿ ಅವರಿಗೆ ಸವಾಲು ಎಸಗಲು ಸಮರ್ಥವಾಗಿರುತ್ತದೆ ಎಂದು ಅವರು ಭಾವಿಸಿದ್ದರು. ಆದರೆ ಅದು ಆಗಲಿಲ್ಲ, ಅಧ್ಯಕ್ಷ ಮತ್ತು ಎರಡನೇ ಉಪಾಧ್ಯಕ್ಷ ಆಗಬೇಕಾದರೆ ಮೂರನೇ ಎರಡರಷ್ಟು (ಶೇ. 67) ಬಹುಮತ ಇರಬೇಕು ಎಂಬ ಕಠಿಣ ಷರತ್ತು ಗಳಿಂದ ಸಹ ಎನ್.ಎಲ್.ಡಿ ಕೈಗೆ (ಸೀಮಿತವಾದರೂ) ಅಧಿಕಾರ ಹೋಗುವುದನ್ನು ತಪ್ಪಿಸಲು ಸಾಧ್ಯವಾಗಲಿಲ್ಲ.2015 ಮತ್ತು 2020ರಲ್ಲೂ ಮಿಲಿಟರಿಯೇತರ ಸೀಟುಗಳಲ್ಲಿ ಎನ್.ಎಲ್.ಡಿ ಶೇ. 80 ಕ್ಕಿಂತ ಹೆಚ್ಚು ಸೀಟುಗಳನ್ನು ಗೆದ್ದಿತು.

ಮಿಲಿಟರಿ ಮತ್ತು ಅದರ ಜೊತೆ ಶಾಮೀಲಾಗಿ ರಾಜಕೀಯ ಮತ್ತು ಆರ್ಥಿಕ ಪರಮಾಧಿಕಾರವನ್ನು ಚಲಾಯಿಸುತ್ತಿದ್ದ ಪಟ್ಟಭದ್ರ ಹಿತಾಸಕ್ತಿಗಳಿಗೆ, ಎನ್.ಎಲ್.ಡಿ ಮತ್ತು ಸು ಕಿ ಅವರು ಚುನಾವಣೆಗಳ ಮೂಲಕ ಸವಾಲೊಡ್ಡುವುದು ಅಪಥ್ಯವಾಗಿತ್ತು.

ಕಳೆದ ಎರಡು ವಾರಗಳಲ್ಲಿ ಜನರ ವ್ಯಾಪಕ ಪ್ರತಿಭಟನಾ ಪ್ರದರ್ಶನಗಳಿಂದ, ಮಿಲಿಟರಿ ಸರಕಾರವು ಜನತೆಯ ಯಾವುದೇ ವಿಭಾಗದ ಬೆಂಬಲವಿಲ್ಲದೆ ಒಂಟಿಯಾಗಿದೆ ಎಂಬುದು ಸ್ಪಷ್ಟವಾಗಿದೆ. ನೂರಾರು ಜನರನ್ನು ಬಂಧಿಸಲಾಗಿದೆ. ಪ್ರದರ್ಶನಗಳ ಮೇಲೆ ಲಾಠಿಚಾರ್ಜ್, ಜಲಫಿರಂಗಿ ದಾಳಿ, ಗೋಳಿಬಾರು ಮಾಡಲಾಗುತ್ತಿದೆ. ಇವೆಲ್ಲದಕ್ಕೆ ಬೆದರದೆ ಮ್ಯಾನ್ಮಾರ್ ಜನ ಮಿಲಿಟರಿ ಸರಕಾರದ ವಿರುದ್ಧ ಶಾಂತಿಯುತ ಪ್ರತಿಭಟನೆಗಳನ್ನು ನಡೆಸುತ್ತಿದ್ದಾರೆ. ಮಿಲಿಟರಿ ಸರಕಾರದ ಈ ಕ್ರೂರ ದಮನ ಕ್ರಮಗಳಿಗೆ ಮಣಿಯದೆ ಸರಕಾರಿ ನೌಕರರು, ರೈಲ್ವೇ, ಆರೋಗ್ಯ, ವಿದ್ಯುತ್ ಕ್ಷೇತ್ರದ ಉದ್ಯೋಗಿಗಳು ಭಾರೀ ಸಂಖ್ಯೆಯಲ್ಲಿ ಸಾಮೂಹಿಕ ಪ್ರತಿಭಟನೆಗಳಲ್ಲಿ ಭಾಗವಹಿಸಿದ್ದು, ಈ ಕ್ಷೇತ್ರಗಳ ಉದ್ಯೋಗಿಗಳು ತಿರುಗಿ ಬಿದ್ದರೆ ಮಿಲಿಟರಿಗೆ ಸರಕಾರ ನಡೆಸುವುದೇ ಕಷ್ಟವಾಗಬಹುದು.

ಮ್ಯಾನ್ಮಾರ್ ಜನತೆಯ ಈ ಶಾಂತಿಯುತ ಪ್ರತಿಭಟನೆಗಳಿಗೆ ಭಾರತದ ಮತ್ತು ಜಗತ್ತಿನ ಜನರ ಸೌಹಾರ್ದ ಬೆಂಬಲ ಅಗತ್ಯ. ಜನರ ಪ್ರಜಾಸತ್ತಾತ್ಮಕ ಆಯ್ಕೆಯನ್ನು ಮನ್ನಿಸದ ಮಿಲಿಟರಿ ಸರಕಾರವನ್ನು ವಿರೋಧಿಸಬೇಕಾಗಿದೆ. ಭಾರತ ಸರಕಾರ ಸೇರಿದಂತೆ ಜಗತ್ತಿನ ಸರಕಾರಗಳು, ಜಾಗತಿಕ ಸಂಸ್ಥೆಗಳು ಪ್ರಜಾಸತ್ತೆಯ ಪುನಃಸ್ಥಾಪನೆಗೆ ಒತ್ತಾಯಿಸಬೇಕಿದೆ. ಈ ವಿದ್ಯಮಾನಗಳನ್ನು ಭೂಗೋಳ–ರಾಜಕೀಯ ವ್ಯೂಹದ ಅಥವಾ ಮ್ಯಾನ್ಮಾರ್ ನಲ್ಲಿ ಭಾರತದ ಆರ್ಥಿಕ–ಮಿಲಿಟರಿ–ರಾಜಕೀಯ ಹಿತಾಸಕ್ತಿಯ ದೃಷ್ಟಿಯಿಂದ, ನೋಡದೆ, ಭಾರತ ಸರಕಾರ ಸಹ ಮ್ಯಾನ್ಮಾರ್ ಜನತೆಯ ಜತೆ ನಿಲ್ಲಬೇಕಿದೆ.

ಕದನ ಕಣ : ದೆಹಲಿ ಗಡಿಗಳಲ್ಲಿ ರೈತರೊಂದಿಗೆ

ಪುಟ 16 ರಿಂದ

(ಫೆ. 20 ರಂದು ಬಿಡುಗಡೆಯಾಗುವ ಪುಸ್ತಕದ ಬ್ಲರ್ಬಿನಿಂದ)

ಹಾಸನದ ಗೆಳೆಯ ಎಚ್ ಅರ್ ನವೀನ್‌ಕುಮಾರ್ ಮತ್ತು ಮೈಸೂರಿನ ಜಗದೀಶ್ ಸೂರ್ಯ ಜೊತೆಯಾಗಿ ದೆಹಲಿಗೆ ಬರುವ ಸುದ್ದಿ ತಿಳಿಯುತ್ತಿದ್ದಂತೆ ನನಗೆ ಬಹಳ ಸಂತೋಷವಾದ್ದಕ್ಕೆ ಎರಡು ಮುಖ್ಯ ಕಾರಣಗಳಿದ್ದುವು. ಮೊದಲನೆಯದ್ದೆಂದರೆ, ಜನಪರವಾಗಿ ಮಾತ್ರ ಯೋಚಿಸಬಲ್ಲ ಈ ಗೆಳೆಯನೊಳಗೊಬ್ಬ ಕಲಾವಿದ ಇದ್ದಾನೆ. ಆತ ಒಳ್ಳೆಯ ಛಾಯಾಚಿತ್ರಗ್ರಾಹಕನೂ ಹೌದು. ಕಲಾವಿದರಿಗೆ, ಛಾಯಾಚಿತ್ರಗ್ರಾಹಕರಿಗೆ ನಮ್ಮ ಸಾಮಾನ್ಯ ಕಣ್ಣಿಗೆ ಕಾಣದ್ದೆಲ್ಲ ಕಾಣುತ್ತಿರುತ್ತದೆ. ಹಾಗಾಗಿ ಈತ ಏನಾದರೂ ಹೊಸತು ಕಂಡು ಹುಡುಕಿ ನಮಗೆಲ್ಲ ಹೇಳುತ್ತಾನೆ ಎಂಬ ನಿರೀಕ್ಷೆ. ಎರಡನೆಯದು, ಉತ್ತರ ಭಾರತದಲ್ಲಿ ನಡೆಯುತ್ತಿರುವ ರೈತರ ಐತಿಹಾಸಿಕ ಹೋರಾಟದೊಂದಿಗೆ ಕರ್ನಾಟಕ ಪ್ರಾಂತ ರೈತ ಸಂಘವೂ ಸೇರಿಕೊಂಡಂತಾಯಿತು. ಪ್ರಸ್ತುತ ಪುಸ್ತಕವನ್ನು ಓದಿದಾಗ, ನನಗಾದ ಸಂತೋಷವು ಆಕಸ್ಮಿಕವಲ್ಲ ಎಂಬುದು ಖಚಿತವಾಯಿತು. ನವೀನ್ ಚಳುವಳಿಯನ್ನು ಎದೆಗಪ್ಪಿಕೊಂಡು ಈ ಪುಸ್ತಕವನ್ನು ಬರೆದಿದ್ದಾರೆ. ಬಹುಶ: ಅವರು ತೆಗೆದಿರುವ ಛಾಯಾಚಿತ್ರಗಳನ್ನು ಬಣ್ಣದಲ್ಲಿ ಪ್ರಕಟಿಸಿದರೆ ನಮಗೆ ಇನ್ನೊಂದು ಲೋಕ ಕಂಡೀತು.

ಈ ಪುಟ್ಟ ಪುಸ್ತಕದ ಮಹತ್ವ ತಿಳಿಯಬೇಕಾದರೆ ಈಗ ನಡೆಯುತ್ತಿರುವ ರೈತ ಚಳುವಳಿಯ ಬಗೆಗೆ ಮುಖ್ಯವಾಹಿನಿಯ ಮಾಧ್ಯಮಗಳು ಮಾಡುವ ವರದಿಗಳನ್ನು ಗಮನಿಸಬೇಕು. ಭಾರತೀಯ ಪ್ರಜಾಪ್ರಭುತ್ವದ ಕೇಂದ್ರವಾದ ದೆಹಲಿಯ ಸಂಸತ್ ಭವನದಿಂದ ಸುಮಾರು 40 ಕಿಮೀ ದೂರದಲ್ಲಿ ಐದು ಕಡೆಗಳಲ್ಲಿ ಲಕ್ಷಾಂತರ ರೈತರು ಭಾರತದ ಬಾವುಟ ಹಿಡಿದು ಬೀಡು ಬಿಟ್ಟಿದ್ದರೂ ಮಾರಿಕೊಂಡ ಮಾಧ್ಯಮಗಳ ಕಣ್ಣಿಗೆ ಇವು ಬೀಳುವುದೇ ಇಲ್ಲ. ಬಿದ್ದರೂ ಅವಕ್ಕೆ ಹೋರಾಟವನ್ನು ಅರ್ಥಮಾಡಿಕೊಳ್ಳುವ ಯೋಗ್ಯತೆಯಿಲ್ಲ. ಹೀಗಾಗಿ ನಮಗೆ ನವೀನ್ ಅಂತವರು ಮಾಡುವ ವರದಿ ಮತ್ತು ಬರೆಯುವ ಪುಸ್ತಕ ಬಹಳ ಮುಖ್ಯವಾಗುತ್ತದೆ. ಅವು ಚಳುವಳಿಯನ್ನು ಹೃದಯದ ಭಾಷೆಯಲ್ಲಿ ಮಂಡಿಸುತ್ತವೆ. ಕನ್ನಡದಲ್ಲೊಂದು ಪುಸ್ತಕ ಪ್ರಕಟಿಸುವುದರ ಮೂಲಕ ನವೀನ್ ಹೋರಾಟದೊಂದಿಗೆ ಕರ್ನಾಟಕವನ್ನೂ ಸೇರಿಸಿದ್ದಾರೆ.

– ಡಾ. ಪುರುಷೋತ್ತಮ ಬಿಳಿಮಲೆ

ಕಮ್ಯುನಿಸಂ ಅಂದರೇನು?–ಮೊದಲ ಕೆಂಪು ಪುಸ್ತಕ

ಪುಟ 16 ರಿಂದ

ಅಂದರೇನು?" ಎಂಬುದು. ಒಂದು ಪ್ರಶ್ನೆಯ ಉತ್ತರ ಇನ್ನೊಂದು ಪ್ರಶ್ನೆಯನ್ನು ಎಬ್ಬಿಸುತ್ತಾ ಅದಕ್ಕೆ ಉತ್ತರಿಸುತ್ತಾ ಹೋಗುವ ಈ ಪುಸ್ತಕದ ಶೈಲಿ ಮೊದಲ ಓದುಗರಿಗೆ ಆಕರ್ಷಕವಾಗಿದೆ. ಇದು ಕಮ್ಯುನಿಸಂ ನಲ್ಲಿ ಆಸಕ್ತಿ ಇರುವವರು ಮತ್ತು ಕಮ್ಯುನಿಸ್ಟ್ ಚಳುವಳಿಗೆ ಪ್ರವೇಶಿಸಿರುವವರು ಓದಬಹುದಾದ ಮೊದಲ 'ಕೆಂಪು ಪುಸ್ತಕ'. ಇದನ್ನು ಓದಿದರೆ ಕಮ್ಯುನಿಸ್ಟ್ ಪ್ರಣಾಳಿಕೆ ಓದಿ ಅರ್ಥ ಮಾಡಿಕೊಳ್ಳಲು ಸಹಾಯಕವಾಗಬಹುದು.

ವಿಶ್ವದಾದ್ಯಂತ ಕಮ್ಯುನಿಸ್ಟ್ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದ (ಫೆಬ್ರುವರಿ 21) ದಿವಸವನ್ನು "ಕೆಂಪು ಪುಸ್ತಕ ದಿನ"ವಾಗಿ ಆಚರಿಸುವುದು ಬಳಕೆಯಲ್ಲಿದೆ. ಈ ವರ್ಷ ಏಂಗೆಲ್ಸ್ ಅವರ ದ್ವಿಶತಾಬ್ದಿ ವರ್ಷವಾಗಿರುವುದರಿಂದ "ಕಮ್ಯುನಿಸ್ಟ್ ಪ್ರಣಾಳಿಕೆ"ಯ ಪ್ರಮುಖ ಆಧಾರವಾಗಿದ್ದ "ಕಮ್ಯುನಿಸಂ ಅಂದರೇನು?" ಎಂಬ ಈ ಪುಸ್ತಕದ ಸಾರ್ವಜನಿಕ ಓದನ್ನು "ಕೆಂಪು ಪುಸ್ತಕ ದಿನ"ದ ಆಚರಣೆಗಾಗಿ ಆಯ್ದುಕೊಳ್ಳಲಾಗಿದೆ. ಈ ಪುಸ್ತಕವನ್ನು ಕರ್ನಾಟಕದಲ್ಲಿ ಹಮ್ಮಿಕೊಳ್ಳಲಾಗಿರುವ ಈ "ಕೆಂಪು ಪುಸ್ತಕ ದಿನ"ಕ್ಕೆ ವಿಶೇಷವಾಗಿ ತಯಾರಿಸಿ ಬಿಡುಗಡೆ ಮಾಡಲಾಗುತ್ತಿದೆ.

JANASHAKTHI KANNADA VARA PATRIKE February 22-28, 2021 Price: Rs. 10/- Date of Publication: 19 February 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

ರೈತರ ರೈಲ್ ರೋಕೋ ಮೋದಿ ಸರಕಾರಕ್ಕೆ ಎಚ್ಚರಿಕೆ–ಎಐಕೆಎಸ್

ಸಂಯುಕ್ತ ಕಿಸಾನ್ ಮೋರ್ಚಾ ನೀಡಿದ ಕರೆಗೆ ಫೆಬ್ರುವರಿ 18ರಂದು ಮಧ್ಯಾಹ್ನ 12ರಿಂದ ಸಂಜೆ 4 ಗಂಟೆಯ ವರೆಗಿನ ನಾಲ್ಕು ಗಂಟೆಗಳ ರೈಲ್ ರೋಕೋ ನಡೆಸುವಂತೆ ದೇಶಾದ್ಯಂತ ಬೃಹತ್ ಸ್ಪಂದನೆ ದೊರೆತಿದೆ. ಹರ್ಯಾಣ, ಪಂಜಾಬ್, ಉತ್ತರಪ್ರದೇಶ, ಉತ್ತರಾಖಂಡ ಮತ್ತು ರಾಜಸ್ಥಾನದಲ್ಲಿ ಮಹಿಳೆಯರು ಮತ್ತು ಮಕ್ಕಳು ಹಾಗೂ ಹಿರಿಯರು ದೊಡ್ಡ ಪ್ರಮಾಣದಲ್ಲಿ ಭಾಗವಹಿಸಿದ್ದು ಎದ್ದು ಕಾಣುತ್ತಿತ್ತು. ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಹೇಳಿದೆ.

ಇದುರೆಗೆ ಎಐಕೆಎಸ್ ಕೇಂದ್ರಕ್ಕೆ ಬಂದಿರುವ ವರದಿಗಳ ಪ್ರಕಾರ ಪಶ್ಚಿಮ ಬಂಗಾಲದಲ್ಲಿ 77 ನಿಲ್ದಾಣಗಳಲ್ಲಿ, ಝಾರ್ಖಂಡ್‌ನಲ್ಲಿ 65, ತೆಲಂಗಾಣದಲ್ಲಿ 55, ಒಡಿಶಾದಲ್ಲಿ 30, ಆಂಧ್ರಪ್ರದೇಶದಲ್ಲಿ 23, ರಾಜಸ್ಥಾನದಲ್ಲಿ 21, ಕರ್ನಾಟಕದಲ್ಲಿ 9, ಮಧ್ಯಪ್ರದೇಶದಲ್ಲಿ 11, ತ್ರಿಪುರಾ ಮತ್ತು ಮಹಾರಾಷ್ಟ್ರದಲ್ಲಿ 5 ನಿಲ್ದಾಣಗಳಲ್ಲಿ ರೈಲ್ ರೋಕೋ ನಡೆದಿದೆ. ಕೇರಳದಲ್ಲಿ ಎಲ್ಲ 14 ಜಿಲ್ಲೆಗಳಲ್ಲಿ ಕೇಂದ್ರ ಸರಕಾರದ ಕಚೇರಿಗಳ ಮುಂದೆ ಬೃಹತ್ ಮತಪ್ರದರ್ಶನಗಳು ನಡೆದಿವೆ.

ರೈಲ್ ರೋಕೋದ ಬೃಹತ್ ಯಶಸ್ಸು ಮೋದಿ ಸರಕಾರಕ್ಕೆ ಒಂದು ಎಚ್ಚರಿಕೆ, ರೈತರು ದೇಶಾದ್ಯಂತ ತಮ್ಮ ಬೇಡಿಕೆಗಳು ಈಡೇರುವ ವರೆಗೂ ಮುಂದುವರೆಸುವ ದೃಢ ಸಂಕಲ್ಪವನ್ನು ವ್ಯಕ್ತಪಡಿಸಿದ್ದಾರೆ ಎಂದಿರುವ ಎಐಕೆಎಸ್ ಮೊದಿ ಸರಕಾರಕ್ಕೆ ಕಾರ್ಮಿಕರು ಮತ್ತು ಇತರ ಎಲ್ಲ ಜನವಿಭಾಗಗಳು ಬೆಂಬಲಿಸುತ್ತಿರುವ ರೈತಾಪಿ ಜನಗಳ ಬೃಹತ್ ಹೋರಾಟದ ಎದುರು ಮಣಿಯುವುದಲ್ಲದೆ ಬೇರೆ ಆಯ್ಕೆ ಇಲ್ಲ ಎಂದು ಹೇಳಿದೆ.














ಕದನ ಕಣ : ದೆಹಲಿ ಗಡಿಗಳಲ್ಲಿ ರೈತರೊಂದಿಗೆ

ವರದಿ ಪುಟ 15 ಕ್ಕೆ




ಕಮ್ಯುನಿಸಂ ಅಂದರೇನು? – ಮೊದಲ ಕೆಂಪು ಪುಸ್ತಕ

(ಫೆ.21ರ 'ಕೆಂಪು ಪುಸ್ತಕದ ದಿನ'ದಂದು ಬಿಡುಗಡೆಯಾಗುವ ಪುಸ್ತಕದ ಬ್ಲರ್ಬಿನಿಂದ)

ಏಂಗೆಲ್ಸ್ ಬರೆದ "ಕಮ್ಯುನಿಸಂ ನ ತತ್ವಗಳು" (ಪ್ರಿನ್ಸಿಪಲ್ಸ್ ಆಫ್ ಕಮ್ಯುನಿಸಂ) ಕಮ್ಯುನಿಸಂ ನ ಕುರಿತು ವಿಚಾರಗಳ ಸರಳವಾದ ಮೊದಲ ಮಂಡನೆ ಎನ್ನಬಹುದು. ಇದರಲ್ಲಿ ಮಂಡಿಸಲಾಗಿದ್ದ ಪ್ರಮುಖ ವಿಚಾರಗಳನ್ನೇ ವಿಸ್ತರಿಸಿ ಸಮಗ್ರಗೊಳಿಸಿ ಮುಂದೆ ಮಾರ್ಕ್ಸ್–ಏಂಗೆಲ್ಸ್ ಜಂಟಿಯಾಗಿ "ಕಮ್ಯುನಿಸ್ಟ್ ಪ್ರಣಾಳಿಕೆ"ಯನ್ನು ರಚಿಸಿ ಪ್ರಕಟಿಸಿದರು. ಇದು ಕಮ್ಯುನಿಸ್ಟ್ ಅಥವಾ ಸಮತಾವಾದಿ ಸಾಮಾಜಿಕ–ಆರ್ಥಿಕ ವ್ಯವಸ್ಥೆಯ ಪ್ರಮುಖ ಅಂಶಗಳನ್ನು ಸರಳವಾಗಿ ವಿವರಿಸುವ ಪುಸ್ತಕವಾಗಿ ಇಂದಿಗೂ ಪ್ರಸ್ತುತವಾಗಿದೆ. ಆದ್ದರಿಂದ ಅದನ್ನು ಏಂಗೆಲ್ಸ್ ಅವರ ಜನ್ಮ ದ್ವಿಶತಾಬ್ದಿಯ ಸಂದರ್ಭದಲ್ಲಿ "ಕಮ್ಯುನಿಸಂ ಎಂದರೇನು?" ಎಂಬ ಹೆಸರಿನಲ್ಲಿ ಪ್ರಕಟಿಸಲಾಗುತ್ತಿದೆ.

ಈ ಪುಸ್ತಕ ಪ್ರಶ್ನೋತ್ತರ ರೂಪದಲ್ಲಿ ಇದ್ದು 25 ಪ್ರಶ್ನೆಗಳ ಉತ್ತರಗಳನ್ನು ಹೊಂದಿದೆ. ಮೊದಲ ಪ್ರಶ್ನೆಯೇ "ಕಮ್ಯುನಿಸಂ

ಪುಟ 15 ಕ್ಕೆ



JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**